ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 29 ಶನಿವಾರ 2022

ಸಂಪುಟ: 43 | ಸಂಚಿಕೆ: 192 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

'ಗಂಧದ ಗುಡಿ' ಅಪ್ಪಿದ ಅಪ್ಪು ಅಭಿಮಾನಿಗಳು

ಇಂದು ಡಾ. ಪುನೀತ್ ರಾಜ್‌ಕುಮಾರ್ ಪ್ರಥಮ ಪುಣ್ಯಸ್ಮರಣೆ

ಪ್ರತಿ ಸಂಭಾಷಣೆಯಲ್ಲೂ ಭಾವುಕತೆ, ಅಭಿನಯ ಕಂಡು ಅಭಿಮಾನಿಗಳ ಕಣ್ಣೀರು






ಮೈಸೂರು, ಅ. 28(ಆರ್‌ಕೆ)– ಇಂದು ಬಿಡುಗಡೆಯಾದ ಪವರ್‌ಸ್ಟಾರ್ ದಿವಂಗತ ಡಾ. ಪುನೀತ್ ರಾಜ್‌ಕುಮಾರ್ ಅವರ ಅಭಿನಯದ ಕಡೇ ಚಿತ್ರ 'ಗಂಧದ ಗುಡಿ'ಗೆ ಮೈಸೂರಲ್ಲಿ ಅಭೂತಪೂರ್ವ ಸ್ವಾಗತ ದೊರೆಯಿತು. ತಮ್ಮ ನೆಚ್ಚಿನ ಅಪ್ಪು ಅಗಲಿಕೆ ನಡುವೆ ಸಂಭ್ರಮದಿಂದ ಚಿತ್ರ ವೀಕ್ಷಿಸಿ, ಕೊನೆಗೆ ಕಣ್ಣೀರಿಟ್ಟರು.

ರಾಜ್ಯದ ಅರಣ್ಯ ಮತ್ತು ವನ್ಯಜೀವಿ ಸಂಪತ್ತನ್ನು ಪರಿಚಯಿಸುವ ಪಿಆರ್‌ಕೆ ಪ್ರೊಡಕ್ಷನ್ಸ್ ಬ್ಯಾನರ್‌ನಡಿ ಪ್ರಶಸ್ತಿ ವಿಜೇತ ಫಿಲಂ ಮೇಕರ್ ಜೆ.ಎಸ್. ಅಮೋಘವರ್ಷ ನಿರ್ದೇಶನದಲ್ಲಿ ಮೂಡಿಬಂದಿರುವ 'ಗಂಧದ ಗುಡಿ' ಸಾಕ್ಷ್ಯಚಿತ್ರ ಇಂದು ಮೈಸೂರಿನ ▶ 9ನೇ ಪುಟಕ್ಕೆ

ಕಾವೇರಿ, ಕೃಷ್ಣಾ ಕೊಳ್ಳದ ಕೈಗಾರಿಕೆಗಳಲ್ಲಿ ಶುದ್ಧೀಕರಣ ಘಟಕ ಸ್ಥಾಪನೆಗೆ ಕಟ್ಟಾದೇಶ

ತಪ್ಪಿದ್ದಲ್ಲಿ ಸಂಬಂಧಿಸಿದ ಕೈಗಾರಿಕೆ ಬಂದ್ ಮಾಡಿಸಿ

- ಪರಿಸರ ಮಂಡಳಿ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಎಚ್ಚರಿಕೆ
- ಕಾವೇರಿ, ಕೃಷ್ಣಾ ಕೊಳ್ಳ ಕಲುಷಿತಗೊಳ್ಳಲು ಅಧಿಕಾರಿಗಳೇ ಹೊಣೆ: ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಕಿಡಿಕಿಡಿ





ಬೆಂಗಳೂರು, ಅ.28(ಕೆಎಂಶಿ)–ಕಾವೇರಿ ಕೃಷ್ಣ ಕೊಳ್ಳ ಕಲುಷಿತಗೊಳ್ಳಲು ಅಧಿಕಾರಿಗಳೇ ಹೊಣೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಕಿಡಿಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಿದ್ದರೆ, ನದಿಗಳಿಗೆ ಕಲುಷಿತ ನೀರು ಹರಿಯುತ್ತಿರಲಿಲ್ಲ. ಕೆಲವು ಕೈಗಾರಿಕೆಗಳು ತಮ್ಮ ಜವಾಬ್ದಾರಿ ಮರೆತು ರಾಸಾಯನಿಕ ಮಿಶ್ರಿತ ನೀರನ್ನು ನದಿ ಪಾತ್ರಗಳಿಗೆ ಹರಿಯಬಿಟ್ಟು ಜನರ ಜೀವದೊಂದಿಗೆ ಚೆಲ್ಲಾಟ ಆಡುತ್ತಿದ್ದಾರೆ. ಇದರ ಜೊತೆಗೆ ನಗರ ಸ್ಥಳೀಯ ಸಂಸ್ಥೆಗಳು ಸಮರ್ಪಕವಾಗಿ ತ್ಯಾಜ್ಯ ನಿರ್ವಹಣೆ ಮಾಡದೇ ಇಂತಹ ಸ್ಥಿತಿ ನಿರ್ಮಾಣವಾಗಿದೆ ಎಂದರು. ಇವರ ಅಸಡ್ಡೆಯಿಂದ ಜನ– ▶ 9ನೇ ಪುಟಕ್ಕೆ

ಕೃಷಿ ಇಲಾಖೆ ಸಿಬ್ಬಂದಿ ಮನೆ ಬೀಗ ಒಡೆದು ಚಿನ್ನಾಭರಣ ಕಳವು

ಪಿರಿಯಾಪಟ್ಟಣ, ಅ. 28– ಕೃಷಿ ಇಲಾಖೆಯ ಎಫ್‌ಡಿಸಿ ಮನೆ ಬೀಗ ಒಡೆದು 2.45 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಇಲ್ಲಿನ ಕೃಷಿ ಇಲಾಖೆಯಲ್ಲಿ ಎಫ್‌ಡಿಸಿಯಾಗಿರುವ ಹೆಚ್.ಡಿ. ನಾಗೇಶ್(42) ಅವರು ಪಿರಿಯಾಪಟ್ಟಣದ ತಾಲೂಕು ಕಚೇರಿ ಹಿಂಭಾಗದ ಮನೆಯಲ್ಲಿ ವಾಸವಿದ್ದು, ಅಕ್ಟೋಬರ್ 23ರಂದು ಮನೆ ಬೀಗ ಹಾಕಿಕೊಂಡು ಸ್ವಗ್ರಾಮವಾದ ತಿ.ನರಸೀಪುರ ತಾಲೂಕು ಹಿರಿಯೂರಿಗೆ ತೆರಳಿದ್ದಾರೆ. ಅ. 27ರಂದು ಬೆಳಗ್ಗೆ ಅವರು ಹಿಂತಿರುಗಿದಾಗ ಮನೆ ಬೀಗ ಒಡೆದು ಮನೆಯ ಬೀರುವಿನಲ್ಲಿದ್ದ 2.45 ಲಕ್ಷ ರೂ. ಮೌಲ್ಯದ 63 ಗ್ರಾಂ ತೂಕದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಪಿರಿಯಾಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಆನ್‌ಲೈನ್ ಶಾಪಿಂಗ್ ಕಂಪನಿ ಹೆಸರಲ್ಲಿ ಗೃಹಿಣಿಗೆ 4.18 ಲಕ್ಷ ವಂಚನೆ

ಮಂಡ್ಯ, ಅ. 28– ಆನ್‌ಲೈನ್ ಶಾಪಿಂಗ್ ಕಂಪನಿಯಿಂದ 7.5 ಲಕ್ಷ ರೂ. ಬಹುಮಾನ ಬಂದಿದೆ ಎಂದು ಕೂಪನ್ ರವಾನಿಸಿ ಗೃಹಿಣಿಗೆ ಆನ್‌ಲೈನ್ ಮೂಲಕ 4.18 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮದ್ದೂರು ತಾಲೂಕು ಬಿದರಕೋಟೆ ಗ್ರಾಮದ ಗೃಹಿಣಿ ಬಿ.ಎಸ್. ಸರ್ವಮಂಗಳ (30) ವಂಚನೆಗೊಳಗಾದವರಾಗಿದ್ದು, ಇವರಿಗೆ ಸೆಪ್ಟೆಂಬರ್ 1ರಂದು ಸ್ಪೀಡ್‌ಪೋಸ್ಟ್ ಮೂಲಕ ನ್ಯಾಪ್‌ಟಾಲ್ ಆನ್‌ಲೈನ್ ಶಾಪಿಂಗ್‌ನ ಕೂಪನ್ ರವಾನಿಸಲಾಗಿದೆ. ಅವರು ಅದನ್ನು ಸ್ಕ್ರ್ಯಾಚ್ ಮಾಡಿದಾಗ 7.5 ಲಕ್ಷ ರೂ. ಬಹುಮಾನ ಬಂದಿರುವುದಾಗಿ ಅದರಲ್ಲಿ ನಮೂದಿಸಲಾಗಿತ್ತು. ಕೂಪನ್‌ನಲ್ಲಿದ್ದ ಮೊಬೈಲ್ ಸಂಖ್ಯೆಯನ್ನು ಸರ್ವಮಂಗಳ ಸಂಪರ್ಕಿಸಿದಾಗ ಮಾತನಾಡಿದ ವಂಚಕ, ಅವರ ಆಧಾರ್, ಪಾನ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್‌ನ ಫೋಟೋಗಳನ್ನು ವಾಟ್ಸಾಪ್ ಮೂಲಕ ಪಡೆದಿದ್ದಾನೆ. ಮೊದಲಿಗೆ ಬಹುಮಾನ ಪಡೆಯಲು 7500 ರೂ. ವರ್ಗಾವಣೆ ಮಾಡಬೇಕೆಂದು ಹೇಳಿದ ಆತ, ಹಂತ ಹಂತವಾಗಿ ಅಕ್ಟೋಬರ್ 15ರವರೆಗೆ ವಿವಿಧ ಶುಲ್ಕವೆಂದು ತಿಳಿಸಿ ಒಟ್ಟು 4,18,999 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಮತ್ತೆ ಆತ ಹಣ ವರ್ಗಾವಣೆ ಮಾಡುವಂತೆ ಹೇಳಿದಾಗ ಸಂಶಯಗೊಂಡ ಸರ್ವಮಂಗಳ ಅವರು, ಮಂಡ್ಯ ಜಿಲ್ಲೆ ಸೆನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಗಾಂಜಾ ಮಾರಾಟ: ಮೂವರಿಗೆ ಐದು ವರ್ಷ ಜೈಲು ಶಿಕ್ಷೆ

ಮೈಸೂರು, ಅ. 28– ಗಾಂಜಾ ಮಾರಾಟ ಮಾಡುತ್ತಿದ್ದ ಮೂವರಿಗೆ 5 ವರ್ಷ ಜೈಲು ಶಿಕ್ಷೆ ಹಾಗೂ ತಲಾ 10 ಸಾವಿರ ರೂ. ದಂಡ ವಿಧಿಸಿ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಲ್. ರಂಗನಾಥ ಅವರು ತೀರ್ಪು ನೀಡಿದ್ದಾರೆ. ಮಂಡಿ ಮೊಹಲ್ಲಾದ ಇರ್ಫಾನ್ ಪಾಷ(33), ಅತೀಕ್ ಪಾಷ(26) ಮತ್ತು ಅಸ್ರತ್ ಪಾಷ(32) ಶಿಕ್ಷೆಗೊಳಗಾದವರಾಗಿದ್ದು, ಮಂಡಿಮೊಹಲ್ಲಾ ಎಂಕೆಡಿಕೆ ರಸ್ತೆ 5ನೇ ಕ್ರಾಸ್‌ನಲ್ಲಿರುವ ಇರ್ಫಾನ್ ಪಾಷ ಮನೆಯಲ್ಲಿ ಗಾಂಜಾ ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ 2017ರ ಮೇ 25ರಂದು ಮೈಸೂರು ವಲಯ–1ರ ಅಂದಿನ ಅಬಕಾರಿ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ವಸಂತ ಮತ್ತು ಸಿಬ್ಬಂದಿ ದಾಳಿ ನಡೆಸಿದ್ದರು. ಈ ವೇಳೆ 11.300 ಕೆಜಿ ಗಾಂಜಾ ಪತ್ತೆಯಾಗಿದ್ದು, ಅದನ್ನು ಇರ್ಫಾನ್ ಪಾಷ, ಅತೀಕ್ ಪಾಷ ಮತ್ತು ಅಸ್ರತ್ ಪಾಷ ಅವರು ಸಣ್ಣ ಸಣ್ಣ ಪ್ಯಾಕ್ ಮಾಡುತ್ತಿದ್ದರು. ಇವರು ಗಾಂಜಾವನ್ನು ವ್ಯವಸ್ಥಿತವಾಗಿ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆ ವೇಳೆ ತಿಳಿದು ಬಂದಿತ್ತು. ಮೂವರನ್ನೂ ಬಂಧಿಸಿದ ಅಬಕಾರಿ ಸಬ್‌ಇನ್ಸ್‌ಪೆಕ್ಟರ್ ವಸಂತ, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಅ. 28ರಂದು ಮೂವರಿಗೂ ಶಿಕ್ಷೆ ವಿಧಿಸಿ, ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಹೆಚ್.ಇ. ಚಿನ್ನಪ್ಪ ವಾದ ಮಂಡಿಸಿದ್ದರು.


ಕಟ್ಟಡದ ಮೇಲಿಂದ ಬಿದ್ದು ಕಾರ್ಮಿಕ ಸಾವು

ಮೈಸೂರು, ಅ.28–ನಿರ್ಮಾಣ ಹಂತದ ಕಟ್ಟಡದ ಮೇಲೆ ನಿಂತು ನೀರು ಹಾಕುತ್ತಿದ್ದಾಗ ಆಯತಪ್ಪಿ ಬಿದ್ದು ಕಾರ್ಮಿಕ ಸಾವನ್ನಪ್ಪಿದ ಘಟನೆ ಮೈಸೂರಿನ ಗುಡ್‌ಶಫರ್ಡ್ ಕಾನ್ವೆಂಟ್ ಆವರಣದಲ್ಲಿ ಸಂಭವಿಸಿದೆ. ಯಾದಗಿರಿ ಜಿಲ್ಲೆ ಸುರಪುರ ತಾಲೂಕು ಗುಲ್ಬಾಲ್ ಗ್ರಾಮದ ಕಾರ್ಮಿಕ ಯೆಂಕಣ್ಣ(60) ಮೃತಪಟ್ಟವನಾಗಿದ್ದು, ಈತ ಮತ್ತು ಕೆಲ ಸಂಬಂಧಿಕರು ಮೈಸೂರಿಗೆ ಆಗಮಿಸಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಇವರಿಗೆ ಗುತ್ತಿಗೆದಾರ ರಿಚರ್ಡ್ ಸುಸೈರಾಜ್ ಎಂಬುವರು ಕಾನ್ವೆಂಟ್ ಆವರಣದಲ್ಲೇ ವಾಸಕ್ಕೆ ಶೆಡ್ ನಿರ್ಮಿಸಿಕೊಟ್ಟಿದ್ದರು. ಅ.24ರಂದು ಬೆಳಗ್ಗೆ ಯೆಂಕಣ್ಣ, ಕಾನ್ವೆಂಟ್ ಆವರಣದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಕಟ್ಟಡದ 2ನೇ ಮಹಡಿಯಲ್ಲಿ ನೀರು ಹಾಕುತ್ತಿದ್ದಾಗ ಆಯತಪ್ಪಿ ಬಿದ್ದು, ತೀವ್ರವಾಗಿ ಗಾಯಗೊಂಡಿದ್ದಾನೆ. ಆತನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್‌ನಿಂದ ಬಿದ್ದು ಗಾಯಗೊಂಡಿದ್ದ ವೃದ್ಧ ಸಾವು

ಮೈಸೂರು, ಅ.28–ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ನಿಯಂತ್ರಣ ತಪ್ಪಿ ಬಿದ್ದು ಗಾಯಗೊಂಡಿದ್ದ ವೃದ್ಧರೊಬ್ಬರು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿ ಎಂ.ವಿ.ಪ್ರಭಾಕರ್(73) ಎಂಬುವರು ಅ.23ರಂದು ಸಂಜೆ ಹೆಬ್ಬಾಳ್‌ನಲ್ಲಿ ಫಿಜಿಯೋಥೆರಪಿ ಮಾಡಿಸಿಕೊಂಡು ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ (ಕೆಎ 09 ಇಆರ್ 0537) ಬರುತ್ತಿದ್ದಾಗ ಸಿಐಟಿಬಿ ರಸ್ತೆಯ ಹಾಲಿನ ಬೂತ್ ಬಳಿ ನಿಯಂತ್ರಣ ತಪ್ಪಿ ಬಿದ್ದು ತೀವ್ರವಾಗಿ ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ದಾಖಲಾಗಿದ್ದ ಅವರು, ಚಿಕಿತ್ಸೆ ಫಲಕಾರಿಯಾಗದೇ ಅ.26ರಂದು ಬೆಳಗ್ಗೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರಿನ ಚಾಮುಂಡೇಶ್ವರಿ ಬೆಟ್ಟದ ಪ್ರಧಾನ ಅರ್ಚಕರಾದ ಡಾ. ಶಶಿಶೇಖರ್ ದೀಕ್ಷಿತ್ ಅವರ ಹುಟ್ಟು ಹಬ್ಬದ ಅಂಗವಾಗಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಸಿಂಡಿಕೇಟ್ ಸದಸ್ಯ ಲಯನ್ ಎನ್.ಕೃಷ್ಣೇಗೌಡ, ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಎಂ,ಇ.ಚೇತನ್ ಇದ್ದಾರೆ.

ನಿವೃತ್ತ ಡಿವೈಎಸ್ಪಿ ನಂಜುಂಡೇಗೌಡ ನಿಧನ

ಮೈಸೂರು, ಅ. 28– ನಿವೃತ್ತ ಡಿವೈಎಸ್ಪಿ, ಪೊಲೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಮಾಜಿ ಅಧ್ಯಕ್ಷರು ಹಾಗೂ ನೇತಾಜಿ ನಗರದ ನಿವಾಸಿ ನಂಜುಂಡೇಗೌಡ(86) ಶುಕ್ರವಾರ ತಮ್ಮ ನಿವಾಸದಲ್ಲಿ ನಿಧನರಾದರು.



ಮೃತರು ಮೂವರು ಪುತ್ರರು (ಟಿ.ಎನ್. ನಾಗೇಶ್, ಟಿ.ಎನ್. ಶಿವಶಂಕರ್ ಮತ್ತು ಟಿ.ಎನ್.ಶಶಿಕುಮಾರ್), ಓರ್ವ ಪುತ್ರಿ ಟಿ.ಎನ್.ಸವಿತಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಪೊಲೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಸುಮಾರು 22 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ತಮ್ಮ ಅಧಿಕಾರ ಅವಧಿಯಲ್ಲಿ ಪೊಲೀಸ್, ಸೇನಾ, ಅಗ್ನಿಶಾಮಕ ದಳ, ತುರ್ತು ಸೇವೆಗಳ ಸಿಬ್ಬಂದಿ ಹಾಗೂ ಇನ್ನಿತರ ಸರ್ಕಾರಿ ನೌಕರರಿಗೆ ಬಡಾವಣೆ ಅಭಿವೃದ್ಧಿಪಡಿಸಿ 4,100ಕ್ಕೂ ಹೆಚ್ಚು ನಿವೇಶನಗಳನ್ನು ಹಂಚಿದ್ದಾರೆ. ಪಾರ್ಥಿವ ಶರೀರವನ್ನು ಸಂಜೆ 5 ಗಂಟೆಯವರೆಗೆ ಮೃತರ ನಿವಾಸದಲ್ಲೇ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ನಂತರ ಸ್ವಗ್ರಾಮ ಮಂಡ್ಯ ಜಿಲ್ಲೆಯ ತರೀಕೆರೆಗೆ ತೆಗೆದುಕೊಂಡು ಹೋಗಲಾಗುವುದು ಅಂತ್ಯಕ್ರಿಯೆ ನಾಳೆ (ಶನಿವಾರ) ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನ ಕೊಪ್ಪ ಹೋಬಳಿಯ ತರೀಕೆರೆ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯದ ದಶ ದಿಕ್ಕುಗಳಲ್ಲೂ ಮೊಳಗಿದ ನಾಡು–ನುಡಿ, ಹಿರಿಮೆ–ಗರಿಮೆ ಬಿಂಬಿಸುವ ಕನ್ನಡಿಗನ ಕೋಟಿ ಕಂಠ ಗಾಯನ...

- ವಿಧಾನಸೌಧದ ಮುಂದೆ ನಾಡದೊರೆ ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದಲ್ಲಿ
- ಒಂದೂವರೆ ಕೋಟಿಗೂ ಅಧಿಕ ಮಂದಿಯ ಕಂಠಸಿರಿಯಲ್ಲಿ ಹರಿದ ಕನ್ನಡ ಗಾನಲಹರಿ





ಬೆಂಗಳೂರು, ಅ.28(ಕೆಎಂಶಿ)–ಕನ್ನಡ ನಾಡು–ನುಡಿಯ ಹಿರಿಮೆ–ಗರಿಮೆಯನ್ನು ಸಾರುವ ಕನ್ನಡದ ಹಾಡುಗಳು ರಾಜ್ಯದ ದಶದಿಕ್ಕುಗಳಲ್ಲೂ ಮೊಳಗಿತು.

ಕನ್ನಡ ರಾಜ್ಯೋತ್ಸವ ಪ್ರಯುಕ್ತ ರಾಜ್ಯದ ವಿವಿಧ ಭಾಗಗಳಲ್ಲಿ ಸರ್ಕಾರ ಆಯೋಜಿಸಿದ್ದ, ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಒಂದು ಕೋಟಿಗೂ ಹೆಚ್ಚು ಜನ ಏಕ ಕಂಠದಲ್ಲಿ ಆಯ್ದ ಆರು ಕನ್ನಡ ಗೀತೆಗಳನ್ನು ಹಾಡುವ ಮೂಲಕ ನಾಡು ನುಡಿಯ ಕಂಪು ಎಲ್ಲೆಡೆ ಪಸರಿಸಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕನ್ನಡ ಸಂಸ್ಕೃತಿ ಸಚಿವ ಸುನೀಲ್ ಕುಮಾರ್ ರಾಜಧಾನಿಯಲ್ಲೂ ಅವರ ಸಂಪುಟದ ಸಹೋದ್ಯೋಗಿಗಳು ಜಿಲ್ಲಾ ಕೇಂದ್ರಗಳಲ್ಲಿ ಕೋಟಿ ಕಂಠ ಗಾಯನದಲ್ಲಿ ಪಾಲ್ಗೊಂಡು ಕನ್ನಡ ನಾಡು ನುಡಿಯ ಹಿರಿಮೆ ಗರಿಮೆಯನ್ನು ಏಕಕಾಲದಲ್ಲಿ ಮೊಳಗಿಸಿದರು.

ರಾಜ್ಯದ ಬಹುತೇಕ ಎಲ್ಲಾ ಗ್ರಾಮಗಳಲ್ಲೂ ಕನ್ನಡದ ಹಾಡುಗಳ ಗಾಯನ ನಡೆದಿದ್ದು, ಕನ್ನಡದ ಸಂಸ್ಕೃತಿ, ಪರಂಪರೆ ಮತ್ತಷ್ಟು ಎತ್ತರಕ್ಕೆ ಏರಿದಂತಾಯಿತು. ಗಡಿನಾಡು, ಹೊರದೇಶ, ಹೊರ ರಾಜ್ಯಗಳು ಸೇರಿದಂತೆ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಸಾರ್ವಜನಿಕರು ಈ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ'ಯೊಂದಿಗೆ ಆರಂಭವಾಗಿ ಹುಯಿಲಗೋಳ ನಾರಾಯಣರಾವ್ ವಿರಚಿತ 'ಉದಯವಾಗಲಿ ನಮ್ಮ ಚಲುವ ಕನ್ನಡನಾಡು', ಡಾ. ಚೆನ್ನವೀರ ಕಣವಿ ಅವರ 'ವಿಶ್ವ ವಿನೂತನ ವಿದ್ಯಾಚೇತನ', ಕುವೆಂಪುರವರ 'ಬಾರಿಸು ಕನ್ನಡ ಡಿಂಡಿಮವ', ಡಾ. ಡಿ.ಎಸ್. ಕರ್ಕಿ ಅವರ 'ಹಚ್ಚೇವು ಕನ್ನಡ ದೀಪ' ಹಾಗೂ ಡಾ. ಹಂಸಲೇಖ ಅವರ 'ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು' ಹೀಗೆ ಆರು ಗೀತೆಗಳನ್ನು ಈ ಸಂದರ್ಭದಲ್ಲಿ ಹಾಡಲಾಯಿತು.

ಗಾಯನದ ನಂತರ ಕನ್ನಡನಾಡಿನ ಪ್ರಜೆಯಾಗಿ ನಾನು ನನ್ನ ನಾಡು ನುಡಿಗಳನ್ನು ಪ್ರೀತಿಸುತ್ತೇನೆ ಹಾಗೂ ಗೌರವಿಸುತ್ತೇನೆ. ನಾನು ಕನ್ನಡದಲ್ಲೇ ಮಾತನಾಡುತ್ತೇನೆ. ಕನ್ನಡದಲ್ಲೇ ಬರೆಯುತ್ತೇನೆ, ಕನ್ನಡವನ್ನೇ ಬಳಸುತ್ತೇನೆ ಎಂಬ ಪಣ ತೊಡುತ್ತೇನೆ. ಕನ್ನಡ ನಾಡು–ನುಡಿ, ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಲು ಕಟಿಬದ್ಧನಾಗಿರುತ್ತೇನೆ. ಕನ್ನಡ ನಾಡಿನಲ್ಲಿರುವ ಕನ್ನಡೇತರ ಬಂಧುಗಳಿಗೆ ಕನ್ನಡ ಕಲಿಸುತ್ತೇನೆ ಎಂದು ಸಂಕಲ್ಪ ತೊಡುತ್ತೇನೆ ಎಂಬ ಪ್ರತಿಜ್ಞಾವಿಧಿಯನ್ನು ಎಲ್ಲರೂ ಸ್ವೀಕರಿಸಿದರು. ಸಚಿವ ಸುನಿಲ್ ಕುಮಾರ್ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಬೆಂಗಳೂರಿನ ವಿಧಾನಸೌಧದ ಮೆಟ್ಟಿಲು, ಗಾಂಧಿ ಪ್ರತಿಮೆ, ಹೈಕೋರ್ಟ್, ಎಲ್ಲ ಜಿಲ್ಲೆಗಳಲ್ಲಿ ವಿಮಾನ, ರೈಲು, ಬಸ್ ನಿಲ್ದಾಣ, ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳು, ಸಾರ್ವಜನಿಕ ಸ್ಥಳಗಳಲ್ಲಿ, ಐತಿಹಾಸಿಕ ಹಾಗೂ ಪ್ರವಾಸಿ ಸ್ಥಳಗಳಲ್ಲೂ ಈ ಗಾಯನ ನಡೆಯಿತು.ಈ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಕನ್ನಡದ ಕಂಪನ್ನು ಪಸರಿಸಲು ಒಂದು ಕೋಟಿ 15 ಲಕ್ಷ ಜನ ನೋಂದಣಿ ಮಾಡಿಕೊಂಡಿದ್ದರು.

45 ದೇಶಗಳ 26 ರಾಜ್ಯಗಳ ಜನರು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಇಂದು ತಾವಿರುವೆಡೆಯಲ್ಲೇ ಕನ್ನಡದ ಹಾಡುಗಳನ್ನು ಹಾಡಿದುದು ವಿಶೇಷವಾಗಿತ್ತು. ಕಂಠೀರವ ಕ್ರೀಡಾಂಗಣದಲ್ಲಿ ಪ್ರಧಾನ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕನ್ನಡದ ಹಾಡುಗಳಿಗೆ ದನಿಯಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಾಗೂ ಸರ್ಕಾರದ ಸಚಿವರುಗಳು ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮೇಲೆ ನಡೆದ ಕಾರ್ಯಕ್ರಮದಲ್ಲೂ ಭಾಗಿಯಾಗಿ ಕನ್ನಡದ ಹಾಡುಗಳನ್ನು ಹಾಡಿ ಸಂತಸಪಟ್ಟರು.

ರಾಜ್ಯೋತ್ಸವದ ಅಂಗವಾಗಿ ಇಂದು ನಡೆದ ಕೋಟಿ ಕಂಠ ಗಾಯನ ಬಾನಂಯಾನದಲ್ಲೂ ಮೊಳಗಿದ್ದು, ಬೆಂಗಳೂರಿನಿಂದ ಗ್ವಾಲಿಯರ್‌ಗೆ ತೆರಳಿದ ಸ್ಪೈಸ್ ಜೆಟ್ ವಿಮಾನದ ಪೈಲಟ್ ಹಾಗೂ ಪ್ರಯಾಣಿಕರು ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಎಂದು ಹಾಡನ್ನು ಹಾಡಿದರು.


ವಿಮಾನದ ಪೈಲಟ್ ಕರ್ನಾಟಕ ಸರ್ಕಾರ ಕನ್ನಡ ರಾಜ್ಯೋತ್ಸವದ ಅಂಗವಾಗಿ ಇಂದು ಕನ್ನಡ ಹಾಡುಗಳ ಕೋಟಿ ಕಂಠ ಗಾಯನವನ್ನು ಆಯೋಜಿಸಿದೆ. ಈ ಅಭಿಯಾನದ ಭಾಗವಾಗಿ ನಾವೆಲ್ಲರೂ ಇಂದು ಕನ್ನಡದ ಹಾಡನ್ನು ಹಾಡೋಣ ಎಂದು ಹೇಳಿ ಪ್ರಯಾಣಿಕರು ಹಾಗೂ ವಿಮಾನ ಸಿಬ್ಬಂದಿಗಳ ಜತೆ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಹಾಡುಗಳನ್ನು ಹಾಡಿ ಎಲ್ಲರೂ ಸಂಭ್ರಮಿಸಿದ ಚಿತ್ರಣ ವೈರಲ್ ಆಯಿತು.

ಕರ್ನಾಟಕವನ್ನು ದೇಶದಲ್ಲೇ ನಂ.1 ರಾಜ್ಯ ಮಾಡುವ ಸಂಕಲ್ಪ: ಮುಖ್ಯಮಂತ್ರಿ

ಬೆಂಗಳೂರು, ಅ.28(ಕೆಎಂಶಿ)–ಕರ್ನಾಟಕವನ್ನು ನಂಬರ್ ಒನ್ ರಾಜ್ಯ ಮಾಡುವ ಸಂಕಲ್ಪ ತಮ್ಮದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಕೋಟಿ ಕಂಠ ಗಾಯನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕರ್ನಾಟಕ ಅತ್ಯಂತ ಸಮೃದ್ಧ ನಾಡು, ಪ್ರಾಕೃತಿಕವಾಗಿಯೂ ಸಾಕಷ್ಟು ಸಂಪದ್ಭರಿತ ನಾಡು, ಈ ನಾಡನ್ನು ಇಡೀ ದೇಶದಲ್ಲಿ ಅಭಿವೃದ್ಧಿಯಲ್ಲಿ ಮೊದಲ ರಾಜ್ಯವನ್ನಾಗಿ ಮಾಡಲು ಸಂಕಲ್ಪ ತೊಟ್ಟಿದ್ದೇನೆ. ಕನ್ನಡ ನಾಡು ಎಲ್ಲದರಲ್ಲೂ ಮುಂದಿದೆ ಎನ್ನುವುದನ್ನು ನಾವು ತೋರಿಸಬಹುದು ಎಂದರು.

ಕಂಠೀರವ ಕ್ರೀಡಾಂಗಣದಲ್ಲಿಂದು ಕನ್ನಡ ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕೋಟಿ ಕಂಠ ಗಾಯನಕ್ಕೆ ಚಾಲನೆ ನೀಡಿ ಆರು ಹಾಡುಗಳಿಗೆ ದನಿಯಾದ ನಂತರ



ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರವರು, ಕೋಟಿ ಕಂಠ ಗಾಯನಕ್ಕಾಗಿ ಇಡೀ ಕರ್ನಾಟಕದಲ್ಲಿಂದು ಶಾಲಾ ಮಕ್ಕಳು, ಯುವಕರು, ಯುವತಿಯರು, ರೈತರು, ಕಾರ್ಮಿಕರು, ಕಲಾವಿದರು ಹೀಗೆ ಎಲ್ಲರೂ ಒಂದಾಗಿ ಕೋಟಿ ಕಂಠದಿಂದ ಆರು ಕನ್ನಡದ ಹಾಡನ್ನು ಹಾಡುವ ಮೂಲಕ ಕನ್ನಡಕ್ಕಾಗಿ ನಾವೆಲ್ಲ ಒಂದು ಎಂದು ಸಾರಿ ಸಾರಿ ಹೇಳಿರುವ ಅಮೃತ ಘಳಿಗೆಯಲ್ಲಿ ನಾವೆಲ್ಲ ಭಾಗಿಯಾಗಿದ್ದೇವೆ ಎಂದರು

ಈ ಗಾಯನದ ಮೂಲಕ ಕನ್ನಡ ಡಿಂಡಿಮವ ಬಾರಿಸಿ ಹುಟ್ಟಿದರೆ ಕನ್ನಡ ನಾಡಲ್ಲೇ ಹುಟ್ಟಬೇಕು ಎಂಬ ಬದ್ಧತೆಯನ್ನು ತೋರಿಸಿದ್ದೇವೆ. ನವಂಬರ್ ಒಂದರಂದು ಸಂಭ್ರಮದಿಂದ ಕನ್ನಡ ರಾಜ್ಯೋತ್ಸವ ಹಾಗೂ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್‌ರವರಿಗೆ ಕನ್ನಡ ರತ್ನ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಇದರಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಕರೆ ನೀಡಿದರು. ಕೋಟಿ ಕಂಠ ಗಾಯನ ಮಾಡಿ ನಾವು ವಿಶ್ವ ದಾಖಲೆ ಮಾಡಿದ್ದೇವೆ. ವಿಧಾನಸೌಧದ ಮೆಟ್ಟಿಲುಗಳ ಮೇಲೆ ಈ ಕಾರ್ಯಕ್ರಮ ಮಾಡುತ್ತಿರುವುದು ವಿಶೇಷ, ಶಕ್ತಿಸೌಧದ ಮೂಲಕ ನಾಡಿನ ಎಲ್ಲ ಭಾಗಕ್ಕೂ ಕನ್ನಡದ ಕಂಪು ಪಸರಿಸಲಿ ಎಂದು ಈ ಕಾರ್ಯಕ್ರಮ ಮಾಡಿದ್ದೇವೆ ಎಂದರು.

ದಸರಾ ವಸ್ತು ಪ್ರದರ್ಶನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ



ಮೈಸೂರು, ಅ.28(ಎಸ್‌ಬಿಡಿ)– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಇಂದಿನಿಂದ ಸಾಂಸ್ಕೃತಿಕ ಕಾರ್ಯಕ್ರಮ ಮುದ ನೀಡಲಿದೆ. ವಸ್ತು ಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಗಾನಮಂಟಪದ ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು 'ಸಾಂಸ್ಕೃತಿಕ ಕಾರ್ಯಕ್ರಮ'ಗಳಿಗೆ ಗುರುವಾರ ಚಾಲನೆ ನೀಡಿದರು. ಇದೇ ವೇಳೆ ಅ.29ರಂದು ಆಯೋಜಿಸಿರುವ 'ಪುನೀತ ನಮನ' ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿ, ಶುಭ ಹಾರೈಸಿದರು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮತ್ತಿತರರು ಉಪಸ್ಥಿತರಿದ್ದರು. ಮೊದಲ ದಿನವಾದ ಇಂದು ಕೆ.ಆರ್.ನಗರದ ಗೋವಿಂದರಾಜು ಅವರು ನಾದಸ್ವರ ಹಾಗೂ ಆಕಾಶವಾಣಿ ಕಲಾವಿದರಾದ ರಾಜೇಶ್ ಪಡಿಕ್ಕರ್ ಹಾಗೂ ತಂಡದ ಕಲಾವಿದರು 'ಕನ್ನಡವೇ ಸತ್ಯ' ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಆತ್ಮಾರಾಂ ನಾಯಕ್ ತಬಲ, ವಿನಯ್ ರಂಗದೊಳ್ ರಿದಂ, ಗಣೇಶ್ ಭಟ್ ಕೀಬೋರ್ಡ್, ಪ್ರದೀಪ್ ಬೇಸ್ ಗಿಟಾರ್ ಸಹಕಾರ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.10.2022 ಶನಿವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ಥೀ, ನಕ್ಷತ್ರ : ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು –ರಚನೆ ಮತ್ತು ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ಎನ್. ಅಪರ್ಣ, 10.00 ಹೆಚ್.ಎಸ್. ಮಹಾಲಕ್ಷ್ಮಿ ಅವರ ನಿರ್ದೇಶನದಲ್ಲಿ ಮೈಸೂರು ಸದಾಶಿವರಾಯರ ರಚನೆಗಳು

ಮಧ್ಯಾಹ್ನ: 12.30 ದೇವರನಾಮ–ಮಂಗಳ, ಪಿ.ಎಸ್. ರಂಜನಿ, 12.45 ಜನಪದಸಂಗೀತ–ಸ್ವಾಮಿ ಮತ್ತು ತಂಡ, 1.20 ಭಾವಗೀತೆ–ಕೆ.ಪಿ. ರೇವತಿ, ಎಸ್. ಪ್ರವೀಣ್, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ, 4.00 ನಾಟಕ, 4.30 ನೆನಪಿನಂಗಳ–"ನನ್ನ ಬದುಕು" ಜೀವನ ಮೌಲ್ಯಗಳನ್ನು ಕುರಿತ ತ.ರಾ. ಸುಬ್ಬರಾಯರ ಮಾತುಗಳು, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.00 ಕನಕ ಗಾನಾಮೃತ –ಕನಕದಾಸರ ಪದಗಳನ್ನಾಧರಿಸಿದ ಬಾನುಲಿ ಸರಣಿ, ಲೇಖನ–ಡಾ. ಶ್ರೀಧರ ಹೆಗಡೆ ಭದ್ರನ್, ನಿರ್ಮಾಣ– ದಿವಾಕರ ಹೆಗಡೆ, 9.15 ಹಬ್ಬಗಳು ನಮ್ಮ ಸಂಪತ್ತು–ಮಾತನಾಡುತ್ತಾರೆ ಡಾ.ವಿಜಯಲಕ್ಷ್ಮಿ ಮನಾಪುರ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ತುಷಾರ್ ದತ್ತ –ಗಾಯನ, 10.30 ಸವಿನೆನಪು

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ

■ **ಪದವಿಪೂರ್ವ ಶಿಕ್ಷಣ ಇಲಾಖೆ, ಎಂಎಂಕೆ ಮತ್ತು ಎಸ್‌ಡಿಎಂ ಬಾಲಕಿಯರ ಪದವಿಪೂರ್ವ ಕಾಲೇಜು :** ಜಿಲ್ಲಾ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಭಾರ ಉಪನಿರ್ದೇಶಕರಾದ ಎಂ.ಪಿ. ನಾಗಮ್ಮ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ನಯನಕುಮಾರಿ, ಗೌರವ ಅತಿಥಿಗಳು : ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಬೆಳಗ್ಗೆ 9ಕ್ಕೆ.

■ **ಶ್ರೀ ಮಹಾಗಣಪತಿ ಮತ್ತು ಕಾಶಿ ವಿಶ್ವನಾಥಸ್ವಾಮಿ ದೇವಸ್ಥಾನ :** ಬೆಳಗ್ಗೆ 10.30 ರಿಂದ ಶ್ರೀ ಮಹಾಗಣಪತಿ ದೇವತಾದಿಗಳ ವಾರ್ಷಿಕೋತ್ಸವ, ಮೂಲದೇವತಾ ಪ್ರಾರ್ಥನೆ, ಗಣಪತಿಪೂಜೆ, ಪುಣ್ಯಾಹವಾಚನಾ, ಅಧಿವಾಸ ಹೋಮ, ನಾಡೀ ಸಂಧಾನಪೂರ್ವಕ ಕಲಾಹೋಮ, ತತ್ವಹೋಮ, ಮಹಾಪೂರ್ಣಾಹುತಿ, ಮಹಾಕುಂಭಾಭಿಷೇಕ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 8ಕ್ಕೆ ಪ್ರಸಾದ ವಿತರಣೆ, ಸ್ಥಳ: ದೇವಸ್ಥಾನ, 5ನೇ ಮುಖ್ಯ ರಸ್ತೆ, ಯಾದವಗಿರಿ.

■ **ಸುರುಚಿ ರಂಗ ಮನೆ :** ಕಥೆ ಕೇಳೋಣ ಬನ್ನಿ–747 ಕಾರ್ಯಕ್ರಮ, ಕಥೆ ಹೇಳುವವರು ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ನಿವೃತ್ತ ಪ್ರಾಧ್ಯಾಪಕ ಶುಭಚಂದ್ರ, ಸ್ಥಳ: ಸುರುಚಿ ರಂಗ ಮನೆ, ಸಂಜೆ 4.30ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ವಾರ್ಷಿಕ ದಿನಾಚರಣೆ, ಉದ್ಘಾಟನೆ : ಸ್ವಾಮಿ ಯುಕ್ತೇಶಾನಂದಜಿ, ಉಪಸ್ಥಿತರು : ಡಾ.ಬಿ.ಎಂ. ಸುಬ್ರಾಯ, ವಿಶ್ವಪ್ರಸಾದ್ ಆಳ್ವ, ಎಸ್. ಚಂದ್ರಶೇಖರ್, ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಹೆಬ್ಬಾಳ್ ಫೌಂಡೇಷನ್ :** ಇನ್ಫೋಸಿಸ್ ಸಂಸ್ಥಾಪಕರಾದ ಎನ್.ಆರ್. ನಾರಾಯಣಮೂರ್ತಿ ಮತ್ತು ಶ್ರೀಮತಿ ಸುಧಾಮೂರ್ತಿ ಅವರ ಅಳಿಯ ಬ್ರಿಟನ್ ನೂತನ ಪ್ರಧಾನಿ ರಿಷಿ ಸುನಕ್ ಅವರಿಗೆ ಅಭಿನಂದನಾ ಸಮಾರಂಭ, ಉಪಸ್ಥಿತರು : ಮಾಜಿ ಎಂಎಲ್‌ಸಿ ಡಿ. ಮಾದೇಗೌಡ, ಕೆ.ಬಿ. ಲಿಂಗರಾಜು, ಕೆ.ಎಂ. ಬಸವೇಗೌಡ, ಉಪಾಧ್ಯಕ್ಷ ಬಿ.ಡಿ. ಸುಬ್ರಮಣ್ಯ, ಎನ್. ಲಿಂಗರಾಜೇಗೌಡ, ಮಾ. ವೆಂಕಟೇಶ್, ಪ್ರಕಾಶ್ ಚಿಕ್ಕಪಾಳ್ಯ, ಸ್ಥಳ: ಶ್ರೀ ಎನ್.ಆರ್. ನಾರಾಯಣಮೂರ್ತಿ ನಿವಾಸದ ಮುಂಭಾಗ, ಒಂಟಿಕೊಪ್ಪಲು, ಬೆಳಗ್ಗೆ 10.30ಕ್ಕೆ.

■ **ಕ್ರೈಸ್ಟ್ ಕಾಲೇಜು :** ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ 'ಪ್ರವೇಶಿಕಾ' ಉದ್ಘಾಟನಾ ಸಮಾರಂಭ, ಗೌರವ ಅತಿಥಿಗಳು : ಹೆಚ್ಚುವರಿ ಎಸ್ಪಿ ಡಾ.ಬಿ.ಎನ್. ನಂದಿನಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ರೆ. ಫಾ. ಬಿಜು ಪಿ.ಡಿ., ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ, ಮಹಾರಾಜ ಕಾಲೇಜು :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ನಂಜಯ್ಯ ಎಂ. ಹೊಂಗನೂರು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಅನೀಟಾ ವಿಮಲ ಬ್ರಾಗ್ಸ್, ಪ್ರಾಧ್ಯಾಪಕ ಡಾ. ಕೆ. ತಿಮ್ಮಯ್ಯ ಅವರಿಂದ ಸರ್ವಜ್ಞನ ತ್ರಿಪದಿಗಳಲ್ಲಿ ಜೀವಹರ ಚಿಂತನೆ ಕುರಿತು ಉಪನ್ಯಾಸ, ಸ್ಥಳ: ಜೂನಿಯರ್ ಬಿ.ಎ. ಹಾಲ್, ಬೆಳಗ್ಗೆ 11ಕ್ಕೆ.

■ **ಜೀವಧಾರ ರಕ್ತನಿಧಿ ಕೇಂದ್ರ :** ಡಾ. ಪುನೀತ್ ರಾಜ್‌ಕುಮಾರ್ ಮೊದಲನೇ ಪುಣ್ಯಸ್ಮರಣೆ ಅಂಗವಾಗಿ ವಿವಿಧ ಸೇವಾ ಕಾರ್ಯಗಳು ಮತ್ತು ಸಂಗೀತ ಕಾರ್ಯಕ್ರಮ, ಬೆಳಗ್ಗೆ 11ಕ್ಕೆ ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ, ಮಧ್ಯಾಹ್ನ 12.30ಕ್ಕೆ ಅನ್ನದಾನ, ಸಂಗೀತ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಶಾಸಕ ಎಲ್. ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಸ್ಥಳ: ರಕ್ತನಿಧಿ ಕೇಂದ್ರದ ಮುಂಭಾಗ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ, ಸಾಂಸ್ಕೃತಿಕ ಲೋಕ ಟ್ರಸ್ಟ್ :** ಅಪ್ಪು ಸ್ಮರಣೆ ಮತ್ತು ಗಾಯನೋತ್ಸವ, ಸಾಂಸ್ಕೃತಿಕ ಲೋಕ ಟ್ರಸ್ಟ್ ಉದ್ಘಾಟನಾ ಸಮಾರಂಭ, ಪುಷ್ಪಾರ್ಚನೆ : ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಗೌರವಾಧ್ಯಕ್ಷ ಡಾ. ಸಿ.ಪಿ. ಕೃಷ್ಣಕುಮಾರ್, ಸಾಂಸ್ಕೃತಿಕ ಲೋಕ ಟ್ರಸ್ಟ್ ಲೋಗೋ ಬಿಡುಗಡೆ : ಕವಯತ್ರಿ ಡಾ. ಲತಾ ರಾಜಶೇಖರ್, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಅಭಿಯಂತರರು :** ಅಭಿಯಂತರರು ಕಲಾವಿದರಿಂದ 'ಮರಣ ಮೃದಂಗ' ರಂಗ ಪ್ರಯೋಗ, ರಂಗ ನಿರ್ದೇಶಕ : ರಾಜೇಂದ್ರ ಕಾರಂತ, ಸ್ಥಳ: ಕಿರು ರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

■ **ರಂಗವಲ್ಲಿ :** ರಂಗವಲ್ಲಿ ಕಲಾತಂಡದಿಂದ 'ಸಂಸಾರದಲ್ಲಿ ಸನಿದಪ' ನಾಟಕ ಪ್ರದರ್ಶನ, ನಿರ್ದೇಶನ : ರವಿಪ್ರಸಾದ್, ವಸ್ತ್ರ ವಿನ್ಯಾಸ : ಮಹೇಶ್, ಬೆಳಕಿನ ವಿನ್ಯಾಸ : ಸರಿತಾ ರಾಜೇಶ್, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.

■ **ರೋಟರಿ ಮೈಸೂರು ಉತ್ತರ :** ಹಾಲೋವಿನ್ ವೇಷಭೂಷಣ ಸ್ಪರ್ಧೆ, ಉಪಸ್ಥಿತರು : ರೋ. ಎಚ್.ಆರ್. ಕೇಶವ್, ಸ್ಥಳ: ಕ್ಯಾಂಪಿಂಗ್ ಗ್ರೌಂಡ್, ಹಡಜನ, ಸಂಜೆ 7ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು.


ಪ್ರಥಮ ವರ್ಷದ ಚಿರಸ್ಮರಣೆ
ಅಭಿಮಾನಿಗಳ ಕಣ್ಮಣಿ, ನಗುಮುಖದ ಒಡೆಯ,
ಮರೆಯಲಾಗದ ಮಾಣಿಕ್ಯ,
ಎಲ್ಲರ ಮನೆ-ಮನಗಳಲ್ಲಿ ಚಿರಸ್ಥಾಯಿಯಾಗಿರುವ
ಕರ್ನಾಟಕ ರತ್ನ
ಡಾ. ಪುನೀತ್ ರಾಜಕುಮಾರ್
ಅವರ ಪ್ರಥಮ ವರ್ಷದ ಚಿರಸ್ಮರಣೆ
ಕರುನಾಡಿನ ಹೆಮ್ಮೆಯ ರಾಜರತ್ನ 'ಅಪ್ಪು'ರವರು
"ಕರ್ನಾಟಕ ರತ್ನ ಪ್ರಶಸ್ತಿ"ಗೆ
ಭಾಜನರಾಗಿದ್ದಾರೆ
ನಯನ ಕುಮಾರ್ಸ್
ಮಲ್ಟಿಸ್ಪೆಷಾಲಿಟಿ
ಆಸ್ಪತ್ರೆ
ಕರ್ನಾಟಕ ರತ್ನ ಡಾ. ಪುನೀತ್ ರಾಜಕುಮಾರ್ ಸ್ಮರಣಾರ್ಥ
ದಿನಾಂಕ ಅಕ್ಟೋಬರ್ 29 ರಿಂದ ನವೆಂಬರ್ 1 ರವರೆಗೆ
"ಉಚಿತ ಆರೋಗ್ಯ ಶಿಬಿರ" ಏರ್ಪಡಿಸಲಾಗಿದ್ದು,
ಶಿಬಿರದಲ್ಲಿ ಯಾವುದೇ ಸಮಸ್ಯೆಗಳಿಗೆ ಉಚಿತ ತಪಾಸಣೆ
ಹಾಗೂ ಯಾವುದೇ ಲ್ಯಾಬ್ ಪರೀಕ್ಷೆಗಳ ಮೇಲೆ
ವಿಶೇಷ ರಿಯಾಯಿತಿ ಇರುತ್ತದೆ.
ದಿನಾಂಕ 31-10-2022, ಸೋಮವಾರದಂದು
ವಿಶೇಷವಾಗಿ ಉಚಿತ
"ಮೆದುಳು ಮತ್ತು ಬೆನ್ನುಮೂಳೆಯ"
ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ,
ಸಾರ್ವಜನಿಕರು ಇದರ ಸದುಪಯೋಗಪಡಿಸಿ
ಕೊಳ್ಳಬೇಕಾಗಿ ವಿನಂತಿ
ನಮ್ಮ ಆಸ್ಪತ್ರೆಯ ಎಲ್ಲಾ ಚಿಕಿತ್ಸೆಯ ಮೇಲೆ
ಕರ್ನಾಟಕ ರತ್ನ ಪುನೀತ್ ರಾಜ್‌ಕುಮಾರ್
ಅವರ ಸ್ಮರಣಾರ್ಥ
10% ರಿಯಾಯಿತಿ ನೀಡಲಾಗುತ್ತಿದೆ
ವಿಶೇಷತೆಗಳು
• ಜನರಲ್ ಮೆಡಿಸಿನ್
• ಸಾಮಾನ್ಯ & ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆ
• ಅರಿವಳಿಕೆ ಶಾಸ್ತ್ರ
• ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ
• ಹೃದ್ರೋಗ ಶಾಸ್ತ್ರ
• ಚರ್ಮರೋಗ ಶಾಸ್ತ್ರ
• ಜಠರ ರೋಗ ಶಾಸ್ತ್ರ
• ತುರ್ತು & ಅಪಘಾತ ಚಿಕಿತ್ಸಾ ವಿಭಾಗ
• ಮೂತ್ರಪಿಂಡ ಶಾಸ್ತ್ರ
• ನರರೋಗ ಶಾಸ್ತ್ರ
• ಇ ಎನ್ ಟಿ
• ಕ್ಯಾನ್ಸರ್ ಶಸ್ತ್ರಚಿಕಿತ್ಸೆ
• ಮೂಳೆ ಮತ್ತು ಕೀಲು ಶಾಸ್ತ್ರ
• ಶ್ವಾಸಕೋಶ ಶಾಸ್ತ್ರ
• ಮಕ್ಕಳ ವಿಭಾಗ
• ರೋಗಲಕ್ಷಣ ಶಾಸ್ತ್ರ
• ಫಿಸಿಯೋಥೆರಪಿ ವಿಭಾಗ
• ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ
• ರಕ್ತನಾಳ & ಎದೆಗೂಡು ಶಸ್ತ್ರಚಿಕಿತ್ಸೆ
• ಮೂತ್ರರೋಗ ಶಾಸ್ತ್ರ
• ಇಂಟರ್ವೆನ್ಷನಲ್ ರೇಡಿಯಾಲಜಿ
• ನರ ಶಸ್ತ್ರಚಿಕಿತ್ಸೆ
• ಚರ್ಮ ರೋಗ. ಎಸ್.ಟಿ.ಡಿ ಹಾಗೂ ಲೈಂಗಿಕ ರೋಗ ತಜ್ಞರು
ಸೌಲಭ್ಯಗಳು
24x7 ಅಪಘಾತ ಮತ್ತು ತುರ್ತು ಚಿಕಿತ್ಸೆ । ಡೇಕೇರ್ ಸೇವೆಗಳು । 24x7 ಔಷಧಾಲಯ । 24x7 ಲ್ಯಾಬ್ ಸೇವೆಗಳು
24x7 ರೇಡಿಯಾಲಜಿ ಸಿಟಿ ಸ್ಕ್ಯಾನ್ । ಕಂಪ್ಯೂಟರೈಸ್ಡ್ ರೇಡಿಯೋಗ್ರಫಿ ಸಿಸ್ಟಮ್ । ಅಲ್ಟ್ರಾಸೌಂಡ್
ಕಲರ್ ಡಾಪ್ಲರ್ । 2ಡಿ ಎಕೋ । ಸರ್ಜಿಕಲ್ ಐ.ಸಿ.ಯು. । ಮೆಡಿಕಲ್ ಐ.ಸಿ.ಯು, ಎಚ್.ಡಿ.ಯು, ಎಂ.ಐ.ಸಿ.ಯು ಹೆಚ್,
ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗಳು । ಕಾರ್ಪೊರೇಟ್ ಮತ್ತು ಫ್ಯಾಮಿಲಿ ಹೆಲ್ತ್ ಪ್ಯಾಕೇಜ್‌ಗಳು
ನವಜಾತ ಶಿಶುಗಳ ತೀವ್ರ ನಿಗಾ ಘಟಕ । ಎಂಡೋಸ್ಕೋಪಿ । ಕೊಲೊನೋಸ್ಕೋಪಿ
ಪೌಷ್ಟಿಕತೆ ಹಾಗೂ ಆಹಾರ ವಿಭಾಗ ಹಾಗೂ ಎಲ್ಲಾ ಪ್ರಮುಖ ಟಿಪಿಎ ಗಳೊಂದಿಗೆ ಸಹಯೋಗ ಡಯಾಲಿಸಿಸ್ ಸೆಂಟರ್
ನಮ್ಮ ಆಸ್ಪತ್ರೆಯು ಕಳೆದು 6 ತಿಂಗಳುಗಳಿಂದ
350ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ
ಮಾಡಲಾಗಿದ್ದು, ಅದು ಸಹ ಅತೀ ಕಡಿಮೆ ವೆಚ್ಚದಲ್ಲಿ,
ರೋಗಿಗಳ ಆರೈಕೆಗೆ ಶ್ರಮಿಸಿದ್ದೇವೆ.
ಪ್ರತಿವಾರ ಪುನೀತ್ ರಾಜ್‌ಕುಮಾರ್ ರವರ ನೆನಪಿನಲ್ಲಿ
ತಜ್ಞ ವೈದ್ಯರೊಡಗೂಡಿ ಉಚಿತ ಆರೋಗ್ಯ ಶಿಬಿರ
ಏರ್ಪಡಿಸಲಾಗುತ್ತಿದೆ ಹಾಗೂ ಎಲ್ಲಾ ರೀತಿ ಪರೀಕ್ಷೆ
ಹಾಗೂ ಚಿಕಿತ್ಸೆಗಳ ಮೇಲೆ ರಿಯಾಯಿತಿ ನೀಡಿ ಕಡಿಮೆ
ವೆಚ್ಚದಲ್ಲಿ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ
ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ
NAYANA KUMAR'S MULTI SPECIALITY HOSPITAL
ಆಯುಷ್ಮಾನ್ ಭಾರತ್ ಆರೋಗ್ಯ
ಕಾರ್ಡ್ ಸೌಲಭ್ಯ ಒಳಗೊಂಡಿದೆ
ಎಲ್ಲಾ ಪ್ರಮುಖ ಇನ್ಶೂರೆನ್ಸ್
(ಟಿಪಿಎ) ಕಂಪನಿಗಳ ಸೌಲಭ್ಯವಿದೆ
ಪ್ರಮುಖ ಸರ್ಜರಿಗಳಿಗೆ
ಇಎಂಐ ಸೌಲಭ್ಯವಿದೆ
ರಿಯಾಯಿತಿ ದರದಲ್ಲಿ
ಪ್ರತ್ಯೇಕ ಡಯಾಲಿಸಿಸ್
ಸೌಲಭ್ಯವಿದೆ
ಕೆ.ಬಿ. ಕುಮಾರ್
ಮಾಲೀಕರು: ನಯನ ಕುಮಾರ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ
ಮಾಲೀಕರು: ಕೆ.ಬಿ. ಕುಮಾರ್ ಗ್ರೂಪ್ಸ್,
ಮಾಲೀಕರು: ಕುಮಾರ್ಸ್ ದಿ ವೈಟ್‌ಹೌಸ್ ಹೋಟೆಲ್ & ರೆಸ್ಟೋರೆಂಟ್
ಟ್ರಸ್ಟಿಗಳು: ವಿನಾಯಕ ಎಜುಕೇಷನ್ ಟ್ರಸ್ಟ್, ಕೆ. ಬೆಟ್ಟಹಳ್ಳಿ
ವಿನಾಯಕ ಪ್ರಾಥಮಿಕ ಶಾಲೆ, ವಿವೇಕಾನಂದ ಪ್ರೌಢಶಾಲೆ,
ವಿನಾಯಕ ಪದವಿಪೂರ್ವ ಕಾಲೇಜು ಕೆ. ಬೆಟ್ಟಹಳ್ಳಿ
ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ
#06, 3ನೇ ಮುಖ್ಯರಸ್ತೆ, ನೇತಾಜಿ ಸರ್ಕಲ್ ಹತ್ತಿರ, ದಟ್ಟಗಳ್ಳಿ, ಮೈಸೂರು - 570022
info@nkhospitals.com
www.nkhospitals.com
0821-2371000, 95133 10100, 95133 10102
24/7 Emergency Services

ನಕ್ಕರೆ ಅದೇ ಸ್ವರ್ಗ

ಆತ : "ನಮ್ಮನೆಗೂ ಐಟಿಯವರು ಬಂದಿದ್ರು"
ಈತ : "ಹೌದಾ? ಆಮೇಲೆ ಏನಾಯ್ತು?"
ಆತ : "ಅದೇ ವೇಳೆ ಅಡುಗೆ ಮನೆಯಲ್ಲಿ 'ಒಂದು ಕೆಜಿ ಟೊಮ್ಯಾಟೋ ತರೋ ಯೋಗ್ಯತೆ ಇಲ್ಲ ನಿಮ್ಗೆ' ಅಂತ ನನ್ನ ಹೆಂಡತಿ ಸಿಟ್ಟಿನಲ್ಲಿ ಆಡೋದು ಕೇಳಿಸ್ಕೊಂಡು ವಾಪಸ್ ಹೋದರು!!

ಮೈಸೂರು ಮಿತ್ರ

ಶನಿವಾರ, 29 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಒಬ್ಬನು ಎಲ್ಲಾ ವಿಷಯಗಳ ಮೇಲೆ ಮಾತನಾಡುವ ಹವ್ಯಾಸಕ್ಕೆ ಬಿದ್ದರೆ ಕೊನೆಗೆ ಅವನ ಮಾತುಗಳಿಗೆ ಅರ್ಥವೇ ಇಲ್ಲವಾಗುತ್ತದೆ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರನ್ನೇ ಬಿಟ್ಟವನಿಗೆ ನೀರಿನ ಹಂಗೇನು

ನಿಮ್ಮ ಪತ್ರಗಳು

ಕಾಶ್ಮೀರ ಪಂಡಿತರಿಗೆ ರಕ್ಷಣೆ ಅಗತ್ಯ

ಮಾನ್ಯರೆ,

ಸುಮಾರು 6 ತಿಂಗಳಲ್ಲಿ ಕಾಶ್ಮೀರದಲ್ಲಿ ಪಂಡಿತ ಸಮಾಜದವರ ನರಮೇಧ ನಡೆಯುತ್ತಿದೆ. ಮೂಲ ನಿವಾಸಿಗಳಾದ ಪಂಡಿತ ಜನಾಂಗದವರು 370ನೇ ವಿಧಿ ರದ್ದುಪಡಿಸಿದ ನಂತರ ತಮ್ಮ ಮೂಲಸ್ಥಾನಗಳಿಗೆ ಸಾಗಿ ತಮ್ಮ ಆಸ್ತಿಪಾಸ್ತಿಗಳನ್ನು ನೋಡಿಕೊಳ್ಳತೊಡಗಿದರು. ಇದಕ್ಕೆ ವಿರುದ್ಧವಾಗಿ ಪಾಕಿಸ್ತಾನ ಹಾಗೂ ಕಾಶ್ಮೀರದ ಜಿಹಾದಿಗಳು ಈ ಪಂಡಿತ ಜನಾಂಗವನ್ನು ಕೊಲ್ಲುತ್ತಿದ್ದಾರೆ. ಬೇರ್‍ಯಾವ ಜಾಗದಲ್ಲಿ ಒಂಚೂರು ಗಲಭೆಗಳಾದರೆ ಟಿವಿ ಮಾಧ್ಯಮ ಹಾಗೂ ಪತ್ರಿಕೆಗಳಲ್ಲಿ ಬೊಬ್ಬಿಡುವ ಬುದ್ಧಿಜೀವಿಗಳು, ನವೀನ ಪತ್ರಕರ್ತರು ಪಂಡಿತರ ಮೇಲೆ ಆದಾಗ ಬಾಯಿ ಬಿಡುತ್ತಿಲ್ಲ. ಸರ್ಕಾರ ಪಂಡಿತರಿಗೆ ಗುಂಡು, ಪಿಸ್ತೂಲುಗಳನ್ನು ನೀಡಿ ತಮ್ಮ ಜೀವ ರಕ್ಷಣೆಗೆ ಅನುವು ಮಾಡಿಕೊಡಬೇಕು. ಹಿಂದೂ ಸಮಾಜ ಈ ನೀಚ ಕೃತ್ಯಗಳನ್ನು ಖಂಡಿಸಬೇಕು. ಅಲ್ಲೇ ಹುಟ್ಟಿ ಕಾಶ್ಮೀರದಲ್ಲಿ ಬದುಕಲು ಬಯಸುವ ಪಂಡಿತ ಸಮಾಜಕ್ಕೆ ನಾವು ಧೈರ್ಯ ತುಂಬಬೇಕಿದೆ. ಕೇಂದ್ರ ಸರ್ಕಾರ ಇವರ ರಕ್ಷಣೆಗೆ ಧಾವಿಸಬೇಕಿದೆ. ಅಲ್ಲದೆ ಕಾಶ್ಮೀರದ ಪೊಲೀಸರಿಗೆ ಹಾಗೂ ಸೇನಾಧಿಕಾರಿಗಳಿಗೆ ರಕ್ಷಣೆಗಾಗಿ ವಿಶೇಷ ಅಧಿಕಾರ ನೀಡಬೇಕಿದೆ. ಒಟ್ಟಾರೆಯಾಗಿ ಪಂಡಿತ ಸಮಾಜದವರಿಗೆ ಈ ದೇಶದಲ್ಲಿ ಬದುಕಲು ಧೈರ್ಯ ನೀಡೋಣ.

–ಮಜೂರು ರಘುವೀರ ಪುರಾಣಿಕ, ಸಿದ್ಧಾರ್ಥನಗರ, ಮೈಸೂರು.

ಪಾರ್ಕ್ ಅಭಿವೃದ್ಧಿ ಸಮಿತಿ ರಚಿಸಿ ವಸೂಲಿ ದಂಧೆ

ಮಾನ್ಯರೆ,

ಸಾರ್ವಜನಿಕ ಪಾರ್ಕ್‌ವೊಂದನ್ನು ರಾಜಕೀಯ ಪಕ್ಷದ ಬೂತ್ ಮಟ್ಟದ ಕೇಂದ್ರವಾಗಿ ಉಪಯೋಗಿಸಲಾಗುತ್ತಿದೆ. "ಸರ್, ತಾವು ಪಾರ್ಕ್ ಬಳಸುತ್ತಿದ್ದೀರಿ. ಹಾಗಾಗಿ ಪಾರ್ಕ್ ಅಭಿವೃದ್ಧಿಗೆ ಒಂದು ಸಾವಿರ ಕೊಡಿ" ಎಂದು ಕೇಳುತ್ತಿದ್ದಾರೆ.

ಇದು ವಿಜಯನಗರ 3ನೇ ಹಂತ ಸಿ ಬ್ಲಾಕ್, ಜಗ್ಗೇಶ್ ಚೌಲ್ಟ್ರಿ ಬಳಿಯಲ್ಲಿ ಇರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಸಾರ್ವಜನಿಕ ಪಾರ್ಕ್ ಆಗಿರುತ್ತದೆ. ಇಲ್ಲಿನ ಕೆಲವು ವ್ಯಕ್ತಿಗಳು ಪಾರ್ಕ್ ಅಭಿವೃದ್ಧಿ ಸಮಿತಿ ಮಾಡಿಕೊಂಡು ವಸೂಲಿ ದಂಧೆಗೆ ಇಳಿದಿದ್ದಾರೆ.

ಜತೆಗೆ ರಾಜಕೀಯ ಪಕ್ಷ ಒಂದರ ಬೂತ್ ಮಟ್ಟದ ಕೇಂದ್ರವಾಗಿ ಕಾರ್ಯ ನಿರ್ವಹಿಸಲು ರಚಿಸಿಕೊಂಡಿರುವ ರಾಜಕೀಯ ಕಾರ್ಯಕರ್ತರ ಸಮಿತಿಯಾಗಿದೆ. ಮುಡಾ ಅಧಿಕಾರಿಗಳು ಯಾವುದಾದರೂ ಕಂಪನಿ, ಸಂಸ್ಥೆಗೆ ಪಾರ್ಕ್ ಅಭಿವೃದ್ಧಿ ಮತ್ತು ನಿರ್ವಹಣೆಗೆ ಒಡಂಬಡಿಕೆ ಮಾಡಿಕೊಂಡು ಒಪ್ಪಿಸುವ ಅವಕಾಶವಿದೆ. ಅದನ್ನು ಬಿಟ್ಟು ಅನಧಿಕೃತ ವ್ಯಕ್ತಿಗಳು ಪಾರ್ಕ್ ತಮ್ಮ ವಶಕ್ಕೆ ಪಡೆದುಕೊಳ್ಳುವುದನ್ನು ನಿರ್ಬಂಧಿಸಬೇಕು.

ಇಲ್ಲಿನ ನಿವಾಸಿಗಳಿಂದ ಮಹಾನಗರ ಪಾಲಿಕೆಯವರು ವಾರ್ಷಿಕ ಆದಾಯವನ್ನು ವಸೂಲು ಮಾಡುತ್ತಿದ್ದಾರೆ. ಹೀಗಿದ್ದು ರಾಜಕೀಯ ಪಕ್ಷದ ಕಾರ್ಯಕರ್ತರು ಅನಧಿಕೃತವಾಗಿ ಸಮಿತಿ ರಚಿಸಿಕೊಂಡು ಸಾರ್ವಜನಿಕ ಪಾರ್ಕ್ ಅನ್ನು ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುತ್ತಿರುವುದನ್ನು ತಪ್ಪಿಸಿ ಸಾರ್ವಜನಿಕರಿಗೆ ಮುಕ್ತ ಅವಕಾಶ ನೀಡಲು ಸಂಬಂಧಪಟ್ಟ ಇಲಾಖೆಯು ಸೂಕ್ತ ಕ್ರಮ ವಹಿಸಲು ಕೋರಲಾಗಿದೆ.

– ವಿಜಯನಗರ 3ನೇ ಹಂತದ ನಿವಾಸಿಗಳು, ಮೈಸೂರು.

ಡಾ. ಪಿ.ಬಿ. ಶ್ರೀನಿವಾಸ್ ಗೀತೆಗಳ ರಸಮಂಜರಿ ಕಾರ್ಯಕ್ರಮ ಆಯೋಜನೆಗೆ ಮನವಿ

ಮಾನ್ಯರೆ,

ಖ್ಯಾತ ಗಾಯಕ ಡಾ. ಪಿ.ಬಿ. ಶ್ರೀನಿವಾಸ್ ಕರ್ನಾಟಕ ಎಂದೂ ಮರೆಯದ ಶ್ರೇಷ್ಠ ಹಿನ್ನೆಲೆ ಗಾಯಕ. ಕನ್ನಡ ಚಿತ್ರರಂಗಕ್ಕೆ ಇವರು ನೀಡಿರುವ ಕೊಡುಗೆ ಅಪಾರ. ಕನ್ನಡದ ಎಲ್ಲಾ ಹಿರಿಯ ನಟರಿಗೆ ತಮ್ಮ ಕಂಠಸಿರಿ ನೀಡಿ ಸೈ ಎನಿಸಿಕೊಂಡಿದ್ದಾರೆ. ಅದರಲ್ಲೂ ಡಾ. ರಾಜ್ ಪಾತ್ರಗಳಿಗೆ ಹಾಡಿರುವ ಗೀತೆಗಳು ಎಂದೆಂದಿಗೂ ಅಮರ. ಆದರೆ ಸರ್ಕಾರ (ಕೇಂದ್ರ ಹಾಗೂ ರಾಜ್ಯ) ಡಾ. ಪಿ.ಬಿ. ಶ್ರೀನಿವಾಸ್ ಅವರಿಗೆ ಯಾವುದೇ ಅತ್ಯುನ್ನತ ಪ್ರಶಸ್ತಿಯನ್ನು ಜೀವಿತ ಕಾಲದಲ್ಲಿ ನೀಡಿ ಗೌರವಿಸಲೇ ಇಲ್ಲ. ಅವರ ಜನ್ಮ ದಿನ ಸೆ. 22 ಆಗಿದ್ದು, ಅವರ ಸವಿನೆನಪಿಗಾಗಿ ಡಾ. ಪಿಬಿಎಸ್ ಗೀತೆಗಳ ಗಾಯನ ರಸಮಂಜರಿ ಕಾರ್ಯಕ್ರಮವನ್ನು ಮೈಸೂರು ನಗರದ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣದಲ್ಲಿ ತುರ್ತಾಗಿ ಆಯೋಜಿಸುವಂತೆ ಮನವಿ.

– ನೊಂದ ಅಭಿಮಾನಿಗಳು, ಮೈಸೂರು.

ಹೆಮ್ಮೆ!

ಮಾನ್ಯರೆ,

'ಸರ್ವಕಾಲಕ್ಕೂ ಸಲ್ಲುವ ಜಿಎಸ್‌ಎಸ್ ಅನ್ವೇಷಣೆ (ಸಿ.ಎಸ್. ರಾಘವೇಂದ್ರ ಅವರ ಲೇಖನ, 'ಮಿತ್ರ', ಅಕ್ಟೋಬರ್ 14). ಅದರ ಆರಂಭ ಭಾಗಕ್ಕೆ ಸಂಬಂಧಿಸಿದಂತೆ : ಜಿಎಸ್‌ಎಸ್ ಅವರು 'ರಾಷ್ಟ್ರಕವಿ'ಯಾದಾಗ, ಜೆಎಸ್‌ಎಸ್ ಸಂಸ್ಥೆ ಅವರಿಗೆ ಕಲಾಮಂದಿರದಲ್ಲಿ ಸನ್ಮಾನ ಸಮಾರಂಭ ಏರ್ಪಡಿಸಿತ್ತು. ಆ ಸಂದರ್ಭದಲ್ಲಿ ಅವರ ಬಗೆಗೆ ಅಭಿನಂದನಾ ಭಾಷಣ ಮಾಡಿದವರು ಎಂ. ಚಿದಾನಂದಮೂರ್ತಿ ಮತ್ತು ನಾನು.

ಆ ಕುರಿತು ಪತ್ರಿಕೆಯೊಂದು ಹೀಗೆ ವರದಿ ಮಾಡಿತ್ತು : "ಜಿಎಸ್‌ಎಸ್ ಅವರಿಗೆ ಹೆಚ್ಚು ಕಡಿಮೆ ಅವರಷ್ಟೇ ಎತ್ತರಕ್ಕೆ ಬೆಳೆದ ಅವರ ಇಬ್ಬರು ಶಿಷ್ಯರು ಅಭಿನಂದನೆ ಸಲ್ಲಿಸಿದರು" ನನಗೆ ಹೆಮ್ಮೆಯೆನಿಸಿತು! ಎತ್ತೆತ್ತಲೋ ಹೋಗಬೇಕೆಂದಿದ್ದ ನನ್ನನ್ನು ಸಾಹಿತ್ಯದ ಕಡೆಗೆ ಕರೆತಂದವರು ಜಿಎಸ್‌ಎಸ್ ಗುರುಭ್ಯೋ ನಮಃ

ಆಘಾತ : ಈಗ ಎಲ್ಲೆಲ್ಲೂ ಅತ್ಯಾಚಾರ (ಮತ್ತು ಹತ್ಯಾಚಾರ)ಗಳು; ಅವುಗಳ ಸುದ್ದಿಗಳು. ಅವುಗಳನ್ನು ಬಿಟ್ಟು ಪತ್ರಿಕೆಗಳೇ ಇಲ್ಲ! (ಸಾಲದ್ದಕ್ಕೆ ಬ್ರಹ್ಮಾಂಡ ಭ್ರಷ್ಟಾಚಾರಗಳು).

ವಾಸ್ತವವಾಗಿ, ಅಗತ್ಯವಾದವು ಅನಿಷ್ಟ ಅತ್ಯಾಚಾರಗಳಲ್ಲ; ಸಮಾಜಕ್ಕೆ ಹಿತಕರವಾದ, ಜನತಾ ಸ್ವಾಸ್ಥ್ಯವನ್ನು ಕಾಪಾಡುವ 'ಪಥ್ಯಾಚಾರ'ಗಳು; ಅನಚಾರಗಳಲ್ಲ, ಸದಾಚಾರಗಳು ! ("ಆಚಾರಕರ ಸಾಗು, ನೀತಿಗೆ ಪ್ರಭುವಾಗು).

ಕೀಚಕರು!

ಮಳವಳ್ಳಿಯ ಅ(ಹ)ತ್ಯಾಚಾರ ಪ್ರಕರಣದ ಆರೋಪಿ ಶಿಕ್ಷಕನೇ ಅಲ್ಲವಂತೆ! (ಶಿಕ್ಷಕ ವರ್ಗಕ್ಕೆ ಗೌರವದ ವಿಚಾರ?) ಮತ್ತೇನು? ಶೀಲಭಕ್ಷಕ ಎನ್ನಬಹುದೆ? ಎಲ್ಲಿದ್ದಾರೆ ರಕ್ಷಕರು? (ಅದೂ ಉಂಟೇ ಉಂಟಲ್ಲ ವಿರಳವಾಗಿ ಕೆಲವಾದರೂ ಶಿಕ್ಷಕ ಕೀಚಕರು; ನೀಚರು).

–ಸಿಕೆ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಜಗವೇ ಹೇಳುತ್ತೈತೆ ನೀನೇ ರಾಜಕುಮಾರ...

ಅ.29,ಖ್ಯಾತ ಚಲನ ಚಿತ್ರನಟ "ಪವರ್ ಸ್ಟಾರ್" ಡಾ.ಪುನೀತ್ ರಾಜ್ ಕುಮಾರ್ ಅವರ ಪುಣ್ಯ ಸ್ಮರಣೆಯ ದಿನ. ತನ್ನಿಮಿತ್ತ ಈ ಲೇಖನ.



"ಇರೋದ್ ಒಂದ್ ಜೀವ್ನ, ಹಿಂದೇನಾಯ್ತೋ ನೆನ್ಪಿಲ್ಲ. ಮುಂದೇನಾಗುತ್ತೋ ಗೊತ್ತಿಲ್ಲ. ನಾನ್ ಏನ್ ತಿಂತೀನಿ, ಎಲ್ಲಿ ಮಲಗ್ತೀನಿ, ನಾನೇನ್ ಮಾಡ್ತೀನಿ, ಯಾವಾಗ ಎಲ್ಲಿ ಸಾಯ್ತೀನಿ ಎಂಬುದನ್ನೆಲ್ಲಾ ಬರೆದು ಬಿಟ್ಟಿದ್ದಾನೆ ವಿಧಿ. ಅವನ್ ಮುಂದೆ ನಮ್ದೇನಿಲ್ಲ." ಇದು ಪುನೀತ್ ರಾಜಕುಮಾರ್ ಬದುಕಿದ್ದಾಗ ತಮಾಷೆ ಎಂಬಂತೆ ಆಗಾಗ ಹೇಳುತ್ತಿದ್ದ ಜೀವನ ಸಂದೇಶ. ಈಗ ಇದರ ಗಂಭೀರತೆ ಅರ್ಥವಾಗುತ್ತಿದೆ. ಅರಿತು ಬಾಳುವವರಿಗೆ ಇದಕ್ಕಿಂತ ಬದುಕಿನ ಮಾರ್ಗಸೂಚಿ ಬೇಕೆ?

"ಅಪ್ಪು" ಎಂದರೆ ಇವನಾರವ ಇವನಾರವ ನೆನ್ನದೇ ಇವ ನಮ್ಮವ ಇವ ನಮ್ಮವನೆಂದು ಎಲ್ಲರನ್ನೂ ಅಪ್ಪಿಕೊಳ್ಳುವ ವ್ಯಕ್ತಿತ್ವ. ಹಾಗಾಗಿ ಅವರು ಇಡೀ ಸಮಾಜವನ್ನು ಸಂಪೂರ್ಣವಾಗಿ ಆವರಿಸಿಕೊಂಡು ಸಮಸ್ತ ಕರ್ನಾಟಕವನ್ನೂ ಬಾಚಿ ತಬ್ಬಿಕೊಂಡಿದ್ದರು. ಅಂತಹ ಆಯಸ್ಕಾಂತ ಗುಣ ಅವರದು. ಇದರಲ್ಲಿ ಕಿಂಚಿತ್ತೂ ಉತ್ಪ್ರೇಕ್ಷೆ ಇಲ್ಲ. ಜಗವೇ ಹೇಳುತ್ತೈತೆ ನೀನೇ ರಾಜಕುಮಾರ ಎಂದು."ಶರಣರ ಸಾವನ್ನು ಮರಣದಲ್ಲಿ ನೋಡು" ಎಂಬಂತೆ 'ಅಪ್ಪು' ಅಗಲಿಕೆಯ ನೋವಿನಲ್ಲಿ ಇಡೀ ಜಗತ್ತು ಭಾಗಿಯಾಗಿತ್ತೆಂಬುದನ್ನು ನಾವು ಕಂಡಾಗಲಂತೂ ಅಪ್ಪುವಿನ ಪುನೀತ ಶಕ್ತಿಯ ಬಗ್ಗೆ ಹೆಮ್ಮೆಯಾಗುತ್ತದೆ. ಅಪ್ಪು ನಿಜವಾದ 'ಪವರ್ ಸ್ಟಾರ್' ಕನ್ನಡ, ಕನ್ನಡಿಗ, ದೇಶ, ಭಾಷೆ, ಹೀಗೆ ಎಲ್ಲವನ್ನೂ, ಎಲ್ಲರನ್ನೂ ಒಳಗೊಂಡು ತಾನೂ ಪುನೀತನಾಗಿ, ಸಮಾಜವನ್ನೂ ಪುನೀತಗೊಳಿಸಿ ಕಾಣದಂತೆ ಮಾಯವಾದ ಡಾ.ಪುನೀತ್ ರಾಜಕುಮಾರ್ ಯಾವತ್ತೂ ಅಜರಾಮರರು.

"ಪುನೀತ್ ಬಹುದೊಡ್ಡ ಕಲಾವಿದ.ಅದಕ್ಕಿಂತಲೂ ಹೆಚ್ಚಾಗಿ ವಿನಯವಂತ, ಹೃದಯವಂತ, ಉದಾರ ಶೀಲ, ಸ್ನೇಹಶೀಲ, ಸರಳ ನಡೆ–ನುಡಿಯ ಮುಗ್ಧ ಮನಸ್ಸಿನ ಸಜ್ಜನ ಹೀರೊ. ನಮ್ಮೆಲ್ಲರ ಮನದೊಳಗೆ ಈ ಹೀರೋ ಎಂದೆಂದಿಗೂ ಅಮರ...."

–ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಡಾ.ಪುನೀತ್ ರಾಜಕುಮಾರ್ ಬಗೆಗಿನ ಮೇಲ್ಕಂಡ ಸುತ್ತೂರು ಶ್ರೀಗಳ ಮಾತುಗಳು ಅಕ್ಷರಶಃ ಸತ್ಯ. ಪುನೀತ್ ಪ್ರತಿಯೊಬ್ಬರ ಹೃದಯದಲ್ಲೂ ಪುನೀತನಾಗಿಯೇ ಚಿರಸ್ಥಾಯಿ. "ವಿಧಿಯ ಕ್ರೂರ ಆಟವು ಮೇರು ಮತ್ತು ಪ್ರತಿಭಾವಂತ ನಟ ಪುನೀತ್ ರಾಜಕುಮಾರ್ ಅವರನ್ನು ನಮ್ಮಿಂದ ಕಸಿದು ಕೊಂಡಿದೆ. ಇದು ಸಾಯುವ ವಯಸ್ಸಲ್ಲ. ಮುಂಬರುವ ಪೀಳಿಗೆಯೂ ಅವರ ಅದ್ಭುತ ವ್ಯಕ್ತಿತ್ವ ಮತ್ತು ಕಾರ್ಯಕ್ಕಾಗಿ ಅವರನ್ನು ಪ್ರೀತಿಯಿಂದ ಸ್ಮರಿಸಲಿದೆ....." ಪುನೀತ್ ರಾಜಕುಮಾರ್ ಸಾವಿನ ಸುದ್ದಿ ಕೇಳುತ್ತಲೇ ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿ ದುಃಖದಿಂದ ಉದ್ಗರಿಸಿದ ಈ ನುಡಿಗಳು ಕೂಡ ಅಕ್ಷರಕ್ಷರವೂ ಸ್ಮರಣೀಯವೇ. ಜಗತ್ತು ಇರುವ ವರೆವಿಗೂ ಪುನೀತ ಶಾಶ್ವತವಾದ ಚಿರಮಲ್ಲಿಗೆ. "ಅಪ್ಪು ಹುಟ್ಟಿನಿಂದಲೇ ಕಲಾವಿದ.ಕಲೆ ಅನ್ನುವುದನ್ನು ಯಾರೂ ಅವನಿಗೆ ಹೇಳಿ ಕೊಟ್ಟಿಲ್ಲ. ರಾಜಕುಮಾರ್ ಅವರ ಮೇರು ಕಾಲದಲ್ಲಿ ಹುಟ್ಟಿದ ಪುನೀತ್ ಅವರ ಕಲಾ ಪ್ರತಿಭೆಯನ್ನು ಹುಟ್ಟುವಾಗಲೇ ಹೊತ್ತು ತಂದಿದ್ದ. ರಾಜಕುಮಾರ್ ಅವರ 'Concentrated' ಪ್ರತಿಭೆ ಅಪ್ಪು. ಯುವ ನಟರು ಇವನಿಂದ ಕಲಿಯುವಂತಹದ್ದು ಬಹಳಷ್ಟಿದೆ....." ಪುನೀತ್ ಹುಟ್ಟಿದಂದಿನಿಂದಲೂ ಪ್ರತಿ ಹೆಜ್ಜೆಯನ್ನೂ ಕಂಡಿದ್ದ ಖ್ಯಾತ ಚಲನಚಿತ್ರ ನಿರ್ದೇಶಕ ಎಸ್.ಕೆ. ಭಗವಾನ್ ಅವರ ಮಾತುಗಳಿವು ಸತ್ಯಸ್ಯಸತ್ಯ. ಪುನೀತ್ ರಾಜಕುಮಾರ್ ಜನ್ಮತಃ ಕಲಾವಿದ. ನಟನೆ ಎಂಬುದು ಅವರಲ್ಲಿ ರಕ್ತಗತವಾಗಿ ಬಂದಿದ್ದ ಅಮರ ನಟ ಚೇತನ. ದೇಶದ ಪ್ರಧಾನಿಯಿಂದ ಹಿಡಿದು ಓರ್ವ ಸಾಮಾನ್ಯ ವ್ಯಕ್ತಿಯ ತನಕ ಪ್ರತಿಯೊಬ್ಬರೂ ಅಭಿಮಾನಿಸುವ ಅಪರೂಪದ ಕಲಾವಿದರಾಗಿದ್ದರು ಪುನೀತ್ ರಾಜಕುಮಾರ್.

ಐದಾರು ತಿಂಗಳ ಎಳೆಯ ಮಗುವಿನಲ್ಲೇ ಪ್ರಸಿದ್ಧ ನಿರ್ದೇಶಕ ವಿ.ಸೋಮಶೇಖರ್ ನಿರ್ದೇಶನದ 'ಪ್ರೇಮದ ಕಾಣಿಕೆ' ಚಿತ್ರದ ಮೂಲಕ ಕನ್ನಡದ ಬೆಳ್ಳಿತೆರೆಯಲ್ಲಿ ಮೊಟ್ಟ ಮೊದಲಿಗೆ ಕಾಣಿಸಿಕೊಂಡು ಆರಂಭವಾದ 'ಅಪ್ಪು'ವಿನ ಸಿನಿಮಾ ಪಯಣ ಅವರ ಕಡೆಯ ಚಿತ್ರ 'ಗಂಧದ ಗುಡಿ' ವರೆಗೂ ತಡೆಯಿಲ್ಲದೆ ನಿಲ್ಲದ ನದಿಯಾಗಿ ಹರಿದು ಬಂದು ಕನ್ನಡ ಚಿತ್ರ ಚರಿತ್ರೆಯಲ್ಲಿ ಒಂದು ಹೊಸ ಇತಿಹಾಸ ಬರೆದಿದೆ. ಬಾಲ ನಟನಾಗಿ ಪುನೀತ್ ಅಭಿನಯಿಸಿದ 14 ಚಿತ್ರಗಳು ಸೇರಿದಂತೆ ನಾಯಕನಟರಾಗಿ ಅವರು ಅಭಿನಯಿಸಿದ 32 ಚಿತ್ರಗಳು ಒಳಗೊಂಡಂತೆ ಒಟ್ಟು 46 ಚಿತ್ರಗಳಲ್ಲಿ ಅವರು ಅಭಿನಯಿಸಿದ್ದಾರೆ. ಈ ಎಲ್ಲಾ ಚಿತ್ರಗಳು ಕೇವಲ ಸಿನಿಮಾ ಆಗಿರದೆ ಒಂದೊಂದು ಚಿತ್ರಗಳೂ ಒಂದೊಂದು ಮುತ್ತುಗಳಾಗಿ, ರತ್ನಗಳಾಗಿ ಹೊಳೆಯುತ್ತಿವೆ. ಅಂತಹ ಅಭೂತಪೂರ್ವ ಅನನ್ಯ ಸದಭಿರುಚಿ ಚಿತ್ರಗಳಿವು.ಇಲ್ಲಿ ಅಪ್ಪು ಅಭಿನಯಿಸಿರುವ ಒಂದೇ ಒಂದು ಚಿತ್ರವನ್ನೂ ಕಳಪೆ ಎಂದು ತೆಗೆದು ಹಾಕುವಂತಿಲ್ಲ. ಪ್ರತಿಯೊಂದು ಚಿತ್ರವೂ ಶ್ರೇಷ್ಠ ಮಟ್ಟದ್ದೇ ಆಗಿವೆ.ಇಂತಹ ಅದ್ಭುತ ಕಲಾವಿದ ಹಾಗೂ ಅವರು ಅಭಿನಯಿಸಿದ ಉತ್ಕೃಷ್ಟ ಚಲನಚಿತ್ರಗಳು ಕನ್ನಡಕ್ಕೆ ದೊರೆತದ್ದೇ ಕನ್ನಡದ ಸೌಭಾಗ್ಯ.

'ಅಪ್ಪು' ಎಂಬ ಎರಡಕ್ಷರ ಮಾತ್ರದಿಂದಲೇ ಕರ್ನಾಟಕವನ್ನು ಆಲಂಗಿಸಿ ಕೊಂಡಿದ್ದ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅಭಿನಯದ ಚಲನಚಿತ್ರಗಳನ್ನು ನೋಡಿ ಮೆಚ್ಚದವರುಂಟೆ? ಅಪ್ಪುವಿನ ಅಭಿನಯವನ್ನು ಇಡೀ ಕನ್ನಡನಾಡು ಒಪ್ಪಿ– ಅಪ್ಪಿ, ಮೆಚ್ಚಿ, ಮನದುಂಬಿ ಆನಂದಿಸಿದೆ.ಕಿರಿಯ ವಯಸ್ಸಿನ ಹಿರಿಯ ವ್ಯಕ್ತಿತ್ವದ ಅಪ್ಪುವಿನಂಥ ಹೃದಯವಂತ ಕಲಾವಿದನನ್ನು ಕಳೆದುಕೊಂಡು ಕನ್ನಡನಾಡು ಕಣ್ಣೀರಿಟ್ಟಿದೆ. ಅಪ್ಪುವನ್ನು ಕುರಿತು ಬರೆಯಬೇಕೆಂದರೆ ಕಂಗಳು ತುಂಬಿ ಬರುತ್ತದೆ. ಮನಸ್ಸು ಆರ್ದ್ರವಾಗುತ್ತದೆ. ಪೆನ್ನು ತನ್ನಂತಾನೆ ಕಂಪಿಸುತ್ತದೆ. ಅಪ್ಪು 'ನಟಸಾರ್ವಭೌಮ' ಎಂದು ಕರೆಸಿಕೊಂಡವರು.ಅಂತೆಯೇ ನಟನೆಯಿಂದಾಚೆಗೂ ಸಹಜ ಬದುಕಿನಲ್ಲಿ 'ಮಾನವತಾವಾದಿ' ಎಂದು ಕೂಗಿಸಿ ಕೊಂಡವರು. ಜೊತೆಗೆ ಅವರೊಬ್ಬ ವಿಸ್ಮಯದೋಪಾದಿಯ ಅದ್ಭುತ ವ್ಯಕ್ತಿಯಾಗಿ ಎಲ್ಲರನ್ನೂ, ಎಲ್ಲವನ್ನೂ ಒಳಗೊಂಡವರು. ಕನ್ನಡ ನಾಡು ಇನ್ನೆಂದೂ ಕಾಣದಂತಹ ಬಹು ಅಪರೂಪದ ವಜ್ರಸಿರಿಯ ಕಲಾ ವೈರಮುಡಿಯಿದು. ಅಪ್ಪುವಿನ ಬಗ್ಗೆ ಬರೆಯಹೊರಟರೆ ಅಕ್ಷರಗಳು ಅಳುತ್ತವೆ. ಪದಗಳು ಸೋಲುತ್ತವೆ. ಶಬ್ದಗಳು ನಿಶಬ್ದವಾಗುತ್ತವೆ. ಏನು ಬರೆಯಲಿ, ಏನು ಹೇಳಲಿ, ಕರ್ನಾಟಕ ಮಾತ್ರವಲ್ಲ ದೇಶದ ಉದ್ದಗಲಕ್ಕೂ ಈ ಕ್ಷಣಕ್ಕೂ ಅಪ್ಪು ಅಚ್ಚುಮೆಚ್ಚು. ಅಭಿನಯದ ವಿಚಾರಕ್ಕೆ ಬಂದರೆ ಅಕ್ಷರಶಃ ಅಪ್ಪು ನಟಸಾರ್ವಭೌಮನೇ! ಸಿನಿಮಾ ಜೀವನ ಒತ್ತಟ್ಟಿಗಿರಲಿ. ವೈಯಕ್ತಿಕ ವಿಷಯಕ್ಕೆ ಬಂದರಂತೂ ಅಪ್ಪು ಭೂಮಿಗೆ ಬಂದ ಭಗವಂತ. ಅತ್ಯಂತ ಕಿರಿಯ ವಯಸ್ಸಿನಲ್ಲೇ ಅಪ್ಪುವಿನಷ್ಟು ಸದ್ದಿಲ್ಲದೆ ಬಹುದೊಡ್ಡ ಜನೋಪಯೋಗಿ ಕೆಲಸವನ್ನು ಮಾಡಿದ ನಟರು ಬಹಳ ವಿರಳ. ಇಲ್ಲವೆಂದರೂ ಸರಿಯೇ!

ಅರವತ್ತು ಎಪ್ಪತ್ತರ ದಶಕದಲ್ಲಿ ಚಲನಚಿತ್ರ ಚಟುವಟಿಕೆಗಳು ಹೆಚ್ಚಾಗಿ ಚೆನ್ನೈನಲ್ಲಿ (ಆಗಿನ ಮದ್ರಾಸ್) ಕೇಂದ್ರೀಕೃತ ಗೊಂಡಿತ್ತು .ಹಾಗಾಗಿ ಕಲೆಯನ್ನೇ ನಂಬಿ ಕೊಂಡಿದ್ದ ಡಾ. ರಾಜಕುಮಾರ್ ಕುಟುಂಬ ಆಗ ಚೆನ್ನೈನಲ್ಲಿ ನೆಲೆಸಿತ್ತು. ಆ ಸಂದರ್ಭದಲ್ಲಿ 1975 ಮಾರ್ಚ್ 17ರಂದು ಪುನೀತ್ ರಾಜ್ ಕುಮಾರ್ ಅವರು ಪ್ರಸಿದ್ಧ ಕಲಾವಿದ ನಟಸಾರ್ವಭೌಮ ಡಾ.ರಾಜ್ ಕುಮಾರ್ ಮತ್ತು ಪಾರ್ವತಮ್ಮ ರಾಜ್ ಕುಮಾರ್ ದಂಪತಿಗೆ ಚೆನ್ನೈನ ಕಲ್ಯಾಣಿ ಆಸ್ಪತ್ರೆಯಲ್ಲಿ ಜನಿಸಿದರು. ಪುನೀತ್ ಅವರ ಮೊದಲ ಹೆಸರು ಲೋಹಿತ್. ಬಾಲ ನಟನಾಗಿ ಬಹಳಷ್ಟು ಚಿತ್ರಗಳಲ್ಲಿ ಅದೇ ಹೆಸರಿನಲ್ಲಿ ಅವರು ನಟಿಸಿದ್ದಾರೆ.ಅವರು ಡಾ.ರಾಜ್ ಕುಮಾರ್ ದಂಪತಿಯ ಐದನೇ ಮತ್ತು ಕಿರಿಯ ಪುತ್ರ ಅವರಿಗೆ ಇಬ್ಬರು ಅಣ್ಣಂದಿರು. ಹಿರಿಯಣ್ಣ ನಟ ಡಾ.ಶಿವರಾಜ್ ಕುಮಾರ್ ಮತ್ತು ಕಿರಿಯಣ್ಣ ನಟ ರಾಘವೇಂದ್ರ ರಾಜ್‌ಕುಮಾರ್. ಇವರಿಬ್ಬರೂ ಸಹ ನಟರು. ಹಾಗೆಯೇ ಲಕ್ಷ್ಮಿ ಮತ್ತು ಪೂರ್ಣಿಮಾ ಇಬ್ಬರು ಅಕ್ಕಂದಿರು. ತಂದೆ ಡಾ.ರಾಜ್ ಕುಮಾರ್ ಅವರು ಕಿರಿಯ ಮಗ ಪುನೀತ್‌ರನ್ನು ಮತ್ತು ಕಿರಿಯ ಮಗಳು ಪೂರ್ಣಿಮಾಳನ್ನು ತಾವು ಅಭಿನಯಿಸುತ್ತಿದ್ದ ಚಲನ ಚಿತ್ರಗಳ ಶೂಟಿಂಗ್ ಸ್ಥಳಕ್ಕೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಹಾಗಾಗಿ ಎಳೆಯ ವಯಸ್ಸಿನಲ್ಲೇ ಪುನೀತ್ ಅವರಿಗೆ ಕಲೆ ಆಕರ್ಷಿಸಿತ್ತು. ಹಾಗಾಗಿ ಮುಂದಕ್ಕೆ ಅಭಿನಯವೆಂಬುದು ಅವರಿಗೆ ಸಲೀಸಾಯಿತು. ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆ ದಾಟಿ ಯೌವನಕ್ಕೆ ಹೆಜ್ಜೆಯಿರಿಸಿದ ಅವರು, 1999 ಡಿಸೆಂಬರ್ 1ರಂದು ಚಿಕ್ಕ ಮಗಳೂರಿನ ಸುಸಂಸ್ಕೃತ ಕುಟುಂಬದ ಹೆಣ್ಣು ಮಗಳು ಅಶ್ವಿನಿ ರೇವಂತ್ ಅವರನ್ನು ವಿವಾಹವಾದರು. ಇವರಿಗೆ ಧೃತಿ ಮತ್ತು ವಂದಿತ ಎಂಬ ಇಬ್ಬರು ಪುತ್ರಿಯರಿದ್ದು ಅವರದೊಂದು ಸುಖೀ ದಾಂಪತ್ಯದ ಸಂಸಾರವಾಗಿತ್ತು.


ಬಾಲ ನಟನಾಗಿ ಪುನೀತ್: ದಿಗ್ದರ್ಶಕ ವಿ.ಸೋಮಶೇಖರ್ ಅವರು ಪುನೀತ್ ಅವರನ್ನು ಆರು ತಿಂಗಳ ಮಗುವಾಗಿದ್ದಾಗ 'ಪ್ರೇಮದ ಕಾಣಿಕೆ' (1976)ಚಿತ್ರದಲ್ಲಿ ಡಾ.ರಾಜ್ ಮತ್ತು ಆರತಿ ಅವರೊಟ್ಟಿಗೆ ತೆರೆಯ ಮೇಲೆ ತೋರಿಸಿದ್ದರು. ಇದರ ನಂತರ ಪುನೀತ್ ಒಂದು ವರ್ಷದ ಮಗುವಾಗಿದ್ದಾಗ ಕೃಷ್ಣಮೂರ್ತಿ ಪುರಾಣಿಕ್ ಅವರ ಕಾದಂಬರಿ ಆಧಾರಿತ ಅದೇ ಹೆಸರಿನ ವಿಜಯ್ ನಿರ್ದೇಶನದ 'ಸನಾದಿ ಅಪ್ಪಣ್ಣ'(1977) ಚಿತ್ರದಲ್ಲಿ ಪ್ರಮುಖವಾಗಿ ನಟಿಸಿದ್ದರು. ಮತ್ತೆ ವಿ.ಸೋಮಶೇಖರ್ ನಿರ್ದೇಶಿತ 'ತಾಯಿಗೆ ತಕ್ಕ ಮಗ' (1978) ಚಿತ್ರದಲ್ಲಿ ನಟಿಸಿದರಲ್ಲದೆ, ಎರಡು ವರ್ಷಗಳ ನಂತರ ನಿರ್ದೇಶಕ ದೊರೆ–ಭಗವಾನ್ ಅವರು, ಪುನೀತ್ ಅವರನ್ನು 'ವಸಂತಗೀತ' (1980) ಚಿತ್ರದ ಮುಖ್ಯ ಪಾತ್ರದಲ್ಲಿ ಅಭಿನಯಿಸುವಂತೆ ಮಾಡಿದರು. ಇದರ ನಂತರ ನಿರ್ದೇಶಕ ಕೆ.ಎಸ್.ಎಲ್. ಸ್ವಾಮಿ ಅವರ ಪೌರಾಣಿಕ ಚಿತ್ರ 'ಭೂಮಿಗೆ ಬಂದ ಭಗವಂತ' (1981) ಚಿತ್ರದಲ್ಲಿ ಭಗವಾನ್ ಬಾಲಕೃಷ್ಣನಾಗಿ ಪುನೀತ್ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡರು. ಅನಂತರ ಬಿ.ಎಸ್. ರಂಗ ಅವರ 'ಭಾಗ್ಯವಂತ'(1982) ಚಿತ್ರದಲ್ಲಿ ನಟಿಸಿ ಸಂಗೀತ ನಿರ್ದೇಶಕ ಟಿ.ಜಿ. ಲಿಂಗಪ್ಪ ರಾಗ ಸಂಯೋಜಿಸಿದ ತಮ್ಮ ಮೊದಲ ಜನಪ್ರಿಯ ಗೀತೆಯಾದ "ಬಾನ ದಾರಿಯಲ್ಲಿ ಸೂರ್ಯ ಜಾರಿ ಹೋದ, ಚಂದ್ರ ಮೇಲೆ ಬಂದ......" ಹಾಡನ್ನು ಹಿನ್ನೆಲೆ ಗಾಯಕರಾಗಿ ಪುನೀತ್ ಹಾಡಿದರು.ಇಲ್ಲಿ ಯಶಸ್ವಿಯೂ ಆದರು. ಇವತ್ತಿಗೂ ಬಾನ ದಾರಿಯ ಈ ಹಾಡು ಕನ್ನಡಿಗರೆದೆಯಲ್ಲಿ ಮಧುರವಾಗಿ ಗುನುಗುತ್ತಿರುತ್ತದೆ. ಅದೇ ವರ್ಷ ಪುನೀತ್ ಅವರು ತಮ್ಮ ತಂದೆಯೊಡನೆ 'ಚಲಿಸುವ ಮೋಡಗಳು' ಮತ್ತು 'ಹೊಸಬೆಳಕು' ಎರಡೂ ಜನಪ್ರಿಯ ಚಿತ್ರಗಳಲ್ಲಿ ಅಭಿನಯಿಸಿ ತಾವು ಸಹ ಪ್ರಸಿದ್ಧಿಯ ಶಿಖರ ಏರಿದರು. 'ಚಲಿಸುವ ಮೋಡಗಳು' ಚಿತ್ರದ ಶ್ರೇಷ್ಠ ಅಭಿನಯಕ್ಕಾಗಿ(1982) ಕರ್ನಾಟಕ ರಾಜ್ಯ ಸರ್ಕಾರದಿಂದ ಪುನೀತ್ ಅವರು ಅತ್ಯುತ್ತಮ ಬಾಲ ಕಲಾವಿದ ರಾಜ್ಯ ಪ್ರಶಸ್ತಿಯನ್ನೂ ಹಾಗೂ ಭಾರತ ಸರ್ಕಾರದಿಂದ ಶ್ರೇಷ್ಠ ಬಾಲ ನಟ ರಾಷ್ಟ್ರ ಪ್ರಶಸ್ತಿಯನ್ನೂ ಪಡೆದರು. ಬಾಲ್ಯದಲ್ಲೇ 'ತಂದೆಗೆ ತಕ್ಕ ಮಗ' ನೆಂಬ ಕೀರ್ತಿಗೂ ಭಾಜನರಾದರು. ನಂತರ ಅವರು 'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ತಂದೆ ರಾಜಕುಮಾರ್ ನಟಿಸಿದ್ದ ಹಿರಣ್ಯಕಶಿಪುವಿನ ಆರ್ಭಟದ ಪಾತ್ರದೆದುರು ಒಂದು ಚೂರೂ ಅಂಜದೆ ಪ್ರಹ್ಲಾದನಾಗಿ ನಟಿಸಿ ಇಡೀ ಪ್ರೇಕ್ಷಕರ ಹೃದಯ ಹೊಕ್ಕಿ ಮನಸೂರೆಗೊಂಡಿದ್ದರು. ಮತ್ತು 'ಎರಡು ನಕ್ಷತ್ರಗಳು'(1983) ಚಿತ್ರದಲ್ಲಿ ದ್ವಿಪಾತ್ರದಲ್ಲಿ ಅಭಿನಯಿಸಿ ಅಭೂತಪೂರ್ವ ಯಶಸ್ವಿ ವಿಜಯದ ಏಣಿ ಏರಿದ್ದರು. ಅಷ್ಟೇ ಅಲ್ಲ, ಈ ಚಿತ್ರದ ಶ್ರೇಷ್ಠ ಅಭಿನಯಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದಿಂದ ಎರಡನೇ ಅತ್ಯುತ್ತಮ ಬಾಲ ನಟ ಚಲನಚಿತ್ರ ರಾಜ್ಯ ಪ್ರಶಸ್ತಿಯನ್ನು ಗಳಿಸಿದ್ದರು.

1984 ರಲ್ಲಿ ಪುನೀತ್ ರಾಜ್ ಕುಮಾರ್ ಅವರು ಥ್ರಿಲ್ಲರ್ ಮಾದರಿಯ 'ಯಾರಿವನು?' ಚಿತ್ರದಲ್ಲಿ ನಟಿಸಿದರು. ಅದರಲ್ಲಿ ರಾಜನ್–ನಾಗೇಂದ್ರ ರಾಗ ಸಂಯೋಜನೆಯಲ್ಲಿ "ಕಣ್ಣಿಗೆ ಕಾಣುವ ದೇವರು ಎಂದರೆ ಅಮ್ಮನು ತಾನೆ......" ಹಾಡನ್ನು ಬಿ.ಸರೋಜಾದೇವಿ ಕಾಂಬಿನೇಶನ್‌ನಲ್ಲಿ ಹಾಡಿ ಹಿನ್ನೆಲೆ ಗಾಯಕರಾಗಿಯೂ 'ಸೈ' ಅನಿಸಿಕೊಂಡು ಬೆಳೆಯುತ್ತಾ ಹೋದರು. ಬಾಲ ನಟನಾಗಿ ಪುನೀತ್ ರಾಜಕುಮಾರ್ ಅವರಿಗೆ ದೊಡ್ಡ ಬ್ರೇಕ್ ಕೊಟ್ಟ ಚಿತ್ರವೆಂದರೆ ಅದು 'ಬೆಟ್ಟದಹೂವು' (1985). ಇದು ಎಂ.ಲಕ್ಷ್ಮೀನಾರಾಯಣ ನಿರ್ದೇಶಿಸಿದ ಶೆರ್ಲಿ ಎಲ್. ಅರೋರಾ ಅವರ 'ವಾಟ್ ತೆನ್ ರಾಮನ್, ರಾಮನ್?' ಕಾದಂಬರಿಯಾಧಾರಿತ ಚಿತ್ರ.ಬೆಟ್ಟದ ಹೂವಿನಲ್ಲಿ ಮುಗ್ಧ ರಾಮು ಆಗಿ ಅಭಿನಯಿಸಿ ಆ ಪಾತ್ರಕ್ಕಾಗಿ ಪುನೀತ್ ಅವರು 33ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಅತ್ಯುತ್ತಮ ಬಾಲ ನಟ ರಾಷ್ಟ್ರಪ್ರಶಸ್ತಿಯನ್ನು ಪಡೆದರು. ಹದಿಹರೆಯದತ್ತ ಹೆಜ್ಜೆ ಇಡುತ್ತಿದ್ದ ಕಾಲಘಟ್ಟದಲ್ಲಿ ಪುನೀತ್ ಅವರು 'ಶಿವ ಮೆಚ್ಚಿದ ಕಣ್ಣಪ್ಪ' (1988)ಚಿತ್ರದಲ್ಲಿ ತನ್ನ ಹಿರಿಯ ಸಹೋದರ ಶಿವರಾಜಕುಮಾರ್ ಜತೆ ಅಭಿನಯಿಸಿದರು. ಬಾಲನಟನಾಗಿ ಅವರು ನಟಿಸಿದ ಕೊನೆಯ ಚಿತ್ರ 'ಪರಶುರಾಮ್' (1989)ಆಗಿತ್ತು. ಅದೂ ಸಹ ಅವರ ತಂದೆ ವರನಟ ಡಾ.ರಾಜಕುಮಾರ್ ಜೊತೆಯಲ್ಲಿ!

ನಾಯಕ ನಟರಾಗಿ ಪುನೀತ್: ಏಪ್ರಿಲ್ 2002ರಲ್ಲಿ ಪುನೀತ್ ಅವರು ಪೂರಿ ಜಗನ್ನಾಥ್ ನಿರ್ದೇಶನದ, ಪಾರ್ವತಮ್ಮ ರಾಜ್ ಕುಮಾರ್ ನಿರ್ಮಾಣದ 'ಅಪ್ಪು' ಚಿತ್ರದ ಮೂಲಕ ನಾಯಕ ನಟರಾಗಿ ಕನ್ನಡದ ಬೆಳ್ಳಿತೆರೆಗೆ ಮೊದಲಿಗೆ ಪಾದಾರ್ಪಣೆ ಮಾಡಿದರು. ಇದು ನಟಿ ರಕ್ಷಿತಾ ಅವರ ಮೊದಲ ಚಲನಚಿತ್ರ ಕೂಡ ಆಗಿತ್ತು. ಇದರಲ್ಲಿ ಪುನೀತ್ ಅವರು ಕಾಲೇಜು ಹುಡುಗನ ಪಾತ್ರವನ್ನು ನಿರ್ವಹಿಸಿದ್ದರು. ಅಲ್ಲಿಂದೀಚೆಗೆ ಪುನೀತ್ ರಾಜ್ ಕುಮಾರ್ ಅವರು ಹಿಂತಿರುಗಿ ನೋಡಲೇ ಇಲ್ಲ. ಒಂದರ ಹಿಂದೆ ಒಂದರಂತೆ ಇಡೀ ಭಾರತೀಯ ಚಿತ್ರರಂಗದಲ್ಲೇ ಮಹದದ್ಭುತ ಎನ್ನುವಂತೆ ಬೆಳ್ಳಿತೆರೆಗೆ ಬಂದ 'ಗಂಧದ ಗುಡಿ' (2022) ಚಿತ್ರದವರೆವಿಗೂ ರಾಕೆಟ್ ವೇಗದಲ್ಲಿ ಅಭಿನಯಿಸುತ್ತಾ ಹೋದರು.ದುರಂತವೆಂದರೆ ಅವರ ನಟನೆಯ ಕಟ್ಟಕಡೆಯ ಚಿತ್ರ 'ಗಂಧದ ಗುಡಿ' ಹಾಗೂ ಇದರ ಹಿಂದಿನ ಚಿತ್ರಗಳಾದ 'ಲಕ್ಕಿ ಮ್ಯಾನ್' ಹಾಗೂ 'ಜೇಮ್ಸ್' ಚಿತ್ರಗಳನ್ನು ಅವರು ನೋಡಲಾಗಲೇ ಇಲ್ಲ. ಅಷ್ಟರಲ್ಲಾಗಲೇ ಪುನೀತ್ ರಾಜಕುಮಾರ್ ಅವರು ದೈವಾಧೀನರಾಗಿ ದೇವರತ್ತ ಹೊರಟು ಬಿಟ್ಟಿದ್ದರು (ನಿಧನ: 29–10–2021)

"ಇರೋದ್ ಒಂದ್ ಜೀವ್ನ, ಹಿಂದೇನಾಯ್ತೋ ನೆನ್ಪಿಲ್ಲ. ಮುಂದೇನಾಗುತ್ತೋ ಗೊತ್ತಿಲ್ಲ. ನಾನ್ ಏನ್ ತಿಂತೀನಿ, ಎಲ್ಲಿ ಮಲಗ್ತೀನಿ, ನಾನೇನ್ ಮಾಡ್ತೀನಿ, ಯಾವಾಗ ಎಲ್ಲಿ ಸಾಯ್ತೀನಿ ಎಂಬುದನ್ನೆಲ್ಲಾ ಬರೆದು ಬಿಟ್ಟಿದ್ದಾನೆ ವಿಧಿ. ಅವನ್ ಮುಂದೆ ನಮ್ದೇನಿಲ್ಲ." ಇದು ಪುನೀತ್ ರಾಜಕುಮಾರ್ ಬದುಕಿದ್ದಾಗ ತಮಾಷೆ ಎಂಬಂತೆ ಆಗಾಗ ಹೇಳುತ್ತಿದ್ದ ಜೀವನ ಸಂದೇಶ. ಈಗ ಇದರ ಗಂಭೀರತೆ ಅರ್ಥವಾಗುತ್ತಿದೆ ಅರಿತು ಬಾಳುವವರಿಗೆ ಇದಕ್ಕಿಂತ ಬದುಕಿನ ಮಾರ್ಗಸೂಚಿ ಬೇಕೆ?

ಕೇರಗಳ್ಳಿ ಕೆರೆ ಒತ್ತುವರಿ: ಕ್ರಮಕ್ಕೆ ಪ್ರಜಾಪಾರ್ಟಿ ಆಗ್ರಹ



ಕೇರಗಳ್ಳಿ ಗ್ರಾಮದ ಕೆರೆಯಿಂದ ನೀರು ಹೊರಹಾಕುತ್ತಿರುವುದನ್ನು ವಕೀಲರೂ ಆದ ಕರ್ನಾಟಕ ಪ್ರಜಾಪಾರ್ಟಿ(ರೈತಪರ್ವ) ಅಧ್ಯಕ್ಷ ಬಿ.ಶಿವಣ್ಣ ಪರಿಶೀಲಿಸಿ, ಗ್ರಾಮಸ್ಥರಿಂದ ಮಾಹಿತಿ ಪಡೆದರು.

ಮೈಸೂರು, ಅ.28– ತಾಲೂಕಿನ ಜಯಪುರ ಹೋಬಳಿ, ಕೇರಗಳ್ಳಿ ಗ್ರಾಮದ ಕೆರೆ ಒತ್ತುವರಿ ಮಾಡಿಕೊಳ್ಳಲಾಗಿದೆ ಎಂದು ಕರ್ನಾಟಕ ಪ್ರಜಾಪಾರ್ಟಿ (ರೈತಪರ್ವ) ಆರೋಪಿಸಿದ್ದು, ಈ ಸಂಬಂಧ ಕ್ರಮ ವಹಿ ಸುವಂತೆ ಸರ್ಕಾರಕ್ಕೆ ಮನವಿ ಮಾಡಿದೆ.

ಕೇರಗಳ್ಳಿ ಗ್ರಾಮದ ಸರ್ವೆ ನಂ.241/6ರಲ್ಲಿ 18 ಎಕರೆ ಸರ್ಕಾರಿ ಕಟ್ಟೆ ಮತ್ತು ಕೆರೆ ಪ್ರದೇಶವಿದ್ದು, ಇದರಲ್ಲಿ ಬಹುತೇಕ ಒತ್ತುವರಿಯಾಗಿದೆ. ಉಳಿದಿರುವ ಭಾಗವನ್ನೂ ಕಬಳಿಸುವ ಹುನ್ನಾರದಿಂದ ರಾತ್ರೋ ರಾತ್ರಿ ಕೆರೆಯನ್ನು ಬರಿದು ಮಾಡುವ ಕೃತ್ಯ ವೆಸಗಿದ್ದಾರೆ. ಬಡಗಲಹುಂಡಿ–ದಾಸನ ಕೊಪ್ಪಲು ಸಂಪರ್ಕ ರಸ್ತೆಗೆ ಮುಳ್ಳಿನ ಮರ ಗಳನ್ನು ಅಡ್ಡಹಾಕಿ ಸಂಚಾರವನ್ನು ತಡೆದು, ಜೆಸಿಬಿ ಮೂಲಕ ಆಳವಾಗಿ 1 ಕಿ.ಮೀ. ನಷ್ಟು ಕಾಲುವೆ ತೋಡಿ ನೀರನ್ನು ಹೊರ ಹಾಕುತ್ತಿದ್ದಾರೆ. ನೀರು ಬರಿದಾದ ನಂತರ ಬಡಾವಣೆ ನಿರ್ಮಾಣಕ್ಕೆ ಒತ್ತುವರಿ ಮಾಡಿ ಕೊಳ್ಳಲು ಮುಂದಾಗಿದ್ದಾರೆ ಎಂದು ಕರ್ನಾಟಕ ಪ್ರಜಾಪಾರ್ಟಿ(ರೈತ ಪರ್ವ) ಅಧ್ಯಕ್ಷ ಬಿ.ಶಿವಣ್ಣ ಆರೋಪಿಸಿದ್ದಾರೆ.

ಕೇರಗಳ್ಳಿ ಗ್ರಾಮದ ಕೆರೆಗೆ ಸುಮಾರು 150 ವರ್ಷಗಳ ಇತಿಹಾಸವಿದ್ದು, ದಾಸನ ಕೊಪ್ಪಲು, ಕೇರಗಳ್ಳಿ, ಬಡಗಲಹುಂಡಿ, ಮರಟಿಕ್ಯಾತನಹಳ್ಳಿ, ಬಲ್ಲಹಳ್ಳಿ, ರಾಮನ ಹುಂಡಿ ಗ್ರಾಮದ ಜನ–ಜಾನುವಾರು ಗಳಿಗೆ ಆಸರೆಯಾಗಿತ್ತು. ಆದರೆ ಹಂತ ಹಂತವಾಗಿ ಕೆರೆ ಪ್ರದೇಶವನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಇದೀಗ ಉಳಿದ ಜಾಗದ ಮೇಲೂ ಕಣ್ಣುಹಾಕಿದ್ದು, ಗ್ರಾಮಸ್ಥರ ಗಮನಕ್ಕೂ ಬಾರದಂತೆ ದೊಡ್ಡ ಕಾಲುವೆ ತೆಗೆದು ಆ ಮೂಲಕ ಕೆರೆಯ ಒಡಲನ್ನೇ ಬಸಿಯುತ್ತಿದ್ದಾರೆ. ಈ ಬಗ್ಗೆ ಶೀಘ್ರವೇ ಸರ್ಕಾರ ಸಂಬಂಧಪಟ್ಟ ದಾಖಲೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳ ಬೇಕೆಂದು ಮುಖ್ಯ ಮಂತ್ರಿಗಳು, ಕಂದಾಯ ಸಚಿವರು, ಸರ್ಕಾರದ ಮುಖ್ಯಕಾರ್ಯದರ್ಶಿ ಹಾಗೂ ಮೈಸೂರು ಜಿಲ್ಲಾಧಿಕಾರಿ ಗಳಿಗೆ ಮನವಿ ಸಲ್ಲಿಸುವುದಾಗಿ ಅವರು ತಿಳಿಸಿದ್ದಾರೆ.

ಕನ್ನಡಿಗರ ಮುಂದೆ 'ಗಂಧದ ಗುಡಿ' ಪ್ರದರ್ಶನ

ಪ್ರೀತಿಯಿಂದ ಅಪ್ಪಿ–ಒಪ್ಪಿದ ಜನತೆ, ಹೌಸ್ ಫುಲ್ ಪ್ರದರ್ಶನ



ಬೆಂಗಳೂರು, ಅ.28– ಕನ್ನಡಿಗರ ಪ್ರೀತಿಯ ಪವರ್ ಸ್ಟಾರ್, ಅಭಿಮಾನಿಗಳ ಪಾಲಿನ ಅಪ್ಪು ಸಹಜವಾಗಿ ನಟಿಸಿದ ಕೊನೆಯ ಚಿತ್ರ 'ಗಂಧದ ಗುಡಿ' ಇಂದು ಬಿಡುಗಡೆಯಾಗಿದ್ದು ಎಲ್ಲೆಡೆ ಹೌಸ್ ಫುಲ್ ಪ್ರದರ್ಶನ ಕಾಣುತ್ತಿದೆ. ಬೆಳಗ್ಗೆ 6 ಗಂಟೆಯಿಂದಲೇ ಥಿಯೇಟರ್‌ಗಳ ಮುಂದೆ ಜನಸಾಗರ ಸೇರಿದೆ.

ಪುನೀತ್ ರಾಜ್‌ಕುಮಾರ್ ಅವರ ಬಹುನಿರೀಕ್ಷಿತ ಸಾಕ್ಷ್ಯಚಿತ್ರ ಕರ್ನಾಟಕದ 225ಕ್ಕೂ ಹೆಚ್ಚು ಥಿಯೇಟರ್ ಗಳಲ್ಲಿ ಬಿಡುಗಡೆಯಾಗಿದೆ. ಈಗಾಗಲೇ ಆನ್‌ಲೈನ್‌ನಲ್ಲಿ ಟಿಕೆಟ್ ಬುಕ್ಕಿಂಗ್ ಸೋಲ್ಡ್ ಔಟ್ ಆಗಿದೆ. 150 ಚಿತ್ರ ಮಂದಿರಗಳು,50–60 ಮಲ್ಟಿಪ್ಲೆಕ್ಸ್ ಗಳಲ್ಲಿ ಪರಮಾತ್ಮನ ದರ್ಶನವಾಗಿದೆ. ಅಪ್ಪು ತಮ್ಮ ಕೊನೆಯ ಚಿತ್ರದಲ್ಲಿ ಕನ್ನಡ ನಾಡು, ನುಡಿಯ ಮಹತ್ವ ಸಾರಿದ್ದಾರೆ.

ಬೆಂಗಳೂರಿನ ಅನೇಕ ಥಿಯೇಟರ್‌ಗಳ ಮುಂದೆ ಅಭಿಮಾನಿಗಳು ಜಾತ್ರೆಯಂತೆ, ಹಬ್ಬದ ರೀತಿಯಲ್ಲಿ ತಮ್ಮ ನೆಚ್ಚಿನ ನಟನ ಚಿತ್ರ ಬಿಡುಗಡೆಯನ್ನು ಸಂಭ್ರಮಿಸಿದರು. ಡಾ. ರಾಜ್ ಕುಮಾರ್ ಕುಟುಂಬಸ್ಥರು ಸಹ ಚಿತ್ರ ವೀಕ್ಷಿಸಿದರು.

ಇತ್ತ ಕಂಠೀರವ ಸ್ಟುಡಿಯೋ ಬಳಿ ರಸ್ತೆಯುದ್ದಕ್ಕೂ ಪುನೀತ್ ರಾಜ್‌ಕುಮಾರ್ ಅವರ 40ಕ್ಕೂ ಅಧಿಕ ಕಟೌಟ್‌ಗಳು ರಾರಾಜಿಸುತ್ತಿವೆ. ಒಂದೊಂದು ಕಟೌಟ್ 30 ಅಡಿ ಎತ್ತರವಿದ್ದು, ಎಲ್ಲ ಕಟೌಟ್‌ಗೆ ದೊಡ್ಡ ದೊಡ್ಡ ಹೂವಿನ ಹಾರ ಹಾಕಿ ಅಲಂಕರಿಸಲಾಗಿದೆ. ಅಪ್ಪು ಕಟೌಟ್‌ಗಳು ನೋಡುಗರ ಕಣ್ಮನ ಸೆಳೆಯುತ್ತಿವೆ.

ಚಿತ್ರಮಂದಿರದ ಬಳಿ ನೆರೆದ ಅಪ್ಪು ಫ್ಯಾನ್ಸ್: ಚಿತ್ರಮಂದಿರದ ಬಳಿ ಬಂದಿರುವ ಸಾವಿರಾರು ಅಪ್ಪು ಫ್ಯಾನ್ಸ್ ಪಟಾಕಿ ಸಿಡಿಸಿ ಗಂಧದಗುಡಿ ಚಿತ್ರವನ್ನು ವೆಲ್ ಕಮ್ ಮಾಡಿದರು. ಅಭಿಮಾನಿಗಳು ಪರದೆ ಮೇಲೆ ಪುನೀತ್ ರಾಜ್ ಕಂಡು ಶಿಳ್ಳೆ ಹಾಕಿ ಕಣ್ತುಂಬಿಕೊಂಡಿದ್ದಾರೆ. ಮತ್ತೊಂದೆಡೆ ಅಪ್ಪು ಕಟೌಟ್ ಅಭಿಮಾನಿಗಳು ಆರತಿಯನ್ನು ಬೆಳಗಿದ್ದಾರೆ. ಕಾಯಿ ಒಡೆದು ಅಪ್ಪುಗೆ ಜೈಕಾರ ಹಾಕಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

WALK IN INTERVIEW
- FIELD SERVICE ENGINEER - MALE - ITI/DIPLOMA (Electronics with computer skills)
- FIELD SALES EXECUTIVE - MALE - Any Degree

Office Add : MARUTHI ENTERPRISES #76/R, Food Zone, Hootagalli Industrial area Belavadi post, Mysore - 570018 Email ID : maruthiautomation@gmail.com Phone No: 0821/4288985/4243471

ಬೇಕಾಗಿದ್ದಾರೆ
ಮೈಸೂರಿನ ಬಲ್ಲಾಳ್ ಸರ್ಕಲ್ ಬಳಿ ಇರುವ ಹೋಟೆಲ್ ಒಂದಕ್ಕೆ ಅನುಭವ ಹೊಂದಿರುವ ದೋಸೆ ಮಾಸ್ಟರ್ ಬೇಕಾಗಿದ್ದಾರೆ . ಸಂಬಳ 20000/– ರೂ ನೀಡಲಾಗುವುದು. ಸಂಪರ್ಕಿಸಿ

9900661620

ಖಾಲಿ ನಿವೇಶನ ಮಾರಾಟಕ್ಕಿದೆ
20x30 ನಿವೇಶನ ಸಂ–783/5 ಶ್ರೀರಾಂಪುರ 1ನೇ ಹಂತ, ಉತ್ತರ ಮುಖ (ವಿವೇಕಾನಂದ ಸರ್ಕಲ್ ಹತ್ತಿರ) ಆಸಕ್ತರು ಸಂಪರ್ಕಿಸಿ

9844045409

MUDA / DTCP SITES
ಹೆಚ್.ಡಿ.ಕೋಟೆ ರಸ್ತೆಯಲ್ಲಿ ಉತ್ತಮ ನಿವೇಶನಗಳು 11 ಲಕ್ಷಕ್ಕೆ ಲಭ್ಯವಿದೆ. ಬನ್ನೂರು ರಸ್ತೆಯಲ್ಲಿ 30x50 ಅಳತೆಯುಳ್ಳ ಸೈಟುಗಳು 36.5 ಲಕ್ಷಕ್ಕೆ ಮಾರಾಟಕ್ಕಿದೆ. ಬ್ಯಾಂಕ್ ಸೌಲಭ್ಯ ದೊರಕುತ್ತದೆ. ಸಂಪರ್ಕಿಸಿ:

9663104263

ಬೇಕಾಗಿದ್ದಾರೆ
ಡಿಟಿಪಿ ಮತ್ತು ಜೆರಾಕ್ಸ್ (SSLC & PUC.)
ಅಡುಗೆ ಭಟ್ಟರು (ವೆಜಿಟೇರಿಯನ್)
ಚೈನೀಸ್ ಭಟ್ಟರು (ಗೋಬಿ ಮೇಕರ್)

8310938145 /8088825039

ಶ್ರೀ ಗೌರಿಶಂಕರ ಟ್ರಾವೆಲ್ಸ್
1–11–22 (8 ದಿನ) ದೆಹಲಿ, ಆಗ್ರಾ, ಪ್ರಯಾಗ್ ರಾಜ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
10–11–22 (4 ದಿನ) ಬಾಂಬೆ, ಶಿರಡಿ, ನಾಸಿಕ್ 3 ಜ್ಯೋತಿರ್ಲಿಂಗ, ಎಲ್ಲೋರ.
24–12–22 (6 ದಿನ) ಗುರುವಾಯೂರು, ಮುನ್ನಾರ್, ತ್ರಿವೇಂಡ್ರಂ, ಕೊಚ್ಚಿ, ಆಲಪ್ಪಿ ಇತ್ಯಾದಿ.
ವಿಮಾನ / ಬಸ್ / ಊಟ / ರೂಂ

9620002114

ಬೇಕಾಗಿದ್ದಾರೆ
ಹೋಮ್ ನರ್ಸಿಂಗ್ ಟ್ರೈನಿಂಗ್ ನಾವೇ ಕೊಡುತ್ತೇವೆ 8, 9, 10, ಪಿಯುಸಿ ಪಾಸ್ ಫೇಲಾದ ಹುಡುಗ ಹುಡುಗಿಯರು ಅನುಭವ ಇರುವ ಇಲ್ಲದೆ ಇರುವ ಹೋಮ್ ನರ್ಸ್ ಹೌಸ್ ಕೀಪಿಂಗ್, ಅಡುಗೆಯವರು ಮನೆಯಲ್ಲಿ ಇದ್ದು ಕೆಲಸ ಮಾಡುವ ಮಹಿಳೆಯರು ಬೇಕಾಗಿದ್ದಾರೆ. ಸಂಬಳ 23000, ಸಂಪರ್ಕಿಸಿ

8152863106

SITES @ MYSURU
OFF MYSURU - NANJANAGUD ROAD
NEAR TALUR CIRCLE
DTCP APPROVED & 'A' KHATA
30X40 SOUTH FACING | 75% LOAN
Rs. 760/- SQFT
GSS 73497-98444

30x40 ಸೈಟು @ Rs. 15 ಲಕ್ಷ
MUDA APPROVED LAYOUT
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ನಂತರ

9538583377



SUNZONE SOLAR SYSTEM
Vishwamanava Double Road, Kuvempunagar, Mysuru

9845175443

HOUSE FOR SALE
20x30 Duplex House Three (3) BHK MUDA approved Layout, Near Dattagalli, Mysore. Contact: Mail: pantanginarasimharao@gmail.com

8310259191 8618255505

GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100 ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)

9964522225

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/A, ಸರಸ್ವತಿಪುರಂ, ಮೈಸೂರು
ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಮಾಡಿಕೊಡುತ್ತೇವೆ. ಈ ಕೆಳಗಿನ ಸ್ಥಳಗಳಿಗೆ, ರಾಘವೇಂದ್ರ ನಗರ, ಕನಕಗಿರಿ, ಜನತನಗರ, ಲೋಕನಾಯಕ ನಗರ, ಗಣೇಶನಗರ, ಮಹದೇವಪುರ. Loan Amount 5,00,000 to 20,00,000.

8088647887

ನಾನ್ ವೆಜ್ ರೆಸ್ಟೋರೆಂಟ್
ಕೆಲಸಗಾರರು ಬೇಕಾಗಿದ್ದಾರೆ. ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಖಾಲಿ ಹುದ್ದೆಗಳು: ಹೌಸ್ ಕೀಪಿಂಗ್, ಸರ್ವರ್ & ಕೌಂಟರ್ ಹುದ್ದೆ. ಸ್ಥಳ: ಮೈಸೂರು. ಸಂಪರ್ಕಿಸಿ:

9380455140

FOR SALE
20x30, Duplex 3BHK with attached, Newly Built Building with furnished at Lal Bahadur Shastri Nagar, near Police Layout, T. Narasipura Road Price: 58 Lakhs Final

Contact: 98863 78344

ಯುಪಿಎಸ್ ಬ್ಯಾಟರಿಗಳಿಗೆ ಏ.ಎಂ.ಸಿ ಗಳು
ಕೇವಲ 599/-* ರೂ. ಗಳಿಗೆ
ಸಂಪರ್ಕಿಸಿ: ರುತ್ವಿಕ್ ಎಂಟರ್‌ಪ್ರೈಸಸ್
[illegible]

ಮೊ: 9945930851

BUILDING FOR RENT
at Prime Location in K.T.Street, 3 Floors, G & 1 - Shop 2 & 3 - Gowdown (15x25) Size

9449087351 / 8618622350

ಬೈಕ್ ರೈಡರ್ ಬೇಕಾಗಿದ್ದಾರೆ
rapido BIKE TAXI
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.

04045209698

FOR RENT
500 Sq. Ft. Commercial / Godown space available with bathroom, for Rent in Krishnamurthypuram, 2nd Main Road, 20 feet from Ballal Circle Main Road. For Details Contact:

9886082620

ಬೇಕಾಗಿದ್ದಾರೆ
ಶ್ರೀ ಸಂಜೀವಿನಿ ಗೋಲ್ಡ್ ಕಂಪನಿಯಲ್ಲಿ ಕೆಲಸ ಮಾಡಲು ಟೆಲಿಕಾಲರ್ ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇನ್‌ಸೆಂಟಿವ್ ಇರುತ್ತದೆ. ಸಂಬಳ: 8000 ರಿಂದ 15,000 ವರೆಗೆ. ಸಂಪರ್ಕಿಸಿ:

6362895985 / 9538073584

ಉದ್ಯೋಗವಕಾಶ
ಮೈಸೂರು, ಚಾಮರಾಜನಗರ, ನಂಜನಗೂಡು ಮತ್ತು ಮಂಡ್ಯ ಜಿಲ್ಲಾದ್ಯಂತ ನಿವೃತ್ತಿ / ಸ್ವಯಂ ನಿವೃತ್ತಿ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ ಸರ್ಕಾರದಿಂದ ಮಾನ್ಯತೆ ಪಡೆದ ಹೆಸರಾಂತ ಬ್ಯಾಂಕ್‌ವತಿಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary & ESI, PF ಸಂಪರ್ಕಿಸಿ:

9110676257

WANTED FLAT
3 BHK FLAT in Mysore Please Contact:

99005 35779

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive

8884171888

WANTED
Female experienced OFFICE ASSISTANT, fluency in English. SMART HAIR FIXING Anikethana Road, Kuvempunagar. Contact:

Mob: 8792945515

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ

9342114069

ಹೊಸ ಮನೆ ಮಾರಾಟಕ್ಕಿದೆ
ಡ್ಯೂಪ್ಲೆಕ್ಸ್ ಮನೆ 20x30 ವೆಸ್ಟ್ ಫೇಸ್, ನಾರ್ತ್ ಡೋರ್, ಇಟಾಲಿಯನ್ ಕಿಚನ್, ವಾಡ್ರೋಬ್, ಗ್ರಾನೈಟ್, ಸಿಸಿ ಕ್ಯಾಮರ ಸೋಲಾರ್ ಚಿಮಿಣಿ, ಹಾಲ್‌ಗೆ ಪಿಓಪಿ ಮತ್ತೆ ರೂಮಿಗೆ ಫ್ಯಾನ್, ಉಯ್ಯಾಲೆ, ಆಲ್ ಟೀಕುಡ್ ಮರ ಜಾಗ್ವಾರ್ ಕಮೋಡಗಳು ಬಾತ್ ಟಬ್, ಆರ್ಕಿಟೆಕ್ ಮನೆ ದಟ್ಟಗಳ್ಳಿ ನಿಯರ್ ಶಕ್ತಿ ಗಣಪತಿ ದೇವಸ್ಥಾನ. ಸಂಪರ್ಕಿಸಿ:

9980325199

ಭೋಗ್ಯಕ್ಕೆ ಇದೆ
20x40 ಕಾರ್ನರ್ ಮನೆ E/S ಭೋಗ್ಯಕ್ಕೆ ಇದೆ. 2BHK, ದಟ್ಟಗಳ್ಳಿ 3ನೇ ಹಂತ, ಮೈಸೂರು

7892719006

FOR SALE
1) 30x40, 12 Lakhs 30x50 15 L sites available attch Brahmins E Blk layout , 2)12x36 G+2 House Kuvempu Nagar, 28 Guntas Land in Varkodu , 3) 30x40 New House Dattagalli Srirampura Vijay Nagr

PRAKRUTHI PROPERTIES 90359 90359/95386 90359

ಬೇಕಾಗಿದ್ದಾರೆ
SDJ ಗೋಲ್ಡ್ ಜ್ಯುಯಲ್ಲರಿಗೆ ಕೆಲಸಕ್ಕೆ Telecaller ಮತ್ತು Field executive boys ಬೇಕಾಗಿದ್ದಾರೆ. ಸಂಬಳ: 20,000

9513066625

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura & Gokulam
Call: 7829937469, 9901803394
ONLINE TRAINING AVAILABLE

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:

7406375196, 9880548596

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

6364079244

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಮಸಾಜ್ ಪಾರ್ಲರ್ ಮಾರಾಟಕ್ಕಿದೆ
ವಿಜಯನಗರದ ನಾಲ್ಕನೇ ಹಂತದಲ್ಲಿ ಬ್ಯೂಟಿ ಪಾರ್ಲರ್ ಅಂಡ್ ಸ್ಪಾ Ready to move ಸಂಪರ್ಕಿಸಿ

7975442393

2 SITES FOR SALE
(30x40) at Trimurthy Nagar, near Acharya Vidya Kula & Central St. Joseph's School, Mysore-Hunsur Road, Price: Rs. 12 Lakhs

95388 39926

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

ಬೇಕಾಗಿದ್ದಾರೆ
ದಿನಸಿ ಅಂಗಡಿಗೆ ಹುಡುಗರು–2 ಹುದ್ದೆ
ಬಾಲಕೃಷ್ಣ ರೈಸ್ ಕಾರ್ನರ್
23ಎಫ್, 3ನೇ ಹಂತ, ಇಂಡಸ್ಟ್ರಿಯಲ್ ಸಬರ್ಬ್ ದಕ್ಷಿಣ ಮೈಸೂರು, ಮೈಸೂರು–08

Ph.: 9986756866

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ

9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.

7795560970

ಕೆಲಸಕ್ಕೆ ಬೇಕಾಗಿದ್ದಾರೆ
B.Sc or B.Com ವಿದ್ಯಾರ್ಹತೆ ಕಂಪ್ಯೂಟರ್ ಅನುಭವವಿರುವ ಹುಡುಗಿಯರು ಆದ್ಯತೆಗೆ ತಕ್ಕಂತೆ ಸಂಬಳ ನೀಡಲಾಗುವುದು. ಸಂಪರ್ಕಿಸಿ: ಅಗ್ರಹಾರ, ಮೈಸೂರು

7259784408

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 12,000 ದಿಂದ 18,000 (ESI, PF ಸೌಲಭ್ಯ ಇರುತ್ತದೆ.)

8050699742 / 7892480649

WANTED
Part time or Full time employees for filling Petrol & Gas in Petrol Bunk. Cashier cum Helper
Qualification: SSLC Pass
Time: 6am onwards or 6pm onwards

Contact: 9844002226

NEW HOUSE FOR SALE
Dattagalli 3rd Stage, 30x40, E/F, Behind Supreme Public School
Pillar Construction G/F-12 Sqft., -2 BHK F/F-6 Sqft., -1 BHK

Mob: 97408 24284

Brokers Excuse

WANTED
PU Female Office Asst.
At Saraswathipuram, Kamakshi Hospital Road, near Kuvempu School.

9342125252

ವಾಹನಗಳು ಬೇಕಾಗಿದೆ
ಕಂಪನಿಗಳಿಗೆ ಮೆಟಿರಿಯಲ್ ಸರಬರಾಜು ಮಾಡಲು ಹೊಸ ಬೊಲೆರೊ ಪಿಕ್‌ಅಪ್ ವಾಹನಗಳು ಕಿಲೋ ಮೀಟರ್ ಆಧಾರದಲ್ಲಿ ಬಾಡಿಗೆಗೆ ಬೇಕಾಗಿದೆ. ಸಂಪರ್ಕಿಸಿ: ಹಾಸನ (ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ)

8555874337

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.

9880813586 6360884930

ಕಳೆದಿದೆ
ಸನಾ ಖಾನಂ, ನಂ.151, ಇಲಿಯಾಜ್ ಮಸೀದಿ ಹಿಂಭಾಗ, 1ನೇ ಹಂತ, ಕೆಸರೆ, ಮೈಸೂರು ಇವರ Diploma in CP [CK- Commercial Practice (Kannada)] 3ನೇ ಸೆಮಿಸ್ಟರ್‌ನ ಅಂಕಪಟ್ಟಿ ನಂ. 108CK09029 ಅಂಕಪಟ್ಟಿಯು ಮನೆ ಬದಲಾಯಿಸುವಾಗ ಕಳೆದು ಹೋಗಿರುತ್ತದೆ. ಸಿಕ್ಕವರು ಸಂಪರ್ಕಿಸಿ:

9449998898

ಹೋಂ ನರ್ಸಿಂಗ್ ಕೆಲಸ
ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇಧಿತೆಯರು, ಹೋಂನರ್ಸಿಂಗ್, ಕೆಲಸಕ್ಕೆ ಅನುಭವ ಇರುವ / ಇಲ್ಲದಿರುವ ತಕ್ಷಣವೇ ಸಂಪರ್ಕಿಸಿ ಊಟ, ವಸತಿಯೊಂದಿಗೆ ಸಂಬಳ: 12,000 – 21,000 ರವರೆಗೆ. ಆಧಾರ್ ಕಾರ್ಡ್ & ಫೋಟೋ ಕಡ್ಡಾಯ (ಸರ್ಕಾರಿ ನೊಂದಾಯಿತ ಸಂಸ್ಥೆ)

9035113222

ಬೇಕಾಗಿದ್ದಾರೆ
ಮೈಸೂರಿನ ಕಡಕೊಳ ಇಂಡಸ್ಟ್ರಿಯಲ್ ಏರಿಯಾದಲ್ಲಿ ನೂತನವಾಗಿ ಪ್ರಾರಂಭವಾಗಿರುವಂತ ಸೋಲಾರ್ ಕಂಪನಿಗೆ ವಿವಿಧ ಹುದ್ದೆಗಳಿಗೆ Digital Marketing, Accountant, Marketing Manager, Sales Executives, Welders, Drivers, Electrician, Security Guards ಬೇಕಾಗಿದ್ದಾರೆ ಆಕರ್ಷಕ ವೇತನ ದೊರೆಯುತ್ತದೆ. ಸಂಪರ್ಕಿಸಿ:
9964832118 / 9980917976
ಸ್ಥಳ: ESSAR PRODUCTS Pvt. Ltd., #19/A, Kadakola Indl Area, Mysore

HOUSE RENT/SALE
40x60 Duplex & 30x40 Ground for RENT at Dattagalli.
2 BHK RENTat Krishnamurthypuram
30x40 Duplex SALE at Srirampura
25x40 Old House SALE at RK Nagar

Call: 96631 36318

ಸೈಟು ಮಾರಾಟಕ್ಕಿದೆ
40x40 ಅಳತೆಯ 'ಎ' ಖಾತೆ ಹೊಂದಿರುವ ಸೈಟು ಮಾರಾಟಕ್ಕಿದೆ. 18 ಲಕ್ಷದ 50 ಸಾವಿರಗಳು ಟಿವಿಎಸ್ ಫ್ಯಾಕ್ಟರಿ ಹತ್ತಿರ (ಲೋನ್ ಸೌಲಭ್ಯವಿದೆ) ಮೈಸೂರು

9742198093

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Pharma Assistant	PUC / Degree

0821-2499188 / 9880186386

ಶ್ರೀ ಕನ್ನಿಕಾ ಪರಮೇಶ್ವರಿ ಜ್ಯೋತಿಷ್ಯಾಲಯ ಪಂಡಿತ್. ಭೀಮರಾವ್
ನಿಮ್ಮ ಒಂದೇ ಕರೆ ನಿಮ್ಮ ಭವಿಷ್ಯವನ್ನು ಬದಲಿಸಬಲ್ಲದು ಬೇರೆ ಯಾರಾದರೂ ಮಾಡಿಕೊಟ್ಟಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸಾಲ ಬಾಧೆ, ದಾಂಪತ್ಯ ಸಮಸ್ಯೆ, ಪ್ರೇಮ ವಿಚಾರ, ಅತ್ತೆ ಸೊಸೆ ಕಲಹ, ಲೈಂಗಿಕ ಸಮಸ್ಯೆ ಇನ್ನೂ ಅನೇಕ ಗುಪ್ತ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ 100% ಶಾಶ್ವತ ಪರಿಹಾರ

9972196728

ವಿಳಾಸ: 806, 3ನೇ ಹಂತ, ಆದಿತ್ಯ ಆಸ್ಪತ್ರೆ ಹತ್ತಿರ, ಗೋಕುಲಂ, ಮೈಸೂರು.

ಮನೆ ಬಾಡಿಗೆಗೆ ಇದೆ
ದಿವಾನ್ಸ್ ರೋಡ್, Near Hayagreeva College, Mysore

9448546024

Advance - 30,000/- Rent - 3,000/- Batculars or Family

ವಧು – ವರರ ಮಾಹಿತಿ ಕೇಂದ್ರ
ಒಕ್ಕಲಿಗ / ಲಿಂಗಾಯತ / ಕುರುಬ / ನಾಯಕ / SC & ಎಲ್ಲಾ ಜಾತಿಯ ವಧು – ವರರಿಗಾಗಿ ಸಂಪರ್ಕಿಸಿ (Second Marriage Also)

9343175000

PUBLIC NOTICE
My Client Mr. Ajmal Pasha, S/o. Late. Aslam Pasha, K.N. Pura, Ghousiya Nagar, Mysuru, have intend to purchase the house bearing No. 4630, Sathgalli, 2nd Stage, 6X9 mtrs Ground & First Floor from Mr. Mubarak Khan, S/o. Late. Samad Khan, if anybody have any objection, contact Advocate Ayub Ahmed Khan within 7 days with valid document otherwise it will be assumed that the property having clear title and he will purchase the same. Mysuru

Sd/- Ajmal Pasha Date. 27.10.2022
Sd/- Ayub Ahmed Khan, Advocate, Mandi Mohalla, Mysore, Ph: 9880660318

35X55, WEST FACE SITE FOR SALE
at Jaynagar, K R Pet, Mysore Channarayapatna Road. Contact:

9019119996

WANTED
- RECEPTIONIST: M/F
- HOUSE KEEPING SUPERVISOR: M/F

Contact:

99452 30505 0821-4252134

ಶ್ರೀ ಚಾಮುಂಡೇಶ್ವರಿ ಅಸೋಸಿಯೇಟ್ಸ್
ಮನೆ ಸಾಲ, ನಿವೇಶನ ಸಾಲ, ವಾಹನ ಸಾಲ, ವೈಯಕ್ತಿಕ ಸಾಲ ಹಾಗೂ 11ಎ, 11ಬಿಗೆ ಸಾಲ ಕೊಡಿಸಲಾಗುವುದು. ಸಂಪರ್ಕಿಸಿ:

7975453083

ಬೇಕಾಗಿದ್ದಾರೆ
ಫ್ಯಾಕ್ಟರಿ ಗೂಡ್ಸ್ ಟೆಂಪೋ ಓಡಿಸಲು ನುರಿತ ಚಾಲಕರು ಬೇಕಾಗಿದ್ದಾರೆ. ಬ್ಯಾಡ್ಜ್ ಹೊಂದಿರತಕ್ಕದ್ದು. ನಂ.271, ಹೆಬ್ಬಾಳು ಕೈಗಾರಿಕಾ ಪ್ರದೇಶ ಮೈಸೂರು – 570018 ಕರೆ ಮಾಡುವ ಸಮಯ: 10 ರಿಂದ 5 ವರೆಗೆ

8792149329

ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ ಅನುಭವಸ್ಥ ಮಹಿಳಾ ಬಿ.ಕಾಂ. ಪದವೀಧರ ಅಭ್ಯರ್ಥಿ ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು Tally ಬಗ್ಗೆ ತಿಳುವಳಿಕೆ ಇರಬೇಕು. ಕರೆ ಮಾಡುವ ಸಮಯ: 10 ರಿಂದ 5 ವರೆಗೆ ನಂ.271, ಹೆಬ್ಬಾಳು ಕೈಗಾರಿಕಾ ಪ್ರದೇಶ ಮೈಸೂರು – 570018. ನಿಮ್ಮ ಸ್ವ–ವಿವರವನ್ನು ಈ ಕೆಳಗಿನ ಇ–ಮೇಲ್‌ಗೆ ಬರೆದು ಕಳುಹಿಸಿ globalagribiotech2014@gmail.com

8792149329

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.

9740733021 / 9535028750

SHOP FOR RENT
at N.S Road, Mysore 1500 Sqft. Contact:

90368 75393

INDUSTRIAL LAND FOR LEASE
at Nanjangud Industrial Land (Thandya) for Long Term Lease. Please Contact:

99003 77786/ 98444 78643

WANTED ACCOUNTANT
Qualification: B.Com Preferably (Male or Female) 45-60 years, Should knowsTally.

9036177595

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್ ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

WANTED SERVICE ENGINEER
B.E/ Diploma/ITI/Mechanical
Kent RO Water Purifier Authorised Service center / Home Appliances
Tellecallers / Office Work-Female

9900237315 9845963421

ಬೇಕಾಗಿದ್ದಾರೆ
ಮನೆಯಲ್ಲಿ ಅಡುಗೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. (ಸಸ್ಯಹಾರಿ) ಗಂಗೋತ್ರಿ ಲೇಔಟ್, ಮೈಸೂರು

9945040509

FOR SALE
Commercial Space for sale, suitable for Clinics/ Office Space at 'I' Block, Ramakrishna Nagar, Mysore

94833 58399

CERTIFICATE LOST
Certificate No. 065229-9 (2000-01 Dte Board Original Diploma Certificate has been lost on 26.10.2022, 11am at Vivekanandanagar.
Finders please contact:
97311 34334/ 9972144863

ಶ್ರೀ ಗುರು ದತ್ತಾತ್ರೇಯ ಜ್ಯೋತಿಷ್ಯ ಮಂದಿರ ಪಂಡಿತ ಗುರುದತ್ತ ಭಟ್
ಗುರುವಿನ ದೈವ ಶಕ್ತಿ ಜ್ಯೋತಿಷರು
ನಿಮ್ಮ ಜನ್ಮ ದಿನಾಂಕ ಸಮಯದ ಆಧಾರದಿಂದ ಜಾತಕ ನೋಡಿ ಕುಟುಂಬದ ಸಂಪೂರ್ಣ ಭವಿಷ್ಯ ನುಡಿಯುವ ಏಕೈಕ ಜೋತಿಷ್ಯರು, ನಿಮ್ಮ ಜೀವನದಲ್ಲಿ ಅನುಭವಿಸುವ ಸಂಕಷ್ಟಗಳಿಗೆ ದತ್ತಾತ್ರೇಯ ಸ್ವಾಮಿ ಅನುಗ್ರಹದಿಂದ ಪರಿಹಾರ ಶತಸಿದ್ಧ. ಚಿಂತಿಸ ಬೇಡಿ, ಇಂದೇ ಕರೆ ಮಾಡಿ.

9686315566

ಮನೆ ವಿಳಾಸ: #1381, ಸುಯೋಗ ಆಸ್ಪತ್ರೆ ಪಕ್ಕ, ರಾಮಕೃಷ್ಣನಗರ, ಮೈಸೂರು.
ಇದು ಚಮತ್ಕಾರ ಅಲ್ಲ ಸಿದ್ಧಿ ಸಾಧಕರ ಸಾಧನೆ

ಮಳಿಗೆಗಳು ಬಾಡಿಗೆಗೆ ದೊರೆಯುತ್ತದೆ
ಪಿರಿಯಾಪಟ್ಟಣದ ಬಿ.ಎಂ. ರಸ್ತೆಯ ನಿಲ್ದಾಣದ ಮುಂಭಾಗದಲ್ಲಿರುವ ಮಾಲತಿ ಆರ್ಕೇಡ್‌ನಲ್ಲಿ 36x35 ಅಳತೆಯ ಗ್ರೌಂಡ್ ಫ್ಲೋರ್ ಹಾಗೂ 12x35 ಅಳತೆಯ ಫಸ್ಟ್ ಫ್ಲೋರ್‌ನ ಮಳಿಗೆಗಳು ಆಫೀಸ್ ಅಥವಾ ಗೋಡೌನ್‌ಗೆ ಬಾಡಿಗೆಗೆ ದೊರೆಯುತ್ತವೆ. ತಕ್ಷಣವೇ ಸಂಪರ್ಕಿಸಿ:

9449679141

WANTED
Typist, DTP ಕೆಲಸಕ್ಕೆ ಇಂಗ್ಲೀಷ್ & ಕನ್ನಡ ಜಯನಗರ

9844242414

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
14/11 :– ಗುಜರಾತ್, ಅಕ್ಷರಧಾಮ, ವೈಷ್ಣೋದೇವಿ, ದ್ವಾರಕಾ, ಬೆಟ್ ದ್ವಾರಕಾ, ನಾಗನಾಥ್ ಜ್ಯೋತಿರ್ಲಿಂಗ, ಸೋಮನಾಥ್, ನಿಷ್ಕಲಂಕ್ ಮಹಾದೇವ್, ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಮೆ. 3/11– ಕಾಶಿ. 26/11 : ಪುರಿ ಜಗನ್ನಾಥ, ಕೋನಾರ್ಕ್ ಸೂರ್ಯ ದೇವಸ್ಥಾನ, ಚಂದ್ರಭಾಗ ಬೀಚ್ ಪ್ರತಿ ವ್ಯಕ್ತಿಗೆ– 13500/–. 22/10:– M P 2 ಜ್ಯೋತಿರ್ಲಿಂಗ, ಉಜ್ಜಯಿನಿ ಮಹಾಕಾಳೇಶ್ವರ, ಓಂಕಾರೇಶ್ವರ ಜ್ಯೋತಿರ್ಲಿಂಗ ಪ್ರತಿ ವ್ಯಕ್ತಿಗೆ :– 13,000/–. 10/12:– ಆಂಧ್ರ– ತೆಲಂಗಾಣ ಪ್ಯಾಕೇಜ್.

9964527782 / 9591017782

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ ಶನಿವಾರ 29 ಅಕ್ಟೋಬರ್ 2022

ನಾನು ಛೀ-ಥೂ ಎನಿಸಿಕೊಂಡು ಅಧಿಕಾರ ನಡೆಸಲಿಲ್ಲ

● ಎದೆತಟ್ಟಿ ಅಬ್ಬರಿಸಿದ ಸಿದ್ದರಾಮಯ್ಯ ● ಬಿಜೆಪಿ ಜಾತಿ, ಧರ್ಮದ ಹೆಸರಲ್ಲಿ ಜನರ ಎತ್ತಿಕಟ್ಟುತ್ತಿದೆ



ಮಂಡ್ಯಅ.28– ರಾಜ್ಯದ ಜನರ ಆಶೀರ್ವಾದದಿಂದ ಐದು ವರ್ಷ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ನಾನು ಯಾರೊಬ್ಬರಿಂದಲೂ ಛೀ... ಥೂ... ಎನಿಸಿಕೊಂಡು ಅಧಿಕಾರ ನಡೆಸಲಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎದೆ ತಟ್ಟಿಕೊಂಡು ಹೇಳಿದರು.

ಶುಕ್ರವಾರ ತಾಲೂಕಿನ ಬಸರಾಳು ಹೋಬಳಿಯ ತಿರುಮಲಾಪುರ ಗ್ರಾಮದಲ್ಲಿ ಶ್ರೀ ಹುಲಿಯೂರಮ್ಮದೇವಿ (ಹಳೇ ಊರಮ್ಮ) ದೇವಾಲಯ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಸ್ಥಾಪಿತವಾಗಿರುವ ಶ್ರೀ ಹುಲಿಯೂರಮ್ಮದೇವಿ ವಿಗ್ರಹ ಪ್ರತಿಷ್ಠಾಪನೆ ಮತ್ತು ಉದ್ಘಾಟನಾ ಮಹೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಾವು ಅಧಿಕಾರದಲ್ಲಿದ್ದಾಗ 158 ಭರವಸೆಗಳನ್ನು ಈಡೇರಿಸಿದ್ದೇವೆ. ಅದನ್ನೂ ಮೀರಿ 30ಕ್ಕೂ ಅಧಿಕ ಹೆಚ್ಚುವರಿ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ಎಲ್ಲಾ ಜಾತಿಯ ಬಡವರಿಗೂ ಯೋಜನೆಗಳನ್ನು ನೀಡಿದ್ದೇವೆಯೇ ಹೊರತು, ಕೆಲವೇ ಜಾತಿಗಳಿಗೆ ಸೀಮಿತವಾಗಿ ಅಧಿಕಾರ ನಡೆಸಲಿಲ್ಲ ಎಂದರು.

ರಾಜ್ಯ ಬಿಜೆಪಿ ಸರ್ಕಾರ ಎಲ್ಲವನ್ನು ಹಾಳು ಮಾಡುತ್ತಿದ್ದು, ಜಾತಿ, ಧರ್ಮದ ಹೆಸರಿನಲ್ಲಿ ಜನರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದೆ. ಇಂತಹವರು ಮತ್ತೆ ರಾಜ್ಯದಲ್ಲಿ ಅಧಿಕಾರ ನಡೆಸಬೇಕೇ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ 2 ವರ್ಷದಿಂದ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಟ್ಟಿಲ್ಲ. ವಿದ್ಯಾಸಿರಿ ಯೋಜನೆಯನ್ನೂ ರಾಜ್ಯ ಬಿಜೆಪಿ ಸರ್ಕಾರ ನಿಲ್ಲಿಸಿದೆ. ಎಸ್ಸಿ-ಎಸ್ಟಿಗಳ ಬಗ್ಗೆ ಮಾತನಾಡಲು ಇವರಿಗೆ ಯಾವ ನೈತಿಕತೆ ಇದೆ? ಕೃಷಿ ಭಾಗ್ಯ ಕಾರ್ಯಕ್ರಮ ಕೂಡ ನಿಲ್ಲಿಸಿದ್ದಾರೆ. ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿಯವರನ್ನು ಮುಂಬಾಗಿಲಿನಿಂದ ಓಡಿಸೋಣ ಎಂದು ಕರೆ ನೀಡಿದರು.

2023ರಲ್ಲಿ ನಾವು ಅಧಿಕಾರಕ್ಕೆ ಬಂದರೆ ಜನಪರವಾದ ಕೆಲಸ ಮಾಡುತ್ತೇವೆ. ಮೈಷುಗರ್ ಕಾರ್ಖಾನೆಗೆ ಘೋಷಿಸಿದ್ದ ಅನುದಾನ ಬಿಡುಗಡೆ ಮಾಡಿ ಕಾರ್ಖಾನೆಯನ್ನು ಮಾದರಿಯಾಗಿ ಅಭಿವೃದ್ಧಿಪಡಿಸುತ್ತೇವೆ. ಜನರಿಗೆ ಉಪಯೋಗವಾಗುವ ಅನೇಕ ಯೋಜನೆಗಳನ್ನು ಜಾರಿಗೆ ತರುತ್ತೇವೆ ಎಂದು ಘೋಷಿಸಿದರು.

ದೇವರು ಎಲ್ಲಾ ಕಡೆ ಇದ್ದಾನೆ ಎಂದು ನಾವು ಓದಿದ್ದೇವೆ ಮತ್ತು ತಿಳಿದಿದ್ದೇವೆ. ದೇವರು ನಮ್ಮಲ್ಲೂ ಸಹ ಇದ್ದಾನೆ. ಪ್ರತಿನಿತ್ಯ ಮಾಡುವ ಕೆಲಸಗಳಿಂದ ದೇವರು ನಾವು ಒಳ್ಳೆಯದು ಮಾಡುತ್ತಿದ್ದೀವಾ ಅಥವಾ ಕೆಟ್ಟದ್ದನ್ನು ಮಾಡುತ್ತಿದ್ದೀವಾ ಎಂಬುದನ್ನು ನೋಡುತ್ತಿರುತ್ತಾನೆ. ಜನರಿಗೆ ಶ್ರೇಯಸ್ಸನ್ನು ಬಯಸುವ ಕೆಲಸ ಮಾಡಿದಾಗ ದೇವರು ನಮಗೆ ಒಳಿತನ್ನು ಮಾಡುತ್ತಾನೆ ಎಂದರು.

ಕೇವಲ ದೇವಸ್ಥಾನವನ್ನು ಕಟ್ಟಿದರೆ ಸಾಲದು, ಪ್ರತಿಮೆಗಳನ್ನು ಸ್ಥಾಪಿಸಿದರೆ ಸಾಲದು, ನಾವೆಲ್ಲರೂ ಸತ್ಯದಿಂದ ನಡೆದುಕೊಳ್ಳಬೇಕು. ಆಗ ಸತ್ಯವೇ ದೇವರು ಎಂಬುದು ನಮಗೆ ಅರ್ಥವಾಗುತ್ತದೆ. ಸ್ವರ್ಗ ಮತ್ತು ನರಕ ಎರಡೂ ಇಲ್ಲೇ ಇವೆ. ನಾವು ಸತ್ಯದಿಂದ ನಡೆದುಕೊಂಡರೇ ಅದೇ ಸ್ವರ್ಗ. ನಾವು ಸುಳ್ಳು ಹೇಳಿ ಜೀವನ ಮಾಡಿದರೆ ಅದೇ ನರಕ ಎಂದು ಅಭಿಪ್ರಾಯಪಟ್ಟರು.

ದೇವರ ಮುಂದೆ ನೈವೇದ್ಯಕ್ಕೆ ಹಣ್ಣು-ಹಂಪಲು, ಹಣವಿಟ್ಟರೆ ಸಾಲದು, ಮನಸ್ಸಿನಲ್ಲಿ ಭಕ್ತಿ ಹಾಗೂ ಪರಿಶುದ್ಧತೆ ಇರಬೇಕು. ದೇವರು ಬಯಸುವುದು ಸಹ ಅದನ್ನೇ. ನಾವು ಮಾಡುವ ಪ್ರತಿ ಕೆಲಸವನ್ನು ನಮಗೋಸ್ಕರ ಮಾಡದೇ ಪರರಿಗೋಸ್ಕರ ಮಾಡಬೇಕು. ಅದನ್ನು ದೇವರು ಮೆಚ್ಚುತ್ತಾನೆ ಎಂದರು.

ವೇದಿಕೆಯಲ್ಲಿ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಕಾಂಗ್ರೆಸ್ ಮುಖಂಡರಾದ ಗಣಿಗ ರವಿಕುಮಾರ್ ಗೌಡ, ಡಾ.ಕೃಷ್ಣ, ದಡದಪುರ ಶಿವಣ್ಣ, ಕೆ.ಕೆ.ರಾಧಾಕೃಷ್ಣ, ಸಿದ್ದರೂಢ ಸತೀಶ್‌ಗೌಡ, ಯು.ಸಿ.ಶಿವಕುಮಾರ್, ಸಿ.ಡಿ.ಗಂಗಾಧರ್, ಟ್ರಸ್ಟ್‌ನ ಗೌರವಾಧ್ಯಕ್ಷ ಜೆ.ಹುಚ್ಚಪ್ಪ, ಅಧ್ಯಕ್ಷ ಆನಂದ್, ಟ್ರಸ್ಟಿಗಳಾದ ಮರೀಗೌಡ, ಜವರಪ್ಪ, ಚಂದ್ರು, ಕಂಬದಹಳ್ಳಿ ಪುಟ್ಟಸ್ವಾಮಿ ಇನ್ನಿತರರಿದ್ದರು.

ಕೆಆರ್‌ಎಸ್ ಬೃಂದಾವನದಲ್ಲಿ ಮತ್ತೆ ಚಿರತೆ ಪ್ರತ್ಯಕ್ಷ

● ಪ್ರವಾಸಿಗರ ಹೊರ ಕಳಿಸಿದ ಅಧಿಕಾರಿಗಳು
● ಪ್ರವೇಶ ಶುಲ್ಕ ಮರು ಪಾವತಿಗೆ ಆಗ್ರಹ
● ಕೆಲ ಕಾಲ ಗೊಂದಲ; ಇಂದು ಚಿರತೆ ಸೆರೆಗೆ ಕಾರ್ಯಾಚರಣೆ



ಶ್ರೀರಂಗಪಟ್ಟಣ, ಅ.28(ವಿನಯ್ ಕಾರೇಕುರ)– ಮತ್ತೆ ಮತ್ತೆ ಕೆಆರ್‌ಎಸ್ ಬೃಂದಾವನದಲ್ಲಿ ಚಿರತೆ ಕಾಣಿಸಿಕೊಂಡು ಆತಂಕ ಸೃಷ್ಟಿಮಾಡಿದೆ.

ಕಳೆದ ಶನಿವಾರ ಕೆಆರ್.ಎಸ್ ಅಣೆಕಟ್ಟೆ ಮೇಲೆ ಚಿರತೆ ಕಾಣಿಸಿಕೊಂಡಿತ್ತು. ಈಗ ಮತ್ತೆ ಇಂದು ಸಂಜೆ 6 ಗಂಟೆ ವೇಳೆಗೆ ಬೃಂದಾವನದ ರಸ್ತೆಯಲ್ಲಿ ಚಿರತೆ ಪ್ರತ್ಯಕ್ಷವಾಗಿ ಮತ್ತೆ ಆತಂಕ ಸೃಷ್ಟಿ ಮಾಡಿದೆ.

ಅಣೆಕಟ್ಟೆ ಪಕ್ಕದಲ್ಲಿರುವ ನಾರ್ತ್ ಗೇಟ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ ಉಸ್ತುವಾರಿ ಅಧಿಕಾರಿ ಸಂತೋಷ್ ಗಸ್ತು ತಿರುಗುವಾಗ ಚಿರತೆಯ ಚಲನವಲನ ಗಮನಿಸಿ ಅನುಮಾನಗೊಂಡು ಸಿಸಿಟಿವಿಯಲ್ಲಿ ಪರೀಕ್ಷಿಸಿದಾಗ ಚಿರತೆ ತೋಟಗಾರಿಕೆಯಿಂದ ಅಣೆಕಟ್ಟೆ ಪಕ್ಕದಲ್ಲಿರುವ ನಾರ್ತ್ ಗೇಟ್ ಹಾದು ಹೋಗಿರುವುದು ಖಚಿತವಾಗಿದೆ. ತಕ್ಷಣ ಅವರು, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ವಿಷಯ ತಿಳಿಸಿ, ಬೃಂದಾವನದ ಎಲ್ಲಾ ದೀಪಗಳನ್ನು ಆರಿಸಿ ಪ್ರವಾಸಿಗರನ್ನು ಬೃಂದಾವನದಿಂದ ಹೊರ ಕಳುಹಿಸಿದರು.

ಸತತ ಹುಡುಕಾಟ ನಡೆಸಿದರೂ ಚಿರತೆಯ ಸುಳಿವು ದೊರೆಯದ ಕಾರಣ ಭಾನುವಾರ ಮಧ್ಯಾಹ್ನ 2 ಗಂಟೆಯಿಂದ ಪ್ರವಾಸಿಗರಿಗೆ ಪ್ರವೇಶವನ್ನು ಮುಕ್ತಗೊಳಿಸಿದ್ದರು. ಈಗ ಮತ್ತೆ ಚಿರತೆ ಕಾಣಿಸಿಕೊಂಡು ಸಾರ್ವಜನಿಕರು, ಪ್ರವಾಸಿಗರು ಹಾಗೂ ಸಿಬ್ಬಂದಿಗಳಲ್ಲಿ ಮತ್ತಷ್ಟು ಆತಂಕ ಸೃಷ್ಟಿಸಿದೆ.

ಇಂದು ಸಂಜೆ 6 ಗಂಟೆಯಲ್ಲಿ ಚಿರತೆ ಬಂದ ವಿಷಯ ತಿಳಿಯುತ್ತಿದ್ದಂತೆ ಬೃಂದಾವನದಲ್ಲಿದ್ದ ಪ್ರವಾಸಿಗರನ್ನು ಹೊರ ಕಳುಹಿಸಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು. ಆದರೆ ರಾತ್ರಿ 8.30 ಆದರೂ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬರಲಿಲ್ಲ. ಆದ ಕಾರಣ ನಾಳೆ ಅರಣ್ಯ ಇಲಾಖೆಯ ಅಧಿಕಾರಿಗಳ ಸಲಹೆ ಪಡೆದು ಅವರ ರಕ್ಷಣೆ ಮೇರೆಗೆ ಬೃಂದಾವನಕ್ಕೆ ಪ್ರವಾಸಿಗರ ಪ್ರವೇಶದ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸಿ.ಎನ್.ಎನ್ ಎಇಇ ಫಾರುಕ್ ಅಬು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಒಂದೇ ವಾರದಲ್ಲಿ ಎರಡೆರಡು ಬಾರಿ ಚಿರತೆ ಕಾಣಿಸಿಕೊಂಡರೂ ಅಧಿಕಾರಿಗಳು ಮಾತ್ರ ಇದನ್ನು ಹಿಡಿಯದೆ ಪ್ರವಾಸಿಗರ ಪ್ರವೇಶಕ್ಕೆ ತರಾತುರಿಯ ನಿರ್ಧಾರ ಕೈಗೊಳ್ಳುತ್ತಿರುವುದು ಸಾರ್ವಜನಿಕ ವಲಯದಲ್ಲಿ ಟೀಕೆಗೆ ಕಾರಣವಾಗಿದೆ.

ಹಣ ವಾಪಸ್ ಕೇಳಿದ ಪ್ರವಾಸಿಗರು: ಚಿರತೆ ಕಾಣಿಸಿಕೊಂಡ ತಕ್ಷಣ ಅಧಿಕಾರಿಗಳು ಪ್ರವಾಸಿಗರನ್ನು ಬೃಂದಾವನದಿಂದ ಹೊರ ಹೋಗಲು ಸೂಚಿಸಿದ್ದಾರೆ. ಈ ವೇಳೆ ನೂರಾರು ಪ್ರವಾಸಿಗರು ನಮ್ಮ ಟಿಕೆಟ್ ಹಣವನ್ನು ವಾಪಸ್ ಕೊಡುವಂತೆ ಅಧಿಕಾರಿಗಳನ್ನು ಕೇಳಿದ್ದಾರೆ. ಇದಕ್ಕೆ ಅಧಿಕಾರಿಗಳು ನಿರಾಕರಿಸಿದ್ದಾರೆ. ಈ ವೇಳೆ ಅಧಿಕಾರಿಗಳು ಹಾಗೂ ಪ್ರವಾಸಿಗರ ನಡುವೆ ಕೆಲ ಕಾಲ ವಾಗ್ವಾದ ನಡೆದು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ವಿಜೃಂಭಣೆಯ ಶ್ರೀ ಲಕ್ಷ್ಮೀದೇವಿ ಜಾತ್ರೆ



ಪಾಂಡವಪುರ, ಅ.28– ದೀಪಾವಳಿ ಹಬ್ಬದ ಅಂಗವಾಗಿ ತಾಲೂಕಿನ ಜಾಗಟೆ ಮಲ್ಲೇನಹಳ್ಳಿ ಗ್ರಾಮದಲ್ಲಿ ಶ್ರೀಲಕ್ಷ್ಮೀದೇವಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು. ಬುಧವಾರ ಬೆಳಗ್ಗೆಯಿಂದಲೇ ಆರಂಭಗೊಂಡ ಜಾತ್ರಾ ಮಹೋತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮಗಳಿಂದ ನೂರಾರು ಸಂಖ್ಯೆಯಲ್ಲಿ ಆಗಮಿಸಿದ ಭಕ್ತರು ಶ್ರೀಲಕ್ಷ್ಮೀದೇವಿಗೆ ಪೂಜೆ ಸಲ್ಲಿಸುವ ಮೂಲಕ ಭಕ್ತಿ ಪ್ರದರ್ಶಿಸಿದರು.

ಜಾತ್ರೆಗೆ ಬರುವ ಭಕ್ತರ ಮನರಂಜನೆಗಾಗಿ ಜಾತ್ರಾ ಸಮಿತಿ ವತಿಯಿಂದ ಗಾಯಕ ನಾಗಲಿಂಗೇಗೌಡ ಅವರ ಗ್ರಾಮರಂಗ ಸಾಂಸ್ಕೃತಿಕ ವೇದಿಕೆಯಿಂದ ಗೀತಗಾಯನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.


ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಶ್ರೀಲಕ್ಷ್ಮೀದೇವಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೆ ಚಾಲನೆ ನೀಡಬೇಕಾಗಿತ್ತು. ಆದರೆ, ಸತತವಾಗಿ ಮಳೆ ಸುರಿದ ಹಿನ್ನೆಲೆಯಲ್ಲಿ ಕಾಮಗಾರಿಗೆ ಚಾಲನೆ ನೀಡಲು ಸಾಧ್ಯವಾಗಿಲ್ಲ. ಇನ್ನು ಹದಿನೈದು ದಿನಗಳಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು, ಲಕ್ಷ್ಮೀದೇವಿ ದೇವಸ್ಥಾನ ನಿರ್ಮಾಣಕ್ಕೆ ಯಾವುದೇ ಸರಕಾರಿ ಅನುದಾನವನ್ನು ಬಳಕೆ ಮಾಡದೆ ಭಕ್ತರಿಂದ ಹಣ ಸಂಗ್ರಹಿಸಿ ನಿರ್ಮಾಣ ಮಾಡಲಾಗುವುದು. ಹಾಗಾಗಿ ದೇವಸ್ಥಾನಕ್ಕೆ ಹಣ ನೀಡುವ ಭಕ್ತರು ರಶೀದಿ ಪಡೆದುಕೊಳ್ಳಬಹುದು. ಒಂದು ರೂಪಾಯಿ ಹಣವು ದುರ್ಬಳಕೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ಪಿ.ಚಲುವರಾಜು, ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕ ವಿ.ಎಸ್.ನಿಂಗೇಗೌಡ, ಉದ್ಯಮಿ ಎಚ್.ಆರ್. ಮಧುಸೂದನ್, ಹರವು ಲೋಕೇಶ್, ಕೆ.ಬೆಟ್ಟಹಳ್ಳಿ ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮನು, ಅಕ್ಷಯ್, ಕ್ಯಾತನಹಳ್ಳಿ ಪ್ರವೀಣ್ ಸೇರಿದಂತೆ ಜಾತ್ರಾ ಸಮಿತಿಯ ಸದಸ್ಯರು ಹಾಜರಿದ್ದರು.

ಪೂರ್ಣಿಮಾ ನಿಧನ

ಕೆ.ಆರ್.ಪೇಟೆ,ಅ.28– ಪಟ್ಟಣದ ಬಸವೇಶ್ವರನಗರ ನಿವಾಸಿ ಪ್ರಥಮದರ್ಜೆ ಗುತ್ತಿಗೆದಾರರು ಹಾಗೂ ಸಮಾಜ ಸೇವಕ ಬಿ.ಈ.ಮಂಜುನಾಥ್ ಅವರ ಪತ್ನಿ ತಾಲೂಕು ಹೇಮಾವತಿ ಲಯನ್ಸ್ ಕ್ಲಬ್ ಸಂಸ್ಥೆಯ ಮಾಜಿ ಅಧ್ಯಕ್ಷೆ ಪೂರ್ಣಿಮಾ ಮಂಜುನಾಥ್(45) ಅವರು ಇಂದು ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೃತರು, ಪತಿ, ಪುತ್ರ, ಪುತ್ರಿ ಸೇರಿದಂತೆ ಅಪಾರವಾದ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಪಟ್ಟಣದಲ್ಲಿ ನಡೆಯಿತು.

ಗಂಧದಗುಡಿ ಬಿಡುಗಡೆ: ಅಶ್ವಿನಿ ಪುನೀತ್ ರಾಜ್‌ಕುಮಾರ್ ನಿಮಿಷಾಂಬ ದೇವಾಲಯಕ್ಕೆ ಭೇಟಿ



ಶ್ರೀರಂಗಪಟ್ಟಣ, ಅ.28– ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿನಯದ ಕೊನೆಯ ಚಿತ್ರ ಗಂಧದಗುಡಿ ಬಿಡುಗಡೆ ಹಿನ್ನೆಲೆಯಲ್ಲಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಶ್ರೀರಂಗಪಟ್ಟಣ ಗಂಜಾಂನಲ್ಲಿರುವ ನಿಮಿಷಾಂಬ ದೇವಾಲಯಕ್ಕೆ ಆಗಮಿಸಿ, ವಿಶೇಷ ಪೂಜೆ ಸಲ್ಲಿಸಿದರು.

ಶುಕ್ರವಾರ ಬೆಳಗ್ಗೆ ನಿಮಿಷಾಂಬ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಗಂಧದಗುಡಿ ಚಿತ್ರ ಯಶಸ್ವಿಯಾಗಲೆಂದು ಪ್ರಾರ್ಥನೆ ಸಲ್ಲಿಸಿದರು. ಪೂಜೆ ಸಲ್ಲಿಕೆ ವೇಳೆ ಗಂಧದಗುಡಿ ಚಿತ್ರದ ನಿರ್ದೇಶಕ ಅಮೋಘ ವರ್ಷ ಕೂಡ ಹಾಜರಿದ್ದು, ನಿಮಿಷಾಂಬ ದೇವಿಯ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಅಮೋಘ ವರ್ಷ, ಅಭಿಮಾನಿಗಳಿಗೆ ಪುನೀತ್ ರಾಜ್‌ಕುಮಾರ್ ಬಿಟ್ಟು ಹೋಗಿರುವ ಕೊನೆಯ ಕಥೆ ಗಂಧದಗುಡಿ. ಈ ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ಅವರು ಅನೇಕ ಸಂದೇಶಗಳನ್ನು ಸಾಮಾಜಿಕವಾಗಿ ನೀಡಿದ್ದಾರೆ. ಅಭಿಮಾನಿಗಳಿಗೆ ಅಂತಲೇ ಮಾಡಿರುವ ಸಿನಿಮಾ ಇದಾಗಿದ್ದು, ಚಿತ್ರ ನೋಡಿ ಅಭಿಮಾನಿಗಳು ಹಾರೈಸಬೇಕೆಂದು ಕೋರಿದರು.

ಶೋಷಿತರಿಗೆ ಮೀಸಲಾತಿ ನೀಡುವುದು ಸರ್ಕಾರದ ಜವಾಬ್ದಾರಿ

ಮಂಡ್ಯ,ಅ.28– ಸಮಾಜದಲ್ಲಿ ಶೋಷಣೆಗೆ ಒಳಗಾದವರಿಗೆ ಮೀಸಲಾತಿ ಕೊಡುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ಆರ್ಟಿಕಲ್ 15, 16ರ ಪ್ರಕಾರ ಮೀಸಲಾತಿ ಕೊಡಲೇಬೇಕು. ಮೀಸಲಾತಿಯನ್ನು ಹಿಂದುಳಿದವರು ಕೇಳುವುದರಲ್ಲಿ ತಪ್ಪೇನಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಮಂಡ್ಯದ ತಿರುಮಲಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀಸಲಾತಿ ಹೆಚ್ಚಳಕ್ಕೆ ಹಲವು ಸಮುದಾಯಗಳಿಂದ ಹೋರಾಟ ಶುರುವಾಗಿದೆ. ಶೋಷಿತರು ಹಾಗೂ ಹಿಂದುಳಿದವರು ಮೀಸಲಾತಿ ಕೇಳಿದಾಗ ಅವರಿಗೆ ಕೊಡುವುದು ಸರ್ಕಾರದ ಧರ್ಮ. ಇದನ್ನು ಅರಿತುಕೊಂಡು ಸರ್ಕಾರ ನಿಯಮಾನುಸಾರವಾಗಿ ಮೀಸಲಾತಿ ಕೊಡಬೇಕೆಂದು ಆಗ್ರಹಿಸಿದರು.

ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿರುವುದಕ್ಕೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್‌ಗೆ ಭಯ ಶುರುವಾಗಿದೆ ಎಂಬ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲು ಹೇಳಿಕೆಗೆ ಪ್ರತಿಕ್ರಿಯಿಸಿ, ಕಟೀಲು ಒಬ್ಬ ಜೋಕರ್. ಆತನ ಹೇಳಿಕೆಗೆ ನಾನು ಉತ್ತರ ಕೊಡಲ್ಲ ಎಂದರು.

ಅಯೋಧ್ಯೆ ರಾಮಮಂದಿರಕ್ಕೆ ಚಿಕ್ಕಬಳ್ಳಾಪುರ ಕಲ್ಲುಗಳ ಬಳಕೆ



ಬೆಂಗಳೂರು, ಅ.28– ಸರಯೂ ನದಿಯ ದಡದಲ್ಲಿರುವ ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮಮಂದಿರ ಭೂಕಂಪ, ಬಿರುಗಾಳಿಗೂ ಜಗ್ಗದಂತೆ ಮಾಡಲು ಕರ್ನಾಟಕದ ಚಿಕ್ಕಬಳ್ಳಾಪುರದಲ್ಲಿನ ಕಲ್ಲುಗಳನ್ನು ಬಳಕೆ ಮಾಡಲಾಗುತ್ತಿದೆ.

ಚಿಕ್ಕಬಳ್ಳಾಪುರದ ಬಂಡೆಗಳು ದೇಶದಲ್ಲೇ ಅತ್ಯಂತ ಗಟ್ಟಿಯಾದ ಬಂಡೆಗಳಾಗಿದ್ದು, ಹೀಗಾಗಿ ದೇವಾಲಯದ ಅಡಿಪಾಯ ಕಾಮಗಾರಿಗೆ ಕಲ್ಲುಗಳನ್ನು ಪೂರೈಸಲು ಚಿಕ್ಕಬಳ್ಳಾಪುರದ ನಾಲ್ಕು ಕಂಪನಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಕಲ್ಲುಗಳನ್ನು ಪೂರೈಸುತ್ತಿರುವ ಗುತ್ತಿಗೆದಾರರಲ್ಲಿ ಒಬ್ಬರಾದ ಮುನಿರಾಜು ತಿಳಿಸಿದ್ದಾರೆ.

ಬಂಡೆಗಳು ಶಾಖ ನಿರೋಧಕವಾಗಿದ್ದು, ಈ ಕಲ್ಲುಗಳ ಬಳಕೆಯಿಂದ ಇಡೀ ರಾಮಮಂದಿರವು ಭೂಕಂಪ ನಿರೋಧಕವಾಗಿರುತ್ತದೆ. ಭೂಕಂಪದಿಂದ ರಕ್ಷಣೆಗಾಗಿ 40 ಅಡಿ ಆಳವಾದ ಅಡಿಪಾಯವನ್ನು ದೇವಾಲಯಕ್ಕೆ ಹಾಕಲಾಗುತ್ತಿದೆ.

ಚಿಕ್ಕಬಳ್ಳಾಪುರದಿಂದ ಸಾಗಿಸಲಾಗುತ್ತಿರುವ ಕಲ್ಲುಗಳನ್ನು 1,500 ಡಿಗ್ರಿ ಸೆಲ್ಸಿಯಸ್‌ವರೆಗೆ ಬಿಸಿ ಮಾಡಿ ಪರೀಕ್ಷಿಸಲಾಗಿದೆ. ಈ ಕಲ್ಲುಗಳನ್ನು 24 ಗಂಟೆಗಳಿಗೂ ಹೆಚ್ಚು ಕಾಲ ಘನೀಕರಿಸುವ ತಾಪಮಾನಕ್ಕೆ ಒಡ್ಡಿ, ಈ ಮೂಲಕ ಅವುಗಳನ್ನು ಸಂಪೂರ್ಣವಾಗಿ ಜಲನಿರೋಧಕವಾಗಿಸಿ ಪರೀಕ್ಷಿಸಲಾಗುತ್ತಿದೆ ಎಂದು ರಾಜ್ಯದಲ್ಲಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ)ನ್ನೂ ಪ್ರತಿನಿಧಿಸುತ್ತಿರುವ ಮುನಿರಾಜು ಅವರು ತಿಳಿಸಿದ್ದಾರೆ.


ರಾಮಮಂದಿರಕ್ಕೆ ಸಾಗಿಸುತ್ತಿರುವ ಕಲ್ಲುಗಳನ್ನು ಚಿಕ್ಕಬಳ್ಳಾಪುರದ ಹೊರವಲಯದ ಗೂಕನಹಳ್ಳಿ ಮತ್ತು ಅಡಿಗಲ್ಲು ಬಂಡೆ ಗ್ರಾಮಗಳ ಕ್ವಾರಿಗಳಿಂದ ಪಡೆಯಲಾಗುತ್ತಿದೆ. ಮಂದಿರದ ಗರ್ಭಗುಡಿಗೆ ಅಡಿಪಾಯ ಹಾಕಲು ದೇವಾಲಯಕ್ಕೆ ಬೇಕಾದ ಬೃಹತ್ ಬಂಡೆಗಳನ್ನು ಕಲ್ಲು ಗಣಿಗಳಿಂದ ಸಾಗಿಸಲಾಗುತ್ತಿದೆ. ಪೂರೈಕೆಯಾಗುತ್ತಿರುವ ಪ್ರತಿಯೊಂದು ಕಲ್ಲು 5 ಅಡಿ ಉದ್ದ, 3 ಅಡಿ ದಪ್ಪ ಮತ್ತು 2.75 ಅಡಿ ಅಗಲವನ್ನು ಹೊಂದಿದೆ. ಎಲ್ಲಾ ಕಲ್ಲುಗಳು ಗ್ರಾನೈಟ್ ಬ್ಲಾಕ್‌ಗಳಾಗಿವೆ ಎಂದು ಮಾಹಿತಿ ನೀಡಿದ್ದಾರೆ.

ಭೂ ವಿಜ್ಞಾನಿಗಳ ಪ್ರಕಾರ, ಚಿಕ್ಕಬಳ್ಳಾಪುರದ ಬಂಡೆಗಳು 2,500 ದಶಲಕ್ಷ ವರ್ಷಗಳ ಹಿಂದೆ ರೂಪುಗೊಂಡ ಅತ್ಯಂತ ಗಟ್ಟಿಯಾದ ಬಂಡೆಗಳಾಗಿವೆ ಎಂದು ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರದಿಂದ ತರಲಾದ ಕಲ್ಲುಗಳು ಸ್ಫಟಿಕೀಕರಣದಿಂದಾಗಿ ರೂಪುಗೊಂಡ ಅತ್ಯಂತ ಗಟ್ಟಿಯಾದ ಬಂಡೆಗಳಾಗಿವೆ. ಹೀಗಾಗಿ ಇವು ಭೂಕಂಪ ನಿರೋಧಕಗಳಾಗಿವೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊಫೆಸರ್ ಮಹಬಲೇಶ್ವರ್ ಹೇಳಿದ್ದಾರೆ. ಈ ಬಂಡೆಗಳು ಕನಿಷ್ಠ 3 ರಿಂದ 3.5 ಶತಕೋಟಿ ವರ್ಷಗಳ ಹಿಂದೆ ರೂಪುಗೊಂಡಿದ್ದು, ಇವು ರಾಮನಗರ, ಬೆಂಗಳೂರಿನ ಸುತ್ತಮುತ್ತಲಿನ ಇತರ ಭಾಗಗಳಲ್ಲಿಯೂ ಕಂಡು ಬರುತ್ತವೆ ಎಂದು ಹೆಸರು ಹೇಳಲು ಇಚ್ಛಿಸದ ಮತ್ತೊಬ್ಬ ಭೂವಿಜ್ಞಾನಿ ಹೇಳಿದ್ದಾರೆ.

ಪೊಲೀಸರಿಗೆ 'ಒಂದು ರಾಷ್ಟ್ರ, ಒಂದು ಸಮವಸ್ತ್ರ' ಉತ್ತಮ

ಪ್ರಧಾನಿ ನರೇಂದ್ರ ಮೋದಿ ಪ್ರಸ್ತಾವನೆ



ಸೂರಜ್‌ಕುಂಡ್ (ಹರಿಯಾಣ), ಅ.28– 'ಒಂದು ರಾಷ್ಟ್ರ, ಒಂದು ಚುನಾವಣೆ' ನಡೆಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಬಹಳ ಒಲವು ಹೊಂದಿದ್ದಾರೆ. ಅದಿನ್ನೂ ಜಾರಿಗೆ ಬಂದಿಲ್ಲ. ಈ ಮಧ್ಯೆ, ಪೊಲೀಸರಿಗೆ 'ಒಂದು ರಾಷ್ಟ್ರ, ಒಂದು ಸಮವಸ್ತ್ರ' ಕಲ್ಪನೆಯನ್ನು ಪ್ರಧಾನಿ ಮೋದಿ ಪ್ರಸ್ತಾಪಿಸಿದ್ದಾರೆ. ಆದರೆ ಇದು ಕೇವಲ ತಮ್ಮ ಸಲಹೆಯಾಗಿದ್ದು, ಅದನ್ನು ರಾಜ್ಯಗಳ ಮೇಲೆ ಹೇರಲು ಬಯಸುವುದಿಲ್ಲ ಎಂದಿದ್ದಾರೆ.

ರಾಜ್ಯ ಗೃಹ ಮಂತ್ರಿಗಳ "ಚಿಂತನ್ ಶಿಬಿರ" ವನ್ನು ಉದ್ದೇಶಿಸಿ ಮಾತನಾಡಿದ ಮೋದಿ, ಅಪರಾಧಗಳು ಮತ್ತು ಅಪರಾಧಿಗಳನ್ನು ನಿಭಾಯಿಸಲು ರಾಜ್ಯಗಳ ನಡುವೆ ನಿಕಟ ಸಹಕಾರದ ಅಗತ್ಯವನ್ನು ಒತ್ತಿ ಹೇಳಿದರು. ಸಹಕಾರಿ ಒಕ್ಕೂಟವು ಸಂವಿಧಾನದ ಭಾವನೆ ಮಾತ್ರವಲ್ಲದೆ ರಾಜ್ಯಗಳು ಮತ್ತು ಕೇಂದ್ರದ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಪೊಲೀಸರಿಗೆ 'ಒಂದು ರಾಷ್ಟ್ರ, ಒಂದು ಸಮವಸ್ತ್ರ'ವು ಕೇವಲ ಆಲೋಚನೆಯಾಗಿದೆ. ಅದನ್ನು ನಾನು ರಾಜ್ಯಗಳ ಮೇಲೆ ಹೇರುವುದಿಲ್ಲ, ಆಲೋಚನೆ ಮಾಡಿ ಮನಸ್ಸು ಮಾಡಿದರೆ ಜಾರಿಗೆ ತರಬಹುದು. ಇದು 5, 50, ಅಥವಾ 100 ವರ್ಷಗಳಲ್ಲಿ ಆಗಬಹುದು. ಸ್ವಲ್ಪ ಯೋಚಿಸಿ ಎಂದಷ್ಟೇ ಹೇಳಿದರು. ದೇಶದಾದ್ಯಂತ ಪೊಲೀಸರ ಗುರುತು ಒಂದೇ ಆಗಿದ್ದರೆ ಚೆನ್ನಾಗಿರುತ್ತದೆ ಎಂದು ನಾನು ಆಶಿಸುತ್ತೇನೆ ಎಂದರು. ಕಾನೂನು ಮತ್ತು ಸುವ್ಯವಸ್ಥೆ ಮತ್ತು ಭದ್ರತೆಯ ಹಲವು ಸವಾಲುಗಳನ್ನು ಎದುರಿಸಲು ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಏಜೆನ್ಸಿಗಳು ಸಂಘಟಿತ ಕ್ರಮ ಕೈಗೊಳ್ಳಬೇಕು. ಹಳೆಯ ಕಾನೂನುಗಳನ್ನು ಪರಿಶೀಲಿಸಬೇಕು ಮತ್ತು ಪ್ರಸ್ತುತ ಸಂದರ್ಭಕ್ಕೆ ತಿದ್ದುಪಡಿ ಮಾಡಬೇಕೆಂದು ಇದೇ ಸಂದರ್ಭದಲ್ಲಿ ಪ್ರಧಾನಿ ಮೋದಿ ರಾಜ್ಯ ಸರ್ಕಾರಗಳನ್ನು ಒತ್ತಾಯಿಸಿದರು.

ಪೊಲೀಸರ ಬಗ್ಗೆ ಉತ್ತಮ ಗ್ರಹಿಕೆಯನ್ನು ಕಾಯ್ದುಕೊಳ್ಳುವುದು ಬಹಳ ಮುಖ್ಯ. ಇಲ್ಲಿನ ತಪ್ಪು, ಲೋಪದೋಷಗಳನ್ನು ಗಮನಿಸಿ ಪರಿಹರಿಸಬೇಕು. ಪೊಲೀಸ್ ಇಲಾಖೆಯನ್ನು ಬಲಪಡಿಸಲು, ಉತ್ತಮ ಫಲಿತಾಂಶವನ್ನು ತರಲು ಪೊಲೀಸ್ ಮತ್ತು ಭದ್ರತಾ ಏಜೆನ್ಸಿಗಳಿಂದ ಮಾನವ ಬುದ್ಧಿಮತ್ತೆಯನ್ನು ಉತ್ಪಾದಿಸುವ ಹಳೆಯ ಉತ್ತಮ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಕೂಡ ಪ್ರಧಾನಿ ಹೇಳಿದರು.

ಸಾಲ ಮರುಪಾವತಿಗೆ ಹೆಣ್ಣುಮಕ್ಕಳ ಹರಾಜು, ತಾಯಂದಿರ ಮೇಲೆ ಅತ್ಯಾಚಾರ

ಸತ್ಯಶೋಧನಾ ಸಮಿತಿ ರಚಿಸಿದ ಮಹಿಳಾ ಆಯೋಗ

ಜೈಪುರ, ಅ.28– ರಾಜಸ್ತಾನದಲ್ಲಿ ವರದಿಯಾಗಿದ್ದ ಸಾಲ ಮರುಪಾವತಿಗೆ ಹೆಣ್ಣುಮಕ್ಕಳ ಹರಾಜು, ತಾಯಂದಿರ ಮೇಲೆ ಅತ್ಯಾಚಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಮಹಿಳಾ ಆಯೋಗ ಈ ಸಂಬಂಧ ಇಬ್ಬರು ಸದಸ್ಯರ ಸತ್ಯಶೋಧನಾ ಸಮಿತಿ ರಚಿಸಿ ತನಿಖೆಗೆ ಆದೇಶಿಸಿದೆ.

ರಾಜಸ್ಥಾನದಲ್ಲಿ ಸಾಲ ಮರುಪಾವತಿಗಾಗಿ ಸ್ಟಾಂಪ್ ಪೇಪರ್ ಮೂಲಕ ಹೆಣ್ಣು ಮಕ್ಕಳನ್ನು ಹರಾಜು ಹಾಕಿರುವ ಪ್ರಕರಣ ಬೆಳಕಿಗೆ ಬಂದ ನಂತರ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (NHRC) ಅಶೋಕ್ ಗೆಹ್ಲೋಟ್ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದ್ದು, ಅಂತಹ ಅಪರಾಧಗಳ ವಿರುದ್ಧ ಯಾವ ಕ್ರಮ ಕೈಗೊಂಡಿದ್ದೀರಿ ಮತ್ತು ಅವುಗಳನ್ನು ತಡೆಯಲು ಯಾವ ಕಾರ್ಯವಿಧಾನವಿದೆ ಎಂದು NHRC ಸರ್ಕಾರವನ್ನು ಕೇಳಿದೆ. ರಾಜಸ್ಥಾನದ ಗ್ರಾಮ ಪಂಚಾಯತ್‌ಗಳ ಕಾರ್ಯನಿರ್ವಹಣೆಯ ಬಗ್ಗೆ ಮಾಹಿತಿ ನೀಡುವಂತೆ ಆಯೋಗವು ಸರ್ಕಾರವನ್ನು ಕೇಳಿದೆ. ಅಲ್ಲದೆ ಇಬ್ಬರು ಸದಸ್ಯರ ಸತ್ಯಶೋಧನಾ ಸಮಿತಿ ರಚಿಸಿ ತನಿಖೆಗೆ ಆದೇಶಿಸಿದೆ

ಕೊಯಮತ್ತೂರಲ್ಲಿ ಜೆಎಸ್‌ಎಸ್ ಪ್ರಕೃತಿ ಚಿಕಿತ್ಸೆ, ಯೋಗ ವಿಜ್ಞಾನ ಸಂಸ್ಥೆ ವಿದ್ಯಾರ್ಥಿನಿಲಯಗಳ ಆರಂಭ

ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಉದ್ಘಾಟನೆ



ಕೊಯಮತ್ತೂರಿನ ಜೆಎಸ್‌ಎಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಸಂಸ್ಥೆಯ ವಿದ್ಯಾರ್ಥಿನಿಲಯ ಕಟ್ಟಡಗಳನ್ನು ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ತಮಿಳುನಾಡು ರಾಜ್ಯಪಾಲರಾದ ಆರ್.ಎನ್.ರವಿ ಉದ್ಘಾಟಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಎಸ್.ಪಿ.ಮಂಜುನಾಥ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ.ಬೆಟಸೂರಮಠ, ತಮಿಳುನಾಡು ಡಾ.ಎಂಜಿಆರ್ ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿ ಡಾ.ಸುಧಾ ಶೇಷಯ್ಯನ್ ಮತ್ತಿತರರು ಉಪಸ್ಥಿತರಿದ್ದರು.

ಕೊಯಮತ್ತೂರು, ಅ.28– ಕೊಯಮತ್ತೂರು ನವಕ್ಕರೈನಲ್ಲಿ ಜೆಎಸ್‌ಎಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಸಂಸ್ಥೆಯ ವಿದ್ಯಾರ್ಥಿನಿಲಯ ಕಟ್ಟಡಗಳನ್ನು ತಮಿಳುನಾಡು ರಾಜ್ಯಪಾಲರಾದ ಆರ್.ಎನ್.ರವಿ ಅವರು ಶುಕ್ರವಾರ ಉದ್ಘಾಟಿಸಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಜೆಎಸ್‌ಎಸ್ ಮಹಾವಿದ್ಯಾಪೀಠವು ಭಾರತದ ಏಕತೆ, ಸೌಹಾರ್ದತೆ, ಸನಾತನ ಧಾರ್ಮಿಕತೆಯನ್ನು ಶತಶತಮಾನಗಳಿಂದಲೂ ಎತ್ತಿಹಿಡಿಯುವ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿದೆ ಎಂದು ಬಣ್ಣಿಸಿದರು.

ಮೂರು ಶತಮಾನದ ವಸಾಹತುಶಾಹಿ, ಭಾರತೀಯ ಪರಂಪರೆಯ ಔನ್ನತ್ಯವನ್ನು ನಾಶ ಮಾಡಿತು. ಆದರೆ ಈಗ ಅದೆಲ್ಲವೂ ಮರು ಸ್ಥಾಪಿಸುತ್ತಿವೆ. ಸ್ವಾಮಿ ವಿವೇಕಾನಂದರು ಭಾರತವು ಸದೃಢ ಹಾಗೂ ವಿವೇಕಯುತ ಯುವಶಕ್ತಿಯುಳ್ಳ ದೇಶವಾಗಬೇಕೆಂಬ ಕನಸು ಕಂಡಿದ್ದರು. ನಮ್ಮ ದೇಶದ ಮೂಲಶಕ್ತಿಯಾದ ಆಧ್ಯಾತ್ಮಿಕತೆಯನ್ನು ಎಂದೂ ಮರೆಯುವಂತಿಲ್ಲ. ಯೋಗ ಇಡೀ ವಿಶ್ವಕ್ಕೆ ಹೊಸ ಶಕ್ತಿಯನ್ನು ತಂದುಕೊಟ್ಟಿದೆ. ಆಚಾರ, ವಿಚಾರ, ಆಹಾರ ನಮ್ಮ ಬದುಕನ್ನು ರೂಪಿಸುವ ಶಕ್ತಿಗಳಾಗಬೇಕು. ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿ ಜೊತೆಗೆ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಬೇಕು. ಭಾರತ ವಿಶ್ವಗುರುವಾಗುವ ದಾರಿಯಲ್ಲಿ ಎದುರಾಗುವ ಎಲ್ಲ ಅಡೆತಡೆಗಳನ್ನೂ ನಿವಾರಿಸಿಕೊಂಡು ನಾವು ಮುಂದೆ ಸಾಗಬೇಕು ಎಂದು ಕರೆ ನೀಡಿದರು.

ಆಶೀರ್ವಚನ ನೀಡಿದ ಸುತ್ತೂರು ಶ್ರೀಗಳು, ಮನುಷ್ಯನ ಶರೀರ ಪ್ರಾಕೃತಿಕವಾಗಿ ಅತ್ಯುತ್ತಮ ರೋಗನಿರೋಧಕ ಶಕ್ತಿಯನ್ನು ಹೊಂದಿದೆ. ಆ ಶಕ್ತಿಯನ್ನು ಸಬಲಗೊಳಿಸಬೇಕಾಗಿರುವುದು ವೈದ್ಯರ ಕರ್ತವ್ಯ. ಪ್ರಸ್ತುತ ಪ್ರಕೃತಿಯ ಜೊತೆ ಸಹ ಜೀವನವನ್ನು ಕಡೆಗಣಿಸುತ್ತಿರುವುದೇ ರೋಗಗಳಿಗೆ ಕಾರಣವಾಗಿದೆ. ಭಾರತದ ಪ್ರಾಚೀನ ವೈದ್ಯಕೀಯ ಪದ್ಧತಿಯಾದ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಯಾವುದೇ ಅಡ್ಡಪರಿಣಾಮಗಳಿಲ್ಲದ ವಿಶಿಷ್ಟ ಚಿಕಿತ್ಸಾ ಪದ್ಧತಿಗಳಾಗಿವೆ. ಆಯುರ್ವೇದ ಚಿಕಿತ್ಸೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕ್ರಿಯಾಶೀಲವಾಗಿ ಜನರಲ್ಲಿ ಅರಿವು ಮೂಡಿಸುವ ಕಾರ್ಯ ನಡೆಸುತ್ತಿದೆ. ಇತ್ತೀಚೆಗೆ ರಷ್ಯಾ ಇನ್ನಿತರ ಪಾಶ್ಚಾತ್ಯ ರಾಷ್ಟ್ರಗಳೊಡನೆ ಒಡಂಬಡಿಕೆಗಳಾಗುತ್ತಿರುವುದು ಸಂತಸದ ವಿಷಯ ಎಂದರು.

ತಮಿಳುನಾಡು ಡಾ.ಎಂಜಿಆರ್ ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿಯಾದ ಡಾ.ಸುಧಾ ಶೇಷಯ್ಯನವರು ಮಾತನಾಡಿ, ಮಾನವ ಸಂಸ್ಕೃತಿ ಹಾಗೂ ಪ್ರಕೃತಿಯೊಂದಿಗೆ ನಿಕಟ ಸಂಬಂಧ ಕಳಚುತ್ತಿದೆ. ಪ್ರಕೃತಿಯ ಕೊಡುಗೆಯ ಬಗ್ಗೆ ನಿಜಕ್ಕೂ ಕೃತಜ್ಞತೆ ತೋರುವ ಅಗತ್ಯವಿದೆ. ಹೆಚ್ಚಿನ ಸಮಸ್ಯೆಗಳು ಪ್ರಾಕೃತಿಕ ನಿಯಮಗಳ ವಿರುದ್ಧದ ಅಭ್ಯಾಸದಿಂದಲೇ ಬರುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮಕುಲಾಧಿಪತಿ ಡಾ.ಬಿ.ಸುರೇಶ್, ಪ್ರಾಂಶುಪಾಲ ಡಾ.ದಿಲೀಪ್, ಊಟಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಧನಬಾಲ ಮತ್ತಿತರರ ಗಣ್ಯರು ಭಾಗವಹಿಸಿದ್ದರು.

ಪತ್ರಕರ್ತರಿಗೆ ಲಂಚ ನೀಡಿದ ಆರೋಪ

ಸಿಎಂ, ಅವರ ಮಾಧ್ಯಮ ಸಂಯೋಜಕನ ವಿರುದ್ಧ ಲೋಕಾಯುಕ್ತಕ್ಕೆ ದೂರು

ಬೆಂಗಳೂರು, ಅ.28–ಪತ್ರಕರ್ತರಿಗೆ ಲಂಚ ನೀಡಿದ ಆರೋಪಕ್ಕೆ ಗುರಿಯಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮುಖ್ಯಮಂತ್ರಿಗಳ ಮಾಧ್ಯಮ ಸಂಯೋಜಕ ಶಂಕರ್ ಪಾಗೋಜಿ ಅವರ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಲಾಗಿದೆ.

ಭ್ರಷ್ಟಾಚಾರದ ವಿರುದ್ಧ ಕಾನೂನಾತ್ಮಕ ಹೋರಾಟದಲ್ಲಿ ತೊಡಗಿಸಿಕೊಂಡಿರುವ ಜನಾಧಿಕಾರ ಸಂಘರ್ಷ ಪರಿಷತ್ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಲೋಕಾಯುಕ್ತ ಮತ್ತು ಲೋಕಾಯುಕ್ತ ಪೊಲೀಸ್ ವಿಭಾಗದ ಎಡಿಜಿಪಿಗೆ ದೂರು ನೀಡಿದೆ.

ಈ ಕುರಿತು ಲೋಕಾಯುಕ್ತ ಮತ್ತು ಚುನಾವಣಾ ಆಯೋಗವನ್ನು ಟ್ಯಾಗ್ ಮಾಡಿ ಪೋಸ್ಟ್ ಹಾಕಿರುವ ಹಿರಿಯ ಪತ್ರಕರ್ತರಾದ ರಾಜಾರಾಮ್ ತಲ್ಲೂರು, ಇಂದು ಬೆಳಗ್ಗಿನಿಂದ ಕರ್ನಾಟಕದಲ್ಲಿ ಮುಖ್ಯಮಂತ್ರಿಗಳ ಕಚೇರಿಯಿಂದ, ಸಚಿವರ ಕಚೇರಿಗಳಿಂದ ರಾಜ್ಯದ ಹಲವು ಪತ್ರಕರ್ತರಿಗೆ ದೀಪಾವಳಿ ಇನಾಮಿನ ಜೊತೆಯಲ್ಲಿ ನಗದು ಹಣವನ್ನು ನೀಡಲಾಗಿದೆ ಎಂಬ ವದಂತಿಗಳು ಹಬ್ಬಿವೆ. ಇದು ಹೌದೆಂದಾಗಿದ್ದಲ್ಲಿ, ಚುನಾವಣಾ ಪೂರ್ವ ಭ್ರಷ್ಟಾಚಾರ ಎಂದು ಇದನ್ನು ಪರಿಗಣಿಸುವುದು ಕರ್ನಾಟಕದ ಸಾರ್ವಜನಿಕ ಸ್ವಾಸ್ಥ್ಯದ ದೃಷ್ಟಿಯಿಂದ ಅತ್ಯಗತ್ಯ. ತಾವು ತಕ್ಷಣ ಈ ಬಗ್ಗೆ ಕೂಲಂಕಷ ತನಿಖೆ ನಡೆಸಬೇಕು ಮತ್ತು ಭ್ರಷ್ಟಾಚಾರ ನಡೆದಿರುವುದು ಹೌದೆಂದಾದರೆ, ಆ ಬಗ್ಗೆ ತಕ್ಷಣ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಕರ್ನಾಟಕದ ಜನತೆಯ ಪರವಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ #SayCM ಹ್ಯಾಷ್‌ಟ್ಯಾಗ್‌ನಲ್ಲಿ ಕಾಂಗ್ರೆಸ್ ಪಕ್ಷ ಸರಣಿ ಟ್ವೀಟ್ ಮಾಡಿದೆ. ಪತ್ರಕರ್ತರಿಗೆ ಮುಖ್ಯಮಂತ್ರಿ ಕಚೇರಿಯ ಸ್ವೀಟ್ ಬಾಕ್ಸ್ ಲಂಚದ ಕುರಿತು ನ್ಯಾಯಾಂಗ ತನಿಖೆಯಾಗಬೇಕು. ಅದು ಸಾರ್ವಜನಿಕರ ತೆರಿಗೆ ಹಣದ ದುರ್ಬಳಕೆಯೇ? ಕಮಿಷನ್ ಭ್ರಷ್ಟಾಚಾರದ ಪಾಪದ ಹಣವೇ? ಆ ಹಣದ ಮೂಲ ಯಾವುದು? ಎಷ್ಟು ಹಣ ಲಂಚವಾಗಿ ನೀಡಲಾಗಿದೆ, ಪಡೆದವರೆಷ್ಟು, ವಾಪಸ್ ನೀಡಿದವರೆಷ್ಟು ಎಂಬಿತ್ಯಾದಿ ಸಂಗತಿ ರಾಜ್ಯದ ಜನತೆಗೆ ತಿಳಿಯಬೇಕು ಎಂದು ಆಗ್ರಹಿಸಿದೆ.

ಸಿಎಂ ಕಚೇರಿ ನೀಡಿದ 2.5 ಲಕ್ಷ ಲಂಚವನ್ನು ವಾಪಸ್ ಮಾಡುವ ಮೂಲಕ ಪತ್ರಿಕಾಧರ್ಮವನ್ನು ಎತ್ತಿ ಹಿಡಿದಿದ್ದಾರೆ ಎಂಬುದು ತಿಳಿದುಬಂದಿದೆ. ಕರ್ನಾಟಕದ ಪತ್ರಕರ್ತರು ಪತ್ರಿಕಾ ಧರ್ಮದ ಪಾವಿತ್ರ್ಯತೆಗೆ ಧಕ್ಕೆ ತರುವುದಿಲ್ಲ ಎಂಬುದಕ್ಕೆ ಈ ಘಟನೆಯೇ ಸಾಕ್ಷಿಯಾಗಿದೆ. ಪತ್ರಕರ್ತರಿಗೆ ಲಂಚ ನೀಡಿದ್ದೇಕೆ ಎಂಬುದನ್ನು ಸಿಎಂ ಉತ್ತರಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ನಾವು ಸುಮ್ಮನೇ ಬಸವರಾಜ ಬೊಮ್ಮಾಯಿಯವರನ್ನು ಪೇಸಿಎಂ ಎಂದಿಲ್ಲ. ಈ ಸರ್ಕಾರ ಲಂಚವನ್ನು ಪಡೆಯುತ್ತದೆ, ಲಂಚವನ್ನು ನೀಡುತ್ತದೆ. ಇವೆಲ್ಲವೂ #PayCM ಮೂಲಕವೇ ನಡೆಯುತ್ತದೆಯೇ ಮುಖ್ಯಮಂತ್ರಿಗಳೇ ಶಾಸಕರನ್ನು ಖರೀದಿಸಿ ಸರ್ಕಾರ ಮಾಡಿದಂತೆ ಮಾಧ್ಯಮಗಳನ್ನೂ ಖರೀದಿಸಿ ಅಕ್ರಮಗಳನ್ನು ಮುಚ್ಚಿಕೊಳ್ಳುವ ಹುನ್ನಾರವೇ? ಎಂದು ಕಾಂಗ್ರೆಸ್ ಖಾರವಾಗಿ ಪ್ರಶ್ನಿಸಿದೆ.

ಮೈಸೂರಲ್ಲಿ ಕೋಟಿ ಕಂಠ ಗಾಯನಕ್ಕೆ ಸ್ವರ ಮಾಧುರ್ಯ ಸಮ್ಮಿಲನ

ಅರಮನೆ ಆವರಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ನೆರೆದವರ ನಾಡಿನ ಹಾಡುಗಳ ಗಾಯನ ಸಂಭ್ರಮ





ಮೈಸೂರು,ಅ.28(ಎಂಟಿವೈ)– ಮೈಸೂರು ಅರಮನೆಯ ಆವರಣದಲ್ಲಿ ಕನ್ನಡಾಂಭೆಯ ಉದ್ಘಾರ ಸಂಭ್ರಮದಿಂದ ನೆರವೇರಿತು. ಉರಿ ಬಿಸಿಲು ಲೆಕ್ಕಿಸದೇ ಸಾವಿರಾರು ಮಂದಿ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಕನ್ನಡ ನಾಡು–ನುಡಿಯ ಗುಣಗಾನ ಮಾಡುವ ಗೀತೆಗಳನ್ನು ಹಾಡುವ ಮೂಲಕ ಭುವನೇಶ್ವರಿಗೆ ಜೈಕಾರ ಹಾಕಿ ಸಂಭ್ರಮಿಸಿದರು.

67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ 'ನನ್ನ ನಾಡು, ನನ್ನ ಹಾಡು' ಶೀರ್ಷಿಕೆಯಡಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮೈಸೂರು ಅರಮನೆ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ವಿವಿಧ ಶಾಲಾ–ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡು ಕನ್ನಡಾಭಿಮಾನ ಮೆರೆದರು. ರಾಜ್ಯಾದ್ಯಂತ ನಡೆದ ಈ ಕಾರ್ಯಕ್ರಮ ಮೈಸೂರಿನಲ್ಲೂ ಕನ್ನಡ



ಕಂಪು ಪಸರಿಸುವ ಮೂಲಕ ಕನ್ನಡವೇ ನಮ್ಮಮ್ಮ ಎಂದು ಕೈ ಮುಗಿದರು.

'ಮಾತಾಡ್ ಮಾತಾಡು ಕನ್ನಡ' ಘೋಷ ವಾಕ್ಯದೊಂದಿಗೆ ನಡೆದ ಸಾಮೂಹಿಕ ಗಾಯನದಲ್ಲಿ ಸಹಸ್ರಾರು ಕಂಠಗಳು ಧ್ವನಿಗೂಡಿಸಿದವು.

ಎರಡು ವೇದಿಕೆ: ಅರಮನೆ ಆವರಣದಲ್ಲಿ ಎರಡು ವೇದಿಕೆ ನಿರ್ಮಿಸಲಾಗಿತ್ತು. ಒಂದು ವೇದಿಕೆಯಲ್ಲಿ ಗಣ್ಯರು ನಿಂತುಕೊಂಡು ಸಂಗೀತವನ್ನು ಆಸ್ವಾದಿಸಿದರೆ, ಮತ್ತೊಂದು ಸಂಗೀತ ವೇದಿಕೆಯಲ್ಲಿ 15 ಗಾಯಕರು ಸಾಮೂಹಿಕವಾಗಿ ಹಾಡಿದರು.

ಮಾರ್ದನಿಸಿದ ಕನ್ನಡದ ಗೀತೆಗಳು: ಕುವೆಂಪು ರಚನೆಯ ನಾಡಗೀತೆ 'ಜಯಭಾರತ ಜನನಿಯ ತನುಜಾತೆ' ಗೀತೆಯೊಂದಿಗೆ ಕೋಟಿ ಕಂಠ ಗಾಯನ ಸಂಭ್ರಮದ ಆರಂಭ ಪಡೆಯಿತು. ಬಳಿಕ ಹುಯಿಲಗೋಳ ನಾರಾಯಣರಾಯರ ರಚನೆ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು', ಕುವೆಂಪು ರಚನೆಯ 'ಬಾರಿಸು ಕನ್ನಡ ಡಿಂಡಿಮವ', ಡಾ.ಡಿ.ಎಸ್.ಕರ್ಕಿ ರಚನೆಯ 'ಹಚ್ಚೇವು ಕನ್ನಡದ ದೀಪ' ಮತ್ತು ಚನ್ನವೀರ ಕಣವಿ ಅವರ 'ವಿಶ್ವವಿನೂತನ ವಿದ್ಯಾಚೇತನ' ಹಾಡುಗಳು ಒಂದರ ಮೇಲೊಂದು ಮಾರ್ದನಿಸಿತು.

ಆಕಸ್ಮಿಕ ಚಲನಚಿತ್ರದ ಡಾ.ರಾಜ್‌ಕುಮಾರ್ ಅಭಿನಯದ, ಹಂಸಲೇಖ ರಚನೆಯ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಹಾಡು, ಜನಸಮೂಹದಲ್ಲಿ ವಿದ್ಯುತ್ ಸಂಚಲನಕ್ಕೆ ಕಾರಣವಾಯಿತು. ಅಷ್ಟೊತ್ತು ಶಾಂತವಾಗಿ ಹರಿಯುತ್ತಿದ್ದ ಗೀತಗಾಯನದಲ್ಲಿ ಈ ಹಾಡು ನೆರೆದವರನ್ನು ರೋಮಾಂಚನಗೊಳಿಸಿತು. ವಿದ್ಯಾರ್ಥಿಗಳು ನೃತ್ಯ ಮಾಡಿದರು. ಕೆಲವರು ಚಪ್ಪಾಳೆ ತಟ್ಟಿದರು. ವೃದ್ಧ ಮಹಿಳೆಯರು ಸಹ ಸಾಮೂಹಿಕವಾಗಿ ನರ್ತಿಸಿ, ಗಮನ ಸೆಳೆದರು.

ಕುಸಿದು ಬಿದ್ದ ವೃದ್ಧೆ: ಬೆಳಗ್ಗೆ 11ಕ್ಕೆ ಆರಂಭವಾದ ಕಾರ್ಯಕ್ರಮ ಅರ್ಧಗಂಟೆಯಲ್ಲಿ ಮುಕ್ತಾಯಗೊಂಡಿತು. ಬಿಸಿಲಿನ ಪ್ರಖರತೆ ಹೆಚ್ಚಾಗಿದ್ದರಿಂದ ವಿದ್ಯಾರ್ಥಿಗಳು ಸೇರಿದಂತೆ ಸಭಿಕರೆಲ್ಲರೂ ಬಸವಳಿದರು. ಕೆಲವರು ತಲೆ ಸುತ್ತು ಬಂದ ಕಾರಣಕ್ಕೆ ನಿಂತಲ್ಲೇ ಕುಳಿತುಕೊಂಡರು. ವೇದಿಕೆಯ ಮೇಲಿದ್ದ ವೃದ್ಧೆಯೊಬ್ಬರು ಕುಸಿದು ಬಿದ್ದರು. ಅಲ್ಲಿಯೇ ಇದ್ದ ಕೆಲವರು ನೀರು ಕುಡಿಸಿ ಸಂತೈಸಿದರು.

ವಿದ್ಯಾರ್ಥಿಗಳ ಕಾರುಬಾರು: ಸಾರ್ವಜನಿಕರಿಗೆ ಅಂಬಾವಿಲಾಸ ದ್ವಾರ ಹಾಗೂ ವರಾಹ ದ್ವಾರದ ಮೂಲಕ ಬೆಳಗ್ಗೆ 10 ಗಂಟೆಯೊಳಗೆ ಅರಮನೆ ಆವರಣಕ್ಕೆ ಪ್ರವೇಶ ಅವಕಾಶ ಕಲ್ಪಿಸಿಕೊಡಲಾಯಿತು. ದೊಡ್ಡಮಟ್ಟದಲ್ಲಿ ಜನಸಮೂಹ ನೆರೆದಿತ್ತು. ಇಲ್ಲಿ ಸಾರ್ವಜನಿಕರಿಗಿಂತ ವಿದ್ಯಾರ್ಥಿಗಳ



ಸಂಖ್ಯೆಯೇ ಅಧಿಕವಾಗಿತ್ತು. ನಗರದ ವಿವಿಧ ಶಾಲಾ–ಕಾಲೇಜುಗಳ, ಮೈಸೂರು ವಿವಿಯಿಂದ ವಿದ್ಯಾರ್ಥಿಗಳು ಭಾರೀ ಸಂಖ್ಯೆಯಲ್ಲಿ ಇಲ್ಲಿಗೆ ಆಗಮಿಸಿ ಕನ್ನಡಾಭಿಮಾನವನ್ನು ಮೆರೆದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಜಿಪಂ ಸಿಇಒ ಪೂರ್ಣಿಮಾ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ ಸೇರಿದಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು, ಮುಖಂಡರು ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಗೀತ್ ಸಂಗಮ್ ಸಂಗೀತ ಕಾರ್ಯಕ್ರಮ



ಮೈಸೂರು, ಅ.28–ಮೈಸೂರು ನಗರದ 'ಮ್ಯೂಸಿಕ್ ಲವರ್ಸ್' ವತಿಯಿಂದ 'ಗೀತ್ ಸಂಗಮ್' ಸುಮಧುರ ಸಂಗೀತ ಕಾರ್ಯಕ್ರಮವನ್ನು ಹೆಸರಾಂತ ಗಾಯಕಿ ಶ್ರೀಮತಿ ಕವಿತಾ ಕಾಮತ್ ನೇತೃತ್ವದಲ್ಲಿ ಅ.29(ಶನಿವಾರ)ರ ಸಂಜೆ 5 ಗಂಟೆಗೆ ಮೈಸೂರು ನಗರ ನಾದಬ್ರಹ್ಮ ಸಂಗೀತ ಸಭಾ ಭವನದಲ್ಲಿ ಏರ್ಪಡಿಸಲಾಗಿದೆ.

ಇದರಲ್ಲಿ 60, 70 ಹಾಗೂ 80ರ ದಶಕದ ಕನ್ನಡ ಮತ್ತು ಹಿಂದಿ ಚಲನಚಿತ್ರಗಳ ಸುಮಧುರ ಗೀತೆಗಳ ಗಾಯನವಿರುತ್ತದೆ. ಶ್ರೀಮತಿ ಕವಿತಾ ಕಾಮತ್ ಅವರಲ್ಲದೆ ಜಿ.ನಿತ್ಯಾನಂದ ಕಾಮತ್, ಡಾ. ಸೋಮನಾಥ್ ವಾಸುದೇವ್, ಡಾ. ಸೀತಾಲಕ್ಷ್ಮಿ, ಡಾ. ಕೆ.ಆರ್. ಮಂಜುನಾಥ್, ಹೆಡತಲೆ ನಾರಾಯಣ್, ಡಾ. ಭಾರತಿ, ನಿಖಿಲ್ ಪ್ರಭು, ಶ್ರೀಮತಿ ಜಯಲಕ್ಷ್ಮಿ ನಾಯ್ಡು ಹಾಡಲಿದ್ದಾರೆ. ಡಾ. ಆರ್.ಎಲ್. ಜಗದೀಶ್, ಶ್ರೀಮತಿ ಎಂ.ಆರ್. ಅನಿತಾ ಕಾರ್ಯಕ್ರಮ ನಿರೂಪಿಸಲಿದ್ದಾರೆ. ಇವರೆಲ್ಲಾ ವಿವಿಧ ಕ್ಷೇತ್ರದ ವೃತ್ತಿಪರರಾಗಿದ್ದು, ಸಂಗೀತವನ್ನು ಮನಃಸಂತೋಷಕ್ಕಾಗಿ ಹವ್ಯಾಸವಾಗಿಸಿಕೊಂಡಿದ್ದಾರೆ. ಪ್ರವೇಶ ಉಚಿತ.

ನಿಷೇಧಿತ ಪ್ಲಾಸ್ಟಿಕ್ ಬಳಕೆ: ಕ್ರಮಕ್ಕೆ ಆಗ್ರಹಿಸಿ ಡಿಸಿಗೆ ಮನವಿ

ಮೈಸೂರು, ಅ.28(ಎಸ್‌ಪಿಎನ್)– ಮೈಸೂರು ನಗರ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳು ಸಾರ್ವಜನಿಕ ಸ್ಥಳಗಳಲ್ಲಿ ಎಗ್ಗಿಲ್ಲದೆ ಬಳಕೆಯಾಗುತ್ತಿದ್ದು, ಪ್ಲಾಸ್ಟಿಕ್ ದಾಸ್ತಾನು ಮಳಿಗೆಗಳ ಮೇಲೆ ದಾಳಿ ನಡೆಸಿ ಕಠಿಣ ಕ್ರಮ ಕೈಗೊಳ್ಳುವಂತೆ ಜನ ಸಂಗ್ರಾಮ ಪರಿಷತ್ ಮನವಿ ಸಲ್ಲಿಸಿದೆ. ಈ ಕೂಡಲೇ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಜಿಪಂ ಸಿಇಓ, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಿಗೆ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ ನೀಡಿದ್ದಾರೆ.



ಮನವಿ ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಜನ ಸಂಗ್ರಾಮ್ ಪರಿಷತ್ ರಾಜ್ಯ ಉಪಾಧ್ಯಕ್ಷ ಪ್ರಸನ್ನ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪ್ಲಾಸ್ಟಿಕ್ ಅನ್ನು ನಿಷೇಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಮಾರಾಟ ಮಾಡುವವರ ವಿರುದ್ಧ ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಳ್ಳಬೇಕು. ಆದರೆ, ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದರು.

51 ಮೈಕ್ರಾನ್ ದಪ್ಪಕ್ಕಿಂತ ಕಡಿಮೆ ಇರುವ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿ ಪದೇ ಪದೆ ಆದೇಶಗಳನ್ನು ಹೊರಡಿಸುತ್ತಿವೆ. ರಾಜ್ಯ ಸರ್ಕಾರದ ಈ ಆದೇಶಗಳು ಕೇವಲ ಕಾಗದದ ಮೇಲೆ ಉಳಿದಿವೆ. ಹಾಗಾಗಿ ನಿಷೇಧಿತ, ಗುಣಮಟ್ಟವಲ್ಲದ ಪ್ಲಾಸ್ಟಿಕ್ ಬ್ಯಾಗ್‌ಗಳ ಮಾರಾಟ ಎಗ್ಗಿಲ್ಲದೆ ಸಾಗುತ್ತಿದ್ದು, ದಿನಸಿ ಅಂಗಡಿ, ಹೋಟೆಲ್ ತಿಂಡಿ ಪಾರ್ಸಲ್‌ಗಳಲ್ಲಿ. ತರಕಾರಿ ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಬಳಕೆ ಆಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ಬಗ್ಗೆ ಜನ ಸಂಗ್ರಾಮ ಪರಿಷತ್ ವತಿಯಿಂದ ಜಿಲ್ಲಾಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತರು, ಕಾನೂನು ಸೇವಾ ಪ್ರಾಧಿಕಾರ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ನಗರ ಪೊಲೀಸ್ ಆಯುಕ್ತರು, ಜಿಲ್ಲಾ ವರಿಷ್ಠಾಧಿಕಾರಿಗಳು ಸೇರಿದಂತೆ ಇತರೆ ಇಲಾಖಾ ಮುಖ್ಯಸ್ಥರಿಗೆ ನಗರ ಪಾಲಿಕೆ ಮಾಜಿ ಸದಸ್ಯ ಎಂ.ಸಿ.ಚಿಕ್ಕಣ್ಣ, ನಗರ್ಲೆ ಎಂ.ವಿಜಯ್ ಕುಮಾರ್, ಕಂಸಾಳೆ ರವಿ, ಪರಿಸರ ಚಿಂತಕ ರಮೇಶ್ ಕುಮಾರ್ ಮಾಲಿ ನೇತೃತ್ವದಲ್ಲಿ ಹಲವು ಬಾರಿ ಮನವಿ ಸಲ್ಲಿಸುತ್ತಿದ್ದರೂ ಕ್ರಮ ತೆಗೆದುಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜನ, ಜಾನುವಾರುಗಳ ಆರೋಗ್ಯ ಮೇಲೆ ಗಂಭೀರ ಪರಿಣಾಮ ಬೀರುವ ಪ್ಲಾಸ್ಟಿಕ್‌ನ ದಾಸ್ತಾನುದಾರರು ಮತ್ತು ಪ್ಲಾಸ್ಟಿಕ್ ಬಳಸುವ ಜಾಗಗಳ ಮೇಲೆ ದಾಳಿ ನಡೆಸಿ, ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು, ಕಾನೂನು ಇಲಾಖಾ ಸಚಿವರಿಗೂ ಕ್ರಮವಹಿಸುವಂತೆ ಪತ್ರ ಬರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಚಾಮುಂಡೇಶ್ವರಿಗೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಪೂಜೆ



ಮೈಸೂರು, ಅ.28(ಎಂಟಿವೈ)– ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಅಭಿನಯದ ಕಟ್ಟ ಕಡೆಯ ಚಿತ್ರ ಗಂಧದಗುಡಿ ತೆರೆ ಕಂಡ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟಕ್ಕೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಭೇಟಿ ನೀಡಿ, ಚಿತ್ರದ ಯಶಸ್ಸಿಗೆ ವಿಶೇಷ ಪೂಜೆ ಸಲ್ಲಿಸಿದರು.

ಗಂಧದ ಗುಡಿ ಚಲನಚಿತ್ರ ರಾಜ್ಯದಾದ್ಯಂತ ಶುಕ್ರವಾರ ತೆರೆ ಕಂಡಿದ್ದು, ಅಭೂತಪೂರ್ವ ಪ್ರಶಂಸೆಯೊಂದಿಗೆ ಪ್ರದರ್ಶನ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಚಿತ್ರಕ್ಕೆ ಇನ್ನಷ್ಟು ಯಶಸ್ಸು ದೊರೆಯಲೆಂದು ದೇವರ ಮೊರೆ ಹೋದ ಅಶ್ವಿನಿ ಪುನೀತ್ ರಾಜ್‌ಕುಮಾರ್, ದೇವಿಗೆ ಇಂದು ವಿಶೇಷ ಪೂಜೆ ಸಲ್ಲಿಸಿದರು. ಬೆಂಗಳೂರಿಂದ ರಸ್ತೆ ಮಾರ್ಗವಾಗಿ ಆಗಮಿಸಿದ ಅಶ್ವಿನಿ ಪುನೀತ್‌ರಾಜ್‌ಕುಮಾರ್, ಶ್ರೀರಂಗಪಟ್ಟಣದ ಬಳಿಯ ನಿಮಿಷಾಂಬ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದ ಬಳಿಕ ಮೈಸೂರಿಗೆ ಬಂದು ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವಿಗೆ ಪೂಜೆ ಸಲ್ಲಿಸಿದರು.

ಕುಟುಂಬದ ಕೆಲವು ಆಪ್ತರು ಹಾಗೂ ಚಿತ್ರ ತಂಡದ ಸದಸ್ಯರೊಂದಿಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿದರು. ಬಳಿಕ ದೇವಿಯ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಈ ವೇಳೆ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಅಶ್ವಿನಿ ಪುನೀತ್ ರಾಜ್‌ಕುಮಾರ್ ಬೆಂಗಳೂರಿನತ್ತ ತೆರಳಿದರು. ದೇವಾಲಯದ ಬಳಿ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ಜೈಕಾರ ಹಾಕಿ ಅಭಿಮಾನ ಮೆರೆದರು.

ಅಮೆರಿಕದಲ್ಲಿ ಭೀಕರ ರಸ್ತೆ ಅಪಘಾತ

ಮೂವರು ಭಾರತೀಯರು ಸೇರಿದಂತೆ 20 ಮಂದಿ ಸಾವು

ವಾಷಿಂಗ್ಟನ್, ಅ.28– ಕಾರೊಂದಕ್ಕೆ ಮತ್ತೊಂದು ವಾಹನ ಡಿಕ್ಕಿ ಹೊಡೆದ ಪರಿಣಾಮ ಭಾರತದ ಮೂವರು ವಿದ್ಯಾರ್ಥಿಗಳು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಯುನೈಟೆಡ್ ಸ್ಟೇಟ್ಸ್‌ನ ಪಶ್ಚಿಮ ಮೆಸಚೂಸೆಟ್ಸ್‌ನಲ್ಲಿ ನಡೆದಿದೆ.

ಮೃತರನ್ನು ಪ್ರೇಮ್ ಕುಮಾರ್ ರೆಡ್ಡಿ ಗೋಡಾ (27), ಪಾವನಿ ಗುಲ್ಲಪಲ್ಲಿ (22) ಮತ್ತು ಸಾಯಿ ನರಸಿಂಹ ಪಟಂಶೆಟ್ಟಿ (22) ಎಂದು ಗುರುತಿಸಲಾಗಿದೆ. ಎರಡು ವಾಹನಗಳು ಡಿಕ್ಕಿ ಹೊಡೆದ ಪರಿಣಾಮ ಮೂವರು ವಿದ್ಯಾರ್ಥಿಗಳು ಸ್ಥಳದಲ್ಲಿಯೇ ಸಾವನ್ನಪ್ಪಿದ್ದು ಉಳಿದ ಐವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೆಸಚೂಸೆಟ್ಸ್ ರಾಜ್ಯ ಮತ್ತು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ಅ.31ರಿಂದ ಲಷ್ಕರ್ ಮೊಹಲ್ಲಾ ಗರಡಿಕೇರಿ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ಪೂಜಾ ಮಹೋತ್ಸವ



ಮೈಸೂರು, ಅ.28(ಆರ್‌ಕೆಬಿ)–ಲಷ್ಕರ್ ಮೊಹಲ್ಲಾ ಗರಡಿಕೇರಿ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಅ.31 ರಿಂದ ನ.7ರವರೆಗೆ ಕಾರ್ತಿಕ ಮಾಸದ ಪೂಜಾ ಮಹೋತ್ಸವ ನಡೆಯಲಿದೆ ಎಂದು ದೇವಸ್ಥಾನ ಟ್ರಸ್ಟ್ ಸಂಚಾಲಕ ಆರ್.ಜಿ.ಸುರೇಶ್ ಬಾಬು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ. 4ರಂದು ಮೂರ್ತಿಗೆ ಬೆಣ್ಣೆ ಅಲಂಕಾರ, ಉಚಿತ ಆರೋಗ್ಯ ತಪಾಸಣೆ, ಅನ್ನ ಸಂತರ್ಪಣೆ ಇರಲಿದೆ. ನ.7ರಂದು ಮಲೆ ಮಹದೇಶ್ವರಸ್ವಾಮಿಯ ಮಹಾ ಉತ್ಸವ ನೆರವೇರಲಿದೆ ಎಂದು ತಿಳಿಸಿದರು.

ನ.14 ಹಾಗೂ 21ರಂದು ಕಾರ್ತಿಕ ಸೋಮವಾರದ ಅಭಿಷೇಕ, ವಿಶೇಷ ಪೂಜೆ ಇರಲಿದೆ. ಸಂಜೆ 7 ಗಂಟೆಗೆ ಸ್ವಾಮಿಯ ಸುವರ್ಣ ಕೊಳಗದ ಮೆರವಣಿಗೆ ಮೊಹಲ್ಲಾದಲ್ಲಿ ನಡೆಯಲಿದೆ ಎಂದರು. ಪ್ರತಿದಿನ ಸಂಜೆ 7 ಗಂಟೆಗೆ ಭಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಇರಲಿದ್ದು, ಅ3.1ರಂದು ಕೈಲಾಸಮೂರ್ತಿ ಮತ್ತು ವೃಂದದಿಂದ ಕಂಸಾಳೆ ಮತ್ತು ಜನಪದ ಗೀತೆ, ನ.1ರಂದು ಚಿನ್ಮಯಿ ಭಜನಾ ತಂಡದಿಂದ, 2ರಂದು ವರಲಕ್ಷ್ಮಿ ಭಜನಾ ತಂಡದಿಂದ ಹಾಗೂ 3ರಂದು ಸ್ವರ್ಣಗೌರಿ ಭಜನಾ ಮಂಡಳಿಯಿಂದ ಭಜನೆ ಕಾರ್ಯಕ್ರಮ ಏರ್ಪಡಿಸಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಎಂ.ಎಸ್.ರವಿ ಕುಮಾರ್, ವೆಂಕದಾಸಾಚಾರ್, ಮಹದೇವು, ಎಂ.ಶಂಕರ್, ಕುಮಾರ್ ಉಪಸ್ಥಿತರಿದ್ದರು.



ಶುಕ್ರವಾರ ಮಾಜಿ ಸಚಿವ ಹಾಗೂ ಹಾಲಿ ಶಾಸಕರಾದ ಎಸ್.ಎ. ರಾಮದಾಸ್ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಲಾಯಿತು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ನಾಗೇಂದ್ರ, ಕ್ಷೇತ್ರದ ಅಧ್ಯಕ್ಷ ಕೆ.ಸೋಮಶೇಖರ್ ರಾಜು, ನಗರಪಾಲಿಕೆ ಸದಸ್ಯ ಚಿಕ್ಕವೆಂಕಟು, ಆಶ್ರಯ ಸಮಿತಿ ಸದಸ್ಯ ಅನುಜ್ ಸರಸ್ವತ್ ಇದ್ದರು

ಮೈಸೂರಿನ ಉದ್ದಗಲಕ್ಕೂ ಪಸರಿಸಿದ 'ಕೋಟಿ ಕಂಠ ಗಾಯನ' ನಾದ







ಮೈಸೂರು, ಅ.28(ಎಸ್‌ಬಿಡಿ)– ಕನ್ನಡ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧೆಡೆ ಶುಕ್ರವಾರ 'ಕೋಟಿ ಕಂಠ ಗಾಯನ' ಮೇಳೈಸಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಭಾಗಿತ್ವದಲ್ಲಿ ಅಭ್ಯಾಸ ಮಾಡಿದ್ದ ನಿಗದಿತ ಐದು ಕನ್ನಡ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ, ನಾಡು–ನುಡಿಗೆ ನಮನ ಸಲ್ಲಿಸಲಾಯಿತು. ಈ ವೇಳೆ ಕನ್ನಡ ಬಾವುಟ ಹಿಡಿದು, ನಿತ್ಯ ಜೀವನದಲ್ಲಿ ಕನ್ನಡವನ್ನೇ ಬಳಕೆ ಮಾಡುವ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಜೈಲು ಹಕ್ಕಿಗಳು ಭಾಗಿ: ಮೈಸೂರು ಕೇಂದ್ರ ಕಾರಾಗೃಹದಲ್ಲೂ 'ಕೋಟಿ ಕಂಠ ಗಾಯನ' ಆಯೋಜಿಸಲಾಗಿತ್ತು. ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ, ಸಹಾಯಕ ಅಧೀಕ್ಷಕ ವಿಜಯ್ ಎಸ್. ರೋಡ್ಕರ್ ಸೇರಿದಂತೆ ಇನ್ನಿತರ ಅಧಿಕಾರಿಗಳು, ಸಿಬ್ಬಂದಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇಬ್ಬರು ಸಿಬ್ಬಂದಿ, 375 ಸಜಾ ಬಂಧಿಗಳು ಹಾಗೂ 432 ವಿಚಾರಣಾಧೀನ ಬಂಧಿಗಳು ಸೇರಿ ಒಟ್ಟು ಸಾವಿರ ಮಂದಿ ಕೋಟಿ ಕಂಠ ಗಾಯನದಲ್ಲಿ ಭಾಗಿಯಾಗಿದ್ದರು. ಕಾರಾಗೃಹ ವಾಸಿಗಳು ವೃತ್ತಿಪರ ಗಾಯಕರಂತೆ ಕನ್ನಡ ಗೀತೆಗಳನ್ನು ಸುಮಧುರವಾಗಿ ಹಾಡಿದರು.

ಜೆಎಸ್‌ಎಸ್ ಅಕಾಡೆಮಿ: ಮೈಸೂರಿನಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, 'ಕೋಟಿ ಕಂಠ ಗಾಯನ' ಕಾರ್ಯಕ್ರಮದಲ್ಲಿ ಭಾಗಿಯಾಗಿತ್ತು.

ಅಕ್ಯಾಡೆಮಿ ಮತ್ತು ಅದರ ಅಧೀನ ಸಂಸ್ಥೆಗಳ ಅಧಿಕಾರಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಪಾಲ್ಗೊಂಡು ನಿಗದಿತ ಐದು ಕನ್ನಡ ಗೀತೆಗಳನ್ನು ಹಾಡಿದರಲ್ಲದೆ, ಪ್ರೀತಿಯಿಂದ ಕನ್ನಡ ಭಾಷೆ ಬಳಸುವ ಸಂಕಲ್ಪ ಮಾಡಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಈ ವೇಳೆ ಅಕಾಡೆಮಿ ಉಪಕುಲಪತಿ ಡಾ.ಸುರೀಂದರ್ ಸಿಂಗ್ ಮಾತನಾಡಿ, ಕನ್ನಡ ಭಾಷೆಯನ್ನು ಮತ್ತಷ್ಟು ವಿಸ್ತಾರಗೊಳಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು. ಈ ಕೋಟಿ ಕಂಠ ಗಾಯನ ಕಾರ್ಯಕ್ರಮ 67ನೇ ಅದ್ಧೂರಿ ಕನ್ನಡ ರಾಜ್ಯೋತ್ಸವಕ್ಕೆ ಉತ್ತಮ ಮುನ್ನುಡಿಯಾಗಿದೆ ಎಂದು ಅಭಿಪ್ರಾಯಿಸಿದರು.

ಕುಲಸಚಿವ ಡಾ.ಬಿ.ಮಂಜುನಾಥ, ಹಣಕಾಸು ಅಧಿಕಾರಿ ಸಿ.ಸಿ.ಹಿರೇಮಠ, ಉಪ ಕುಲಸಚಿವೆ ಶ್ರೀಮತಿ ಎಂ.ಎಸ್.ಕೋಕಿಲಾ, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಉಪ ಪ್ರಾಂಶುಪಾಲರಾದ ಡಾ.ಎಂ. ಎನ್.ಸುಮಾ, ಡಾ.ಎಸ್.ಪ್ರಶಾಂತ್, ವೀರಭದ್ರಸ್ವಾಮಿ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎಲ್ಲೆಡೆ ಗಾಯನ: ಮೈಸೂರು ನಗರ ಪಾಲಿಕೆ ನವೀಕೃತ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ 'ಕೋಟಿ ಕಂಠ ಗಾಯನ'ದಲ್ಲಿ ಭಾಗಿಯಾದರು. ಹಾಡುಗಳನ್ನು ಹಾಡಿ, ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಮೈಸೂರು ರಂಗಾಯಣದಲ್ಲೂ 150ಕ್ಕೂ ಹೆಚ್ಚು ಜನ 'ಕೋಟಿ ಕಂಠ ಗಾಯನ'ದಲ್ಲಿ ಪಾಲ್ಗೊಂಡು ನಾಡು–ನುಡಿ ಮೇಲಿನ ಅಭಿಮಾನ ಮೆರೆದರು. ಹೀಗೆ ಶಿಕ್ಷಣ ಸಂಸ್ಥೆಗಳು, ಸರ್ಕಾರದ ಅಧೀನ ಸಂಸ್ಥೆಗಳು ಸೇರಿದಂತೆ ಎಲ್ಲೆಡೆ ಇಂದು ಕನ್ನಡ ಡಿಂಡಿಮ ಭಾರಿಸಿದರು.

ಮೈಸೂರು ಮಿತ್ರ ಶನಿವಾರ 29 ಅಕ್ಟೋಬರ್ 2022

ಡಾ.ಕಸ್ತೂರಿ ರಂಗನ್ ವರದಿ ಜಾರಿಯಿಂದ

ಜನ ಜೀವನ, ಪಟ್ಟಣಗಳ ಅಭಿವೃದ್ಧಿ ಮೇಲೆ ದುಷ್ಪರಿಣಾಮ

● ವರದಿ ಜಾರಿಯಿಂದ ರಾಜ್ಯದ ಶೇ.20ರಷ್ಟು ಭೂ ಭಾಗ ಪರಿಸರ ವಲಯವಾಗುತ್ತದೆ ● ಇಷ್ಟು ದೊಡ್ಡ ಪ್ರಮಾಣದ ಪ್ರದೇಶವನ್ನು ಸೂಕ್ಷ್ಮ ಪರಿಸರ ವಲಯಕ್ಕೆ ಒಳಪಡಿಸುವ ಅಗತ್ಯವೇನಿದೆ? ● ಅರಣ್ಯ ಸಂಪತ್ತು ಮತ್ತು ಕೃಷಿ ಚಟುವಟಿಕೆ ನಡುವಿನ ಅವಿನಾಭಾವ ಸಂಬಂಧವನ್ನು ಪರಿಸರ ವಿಚಾರದಲ್ಲಿ ಹೊರಗಿಡಲಾಗುತ್ತಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜಿ.ಎ.ಸುದರ್ಶನ್ ಅಭಿಮತ



ಮಡಿಕೇರಿ,ಅ.28– ಡಾ.ಕಸ್ತೂರಿ ರಂಗನ್ ವರದಿ ಜಾರಿಯಿಂದ ಸೂಕ್ಷ್ಮ ಪರಿಸರ ಪ್ರದೇಶವೆಂದು ಗುರುತಿಸಲ್ಪಟ್ಟ ಪ್ರದೇಶಗಳಲ್ಲಿ ಜನಜೀವನ ಮತ್ತು ಪಟ್ಟಣಗಳ ಅಭಿವೃದ್ಧಿಯ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜಿ.ಎ. ಸುದರ್ಶನ್ ಅಭಿಪ್ರಾಯಪಟ್ಟರು.

ನಗರದ ಕ್ರಿಸ್ಟಲ್ ಕೋರ್ಟ್ ಸಭಾಂಗಣದಲ್ಲಿ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಮತ್ತು ಕರ್ನಾಟಕ ರಾಜ್ಯ ಔಷಧಿ ಗಿಡ ಮೂಲಿಕಾ ಪ್ರಾಧಿಕಾರ, ಮಡಿಕೇರಿ ಅರಣ್ಯ ವಿಭಾಗ ಸಹಯೋಗದಲ್ಲಿ ಆಯೋಜಿತ 'ಜೀವ ವೈವಿಧ್ಯದ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ಔಷಧಿ ಸಸ್ಯ ಸಂಪತ್ತಿನ ಕುರಿತ ಮಾಹಿತಿ ಕಾರ್ಯಾಗಾರ'ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹಸಿರ ಪರಿಸರದ ಅರಣ್ಯ ಸಂಪತ್ತು ಮತ್ತು ಗ್ರಾಮೀಣ ಭಾಗಗಳಲ್ಲಿ ಪಾರಂಪರಿಕವಾಗಿ ನಡೆಸಿಕೊಂಡು ಬರುತ್ತಿರುವ ಕೃಷಿ ಚಟುವಟಿಕೆಗಳ ನಡುವೆ ಅವಿನಾಭಾವ ಸಂಬಂಧವಿದೆ. ಹೀಗಿದ್ದೂ ಇಂತಹ ವಿಚಾರವನ್ನು ಜೀವವೈವಿಧ್ಯತೆಯ ಪರಿಸರ ವಿಚಾರದಿಂದ ಹೊರಗಿಡಲಾಗುತ್ತಿದೆ ಎಂದು ಅವರು ವಿಷಾದಿಸಿದರು.

ಕಸ್ತೂರಿ ರಂಗನ್ ವರದಿಯಲ್ಲಿ ಪರಿಸರ ಸೂಕ್ಷ್ಮ ವಲಯಗಳಲ್ಲಿ ಗಣಿಗಾರಿಕೆ ಮೊದಲಾದವುಗಳನ್ನು ಸಂಪೂರ್ಣ ನಿಷೇಧಿಸಲಾಗಿದೆ. ಪಟ್ಟಣ ಪ್ರದೇಶಗಳ ಅಭಿವೃದ್ಧಿಗೆ ವರದಿಯಿಂದ ಕಡಿವಾಣ ಬೀಳುವ ಸಾಧ್ಯತೆಗಳಿವೆ. ಈ ಹಿನ್ನೆಲೆ ಜಿಲ್ಲೆಯ ವಿರಾಜಪೇಟೆ, ಸೋಮವಾರಪೇಟೆ ಮೊದಲಾದ ಪಟ್ಟಣ ವ್ಯಾಪ್ತಿಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದು ಕಷ್ಟಕರವಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು. ಡಾ.ಕಸ್ತೂರಿ ರಂಗನ್ ವರದಿ ಜಾರಿ ಇಲ್ಲವೇ ಅಧಿಕೃತವಾಗಿ ನೋಟಿಫೈ ಆದಲ್ಲಿ ಪಶ್ಚಿಮ ಘಟ್ಟ ಪ್ರದೇಶದ ಜನ ಜೀವನದ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳಿವೆ ಎಂದರು.

ನೋಟಿಫೈಡ್ ಭೂ ಪ್ರದೇಶ: ಭಾರತದಲ್ಲಿ ಭಗೀರಥ ವ್ಯಾಲಿಯ 4 ಸಾವಿರ ಚದರ ಕಿಮೀ ವ್ಯಾಪ್ತಿಯನ್ನು ಪರಿಸರ ಸೂಕ್ಷ್ಮ ಪ್ರದೇಶವಾಗಿ ಘೋಷಿಸಲಾಗಿದ್ದು, ಪ್ರಸ್ತುತ ಇದು ಪರಿಸರ ಸೂಕ್ಷ್ಮ ಪ್ರದೇಶವಾಗಿ ಘೋಷಿಸಲ್ಪಟ್ಟ ಅತೀ ದೊಡ್ಡ ಪ್ರದೇಶವಾಗಿದೆ. ಆದರೆ, ಡಾ.ಕಸ್ತೂರಿ ರಂಗನ್ ವರದಿಯಲ್ಲಿ ಪಶ್ಚಿಮ ಘಟ್ಟ ಪ್ರದೇಶದ 58 ಸಾವಿರ ಚ.ಕಿ.ಮೀ ಅನ್ನು ಸೂಕ್ಷ್ಮ ಪರಿಸರ ವಲಯವನ್ನಾಗಿ ಘೋಷಿಸಬೇಕೆಂದು ಸೂಚಿಸಲಾಗಿದೆ. ಇದರಲ್ಲಿ ಕರ್ನಾಟಕದ 20 ಸಾವಿರ ಚ.ಕಿ.ಮೀ. ಪ್ರದೇಶ ಸೇರುತ್ತದೆ. ಇದು ಕರ್ನಾಟಕದ ಒಟ್ಟು ವಿಸ್ತೀರ್ಣದ ಶೇ.10 ರಷ್ಟಾಗುತ್ತದೆ. ಇಂತಹ ಸೂಕ್ಷ್ಮ ಪರಿಸರ ವಲಯದ ಅಂಚಿನಿಂದ 10 ಕಿ.ಮೀ. ವ್ಯಾಪ್ತಿಯೂ ಘೋಷಿಸಲ್ಪಟ್ಟ ಸೂಕ್ಷ್ಮ ಪರಿಸರ ವಲಯದ ವ್ಯಾಪ್ತಿಗೆ ಒಳಪಡುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಒಟ್ಟು ವಿಸ್ತೀರ್ಣದ ಶೇ.20ರಷ್ಟು ಭೂ ಭಾಗ ಸೂಕ್ಷ್ಮ ಪರಿಸರ ವಲಯವಾಗುತ್ತದೆ ಎಂದು ಮಾಹಿತಿ ನೀಡಿದರು. ಹಿಮಾಲಯ ಪರ್ವತ ಶ್ರೇಣಿ ಈಶಾನ್ಯ ರಾಜ್ಯಗಳವರೆಗೆ ಪಸರಿಸಿದೆ. ಅಲ್ಲಿನ ಭಗೀರಥಿ ವ್ಯಾಲಿಯ 4 ಸಾವಿರ ಚ.ಕಿ.ಮೀ. ವ್ಯಾಪ್ತಿಯನ್ನಷ್ಟೆ ಸೂಕ್ಷ್ಮ ಪರಿಸರ ವಲಯವನ್ನಾಗಿಸಿರುವಾಗ, ಪಶ್ಚಿಮ ಘಟ್ಟದ ಇಷ್ಟು ದೊಡ್ಡ ಪ್ರಮಾಣದ ಪ್ರದೇಶವನ್ನು ಸೂಕ್ಷ್ಮ ಪರಿಸರ ವಲಯಕ್ಕೆ ಒಳಪಡಿಸುವ ಅಗತ್ಯವೇನಿದೆ ಎನ್ನುವ ಮಾತುಗಳೂ ಕೇಳಿ ಬರುತ್ತಿವೆ. ಈ ಎಲ್ಲಾ ವಿಚಾರಗಳು ಜನರ ಮುಂದೆ ಚರ್ಚೆಯಾಗಬೇಕಾಗಿದೆ ಎಂದರು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಕೆ.ಜಿ. ಬೋಪಯ್ಯ, ಕಾಡು ಉಳಿದರೆ ನಾಡು ಉಳಿಯುತ್ತದೆ. ಕಾಡು ಎಂದರೆ ಕೇವಲ ಮರ ಗಿಡಗಳು ಮಾತ್ರವಲ್ಲ. ಅದರಲ್ಲಿ ಜೀವ ವೈವಿಧ್ಯತೆಯೂ ಅಡಗಿದೆ ಎಂದು ವಿಶ್ಲೇಷಿಸಿದರು. ಅರಣ್ಯ ಪ್ರದೇಶಗಳಲ್ಲಿ ಅತ್ಯಮೂಲ್ಯ ಔಷಧೀಯ ಸಸ್ಯಗಳು ಮತ್ತು ಅವುಗಳ ಬಳಕೆ ನಮ್ಮ ಹಿರಿಕರಿಗೆ ತಿಳಿದಿತ್ತು. ಔಷಧೀಯ ಸಸ್ಯಗಳಿಂದ ಮಾಡುವ ಚಿಕಿತ್ಸಾ ಕ್ರಮಗಳನ್ನು ಮತ್ತೊಬ್ಬರಿಗೆ ಹೇಳಿದರೆ ಅದರ ಫಲ ಹೋಗುತ್ತದೆ ಎನ್ನುವ ಮೂಢ ನಂಬಿಕೆಗಳಿಂದ ಅದನ್ನು ಹೇಳದ ಸ್ಥಿತಿ ಇದೆ ಎಂದು ತಿಳಿಸಿದರಲ್ಲದೆ, ಔಷಧೀಯ ಸಸ್ಯಗಳು ಮತ್ತು ಅವುಗಳ ಬಳಕೆ ನಾಶವಾಗಬಾರದು ಎಂದರು. ಅರಣ್ಯ ಪ್ರದೇಶಗಳಲ್ಲಿ ಈ ಹಿಂದೆ ಕಾಣುತ್ತಿದ್ದ ಪೌಷ್ಟಿಕಾಂಶಯುಕ್ತ ಬಗೆ ಬಗೆಯ ಹಣ್ಣುಗಳು ಇಂದು ನಶಿಸಿವೆ. ನಮ್ಮ ಅಜ್ಞಾನ, ತಿಳುವಳಿಕೆಯ ಕೊರತೆಯಿಂದ ಕಾಡು ಹಣ್ಣುಗಳು, ಔಷಧೀಯ ಸಸ್ಯಗಳು ಕಣ್ಮರೆಯಾಗುತ್ತಿವೆ. ಇಂತಹ ಅಮೂಲ್ಯ ಸಸ್ಯ ಸಂಪತ್ತು ಸಂರಕ್ಷಣೆ ಆಗಬೇಕಿದೆ ಎಂದರು.

ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ 10 ಎಕರೆ ಪ್ರದೇಶದಲ್ಲಿ ಅತ್ಯಮೂಲ್ಯವಾದ ಔಷಧೀಯ ಸಸ್ಯಗಳನ್ನು ಬೆಳೆಯುವಂತೆ ಶಾಸಕ ಕೆ.ಜಿ. ಬೋಪಯ್ಯ ಸಲಹೆ ನೀಡಿದರು. ಇದಕ್ಕೆ ಬೇಕಾದ ನೆರವನ್ನು ಸರಕಾರದಿಂದ ಒದಗಿಸುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅನಿತ ಎಸ್.ಅರೇಕಲ್, ಕೊಡಗು ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್.ಎನ್. ಮೂರ್ತಿ, ಪೊನ್ನಂಪೇಟೆ ಅರಣ್ಯ ಕಾಲೇಜಿನ ಡೀನ್ ಡಾ. ಸಿ.ಜಿ.ಕುಶಾಲಪ್ಪ, ನಿವೃತ್ತ ಡಿಸಿಎಫ್ ಜಯ, ಮೋಹನ್ ದಾಸ್ ಮೊದಲಾದವರು ಉಪಸ್ಥಿತರಿದ್ದರು.

> ಅರಣ್ಯ ಪ್ರದೇಶಗಳಲ್ಲಿ ವನ್ಯಜೀವಿಗಳಿಗೆ ಅಗತ್ಯವಾದ ಆಹಾರ ಲಭ್ಯವಿಲ್ಲದಿರುವುದೇ ಅವುಗಳು ಅರಣ್ಯದಿಂದ ಹೊರ ಬರುವುದಕ್ಕೆ ಕಾರಣವಾಗಿದೆ. ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿ ತೇಗದ ಮರಗಳೇ ಅಧಿಕವಾಗಿದ್ದು, ವನ್ಯಜೀವಿಗಳಿಗೆ ಅಗತ್ಯವಾದ ಆಹಾರವನ್ನು ನೀಡುವ ಸಸ್ಯ ಸಂಪತ್ತು ಇಲ್ಲ ಎಂದು ಹೇಳಿದರು. ಅರಣ್ಯದಲ್ಲಿ ವನ್ಯಜೀವಿಗಳಿಗೆ ಅಗತ್ಯವಾದ ಆಹಾರ ದೊರಕುವಂತೆ ಮಾಡಿದಲ್ಲಿ ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷಕ್ಕೆ ಕಡಿವಾಣ ಹಾಕಬಹುದು.
> –ಬೋಪಯ್ಯ, ಶಾಸಕ

ಆನೆ ದವಡೆ ಹಲ್ಲು ಮಾರುತ್ತಿದ್ದ ಇಬ್ಬರ ಬಂಧನ



ಮಡಿಕೇರಿ,ಅ.28– ಆನೆಯ ದವಡೆ ಹಲ್ಲುಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಅರಣ್ಯ ಸಂಚಾರಿ ದಳ ಬಂಧಿಸಿದೆ. ಬಂಧಿತ ಆರೋಪಿಗಳಿಂದ 20 ಕೆ.ಜಿ ತೂಕದ ಆನೆಯ 3 ದವಡೆ ಹಲ್ಲುಗಳನ್ನು ವಶಕ್ಕೆ ಪಡೆಯಲಾಗಿದೆ.

ಪ್ರಕರಣ ಹಿನ್ನೆಲೆ: ಪೊನ್ನಂಪೇಟೆ ತಾಲೂಕಿನ ಮೇಕೂರು ಹೊಸ್ಕೆರೆ ಗ್ರಾಮ ವ್ಯಾಪ್ತಿಯಲ್ಲಿ ಒಟ್ಟು 4 ಮಂದಿ ಆನೆಯ ದವಡೆ ಹಲ್ಲುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದಾರೆ ಎಂದು ಅರಣ್ಯ ಸಂಚಾರಿ ದಳಕ್ಕೆ ಮಾಹಿತಿ ಲಭಿಸಿತ್ತು. ಈ ಮಾಹಿತಿಯನ್ನು ಆಧರಿಸಿ ಮಡಿಕೇರಿ ಅರಣ್ಯ ಸಂಚಾರಿ ದಳದ ಉಪ ಸಂರಕ್ಷಣಾ ಅಧಿಕಾರಿ ಶಿವರಾಮ್ ಬಾಬು ಮಾರ್ಗದರ್ಶನದಲ್ಲಿ ದಾಳಿ ನಡೆಸಲಾಯಿತು.

ಈ ಸಂದರ್ಭ ತಿತಿಮತಿ–ಪಾಲಿಬೆಟ್ಟ ರಸ್ತೆಯ ಪಕ್ಕದಲ್ಲಿರುವ ನಿರ್ಜನ ಪ್ರದೇಶದಲ್ಲಿ ಆನೆ ದವಡೆ ಮಾರಾಟಕ್ಕೆ ಯತ್ನಿಸುತ್ತಿದ್ದ ಸಂದರ್ಭ ಇಬ್ಬರು ಆರೋಪಿಗಳು ಸೆರೆ ಸಿಕ್ಕಿದ್ದಾರೆ. ಈ ವೇಳೆ ಮತ್ತಿಬ್ಬರು ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದು, ತಲೆಮರೆಸಿಕೊಂಡ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಂಧಿತ ಆರೋಪಿಗಳಿಂದ 20 ಕೆ.ಜಿ. ತೂಕದ 3 ದವಡೆ ಹಲ್ಲುಗಳು ಹಾಗೂ ಕೃತ್ಯಕ್ಕೆ ಬಳಸಿದ್ದ 2 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ವಿರುದ್ಧ ವನ್ಯ ಜೀವಿ ಸಂರಕ್ಷಣಾ ಕಾಯಿದೆ ಅಡಿ ಪ್ರಕರಣ ದಾಖಲಿಸಲಾಗಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀನಿವಾಸ್ ನಾಯಕ್, ವಲಯ ಅರಣ್ಯಾಧಿಕಾರಿ ಮಂಜುನಾಥ್ ದೂಳೆ, ಉಪ ವಲಯ ಅರಣ್ಯಾಧಿಕಾರಿ ಚಂದ್ರಶೇಖರ್, ಪಿ.ಗಣಪತಿ, ಜೆ.ವಿಕ್ರಮ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಪ್ರಕಾಶ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಏರ್ ಮಾರ್ಷಲ್ ಮನವೇಂದ್ರಸಿಂಗ್ ಭೇಟಿ



ಮಡಿಕೇರಿ, ಅ.28– ಭಾರತೀಯ ವಾಯುಪಡೆಯ ಏರ್ ಮಾರ್ಷಲ್ ಮನವೇಂದ್ರ ಸಿಂಗ್ ನಗರದಲ್ಲಿನ ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಶುಕ್ರವಾರ ಭೇಟಿ ನೀಡಿ ಸ್ಮಾರಕ ನಿರ್ವಹಣೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಜನರಲ್ ತಿಮ್ಮಯ್ಯ ಭಾರತೀಯರ ಸ್ಫೂರ್ತಿಯ ಚೇತನ ಎಂದು ಅವರು ಶ್ಲಾಘಿಸಿದರು.

ಏರ್ ಮಾರ್ಷಲ್ ಮನವೇಂದ್ರ ಸಿಂಗ್, ಪಿವಿಎಸ್, ಎಂಎವಿಎಸ್, ಎಂವಿಆರ್‌ಸಿ, ವಿಎಸ್‌ಎಂ, ಎಡಿಸಿ, ಏರ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್, ಟ್ರೈನಿಂಗ್ ಕಮಾಂಡ್ ಇವರು ತಮ್ಮ ಪತ್ನಿ ಅಂಬಿಕಾ ಸಿಂಗ್ ಅವರೊಂದಿಗೆ ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಭೇಟಿ ನೀಡಿ, ದೇಶದ ವೀರಸೇನಾನಿಗೆ ಗೌರವ ನಮನ ಸಲ್ಲಿಸಿದರು.

ತಿಮ್ಮಯ್ಯ ಬಾಲ್ಯ, ಸೇನಾ ವೃತ್ತಿ ಸಂಬಂಧಿತ ಸ್ಮಾರಕ ಭವನದಲ್ಲಿನ ಚಿತ್ರ, ವಿಡಿಯೋಗಳನ್ನು ವೀಕ್ಷಿಸಿದ ಏರ್ ಮಾರ್ಷಲ್ ಮನವೇಂದ್ರ ಸಿಂಗ್, ದೇಶದ ಸೇನಾ ಪಡೆಗೆ ಜನರಲ್ ತಿಮ್ಮಯ್ಯ ಅವರ ಕೊಡುಗೆ ಅಪ್ರತಿಮವಾದದ್ದು ಎಂದು ಹೆಮ್ಮೆ ವ್ಯಕ್ತಪಡಿಸಿದರು.

ವೀರಸೇನಾನಿಯ ಸೇನಾ ಜೀವನದ ಐತಿಹಾಸಿಕ ಕ್ಷಣಗಳನ್ನು ಈ ಸ್ಮಾರಕ ಭವನದಲ್ಲಿ ಉತ್ತಮವಾಗಿ ನಿರ್ವಹಿಸಲಾಗಿದೆ. ಭವಿಷ್ಯದ ಪೀಳಿಗೆಗೆ ಈ ಸ್ಮಾರಕ ಭವನ ಅತ್ಯುತ್ತಮ ಸ್ಫೂರ್ತಿಯ ತಾಣವಾಗಿದೆ ಎಂದು ಹೇಳಿದ ಮನವೇಂದ್ರಸಿಂಗ್, ಭಾರತದ ಸೇನೆಯ ಸ್ಫೂರ್ತಿಯ ಚೇತನ ಜನರಲ್ ತಿಮ್ಮಯ್ಯ ಅವರಿಗೆ ಗೌರವ ನಮನ ಸಲ್ಲಿಸಿರುವುದು ಹೆಮ್ಮೆ ತಂದಿದೆ ಎಂದು ಮೆಚ್ಚುಗೆಯಿಂದ ನುಡಿದರು.

ಮನವೇಂದ್ರ ಸಿಂಗ್ ಅವರಿಗೆ ತಿಮ್ಮಯ್ಯ ಸ್ಮಾರಕ ಭವನದ ವ್ಯವಸ್ಥಾಪಕರಾದ ಸುಬೇದಾರ್ ಮೇಜರ್ ಗೌಡಂಡ ತಿಮ್ಮಯ್ಯ ಅವರು ತಿಮ್ಮಯ್ಯ ಅವರ ಬಗ್ಗೆ ಮಾಹಿತಿ ನೀಡಿದರು.

ಕೂಡಿಗೆ ಶಾಲೆಯ ಪ್ರಾಂಶುಪಾಲ ಕರ್ನಲ್ ಜಿ ಕಣ್ಣನ್, ಉಪ ಪ್ರಾಂಶುಪಾಲ ಸ್ಕ್ವಾಡ್ರನ್ ಲೀಡರ್ ಮನ್‌ಪ್ರೀತ್ ಸಿಂಗ್ ಜತೆಗಿದ್ದರು. ಇದಕ್ಕೂ ಮೊದಲು ಏರ್ ಮಾರ್ಷಲ್ ಮನವೇಂದ್ರಸಿಂಗ್, ತಲಕಾವೇರಿ ಮತ್ತು ಭಾಗಮಂಡಲ ಭಗಂಡೇಶ್ವರ ದೇವಾಲಯಗಳಿಗೆ ತೆರಳಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಮಹಿಳಾ ಸಹಾಯವಾಣಿಯಲ್ಲಿ 4,612 ಪ್ರಕರಣ ಇತ್ಯರ್ಥ

ಮಡಿಕೇರಿ, ಅ.28– ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ 2002ರ ನ.4 ರಂದು ಕೊಡಗು ಜಿಲ್ಲಾ ಶಿಶು ಕಲ್ಯಾಣ ಸಂಸ್ಥೆಯಲ್ಲಿ ಪ್ರಾರಂಭಗೊಂಡ 'ಸಾಂತ್ವನ ಮಹಿಳಾ ಸಹಾಯವಾಣಿ' ಕೊಡಗಿನಾದ್ಯಂತ ಸಮಾಜದ ನೊಂದ ಮಹಿಳೆಯರು ಪ್ರತಿಯೊಂದು ಸ್ತರದಲ್ಲಿ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ದಾಖಲಿಸಿಕೊಂಡು ತಕ್ಷಣಕ್ಕೆ ಸರಿಯಾದ ಸಲಹೆ ಸೂಚನೆಗಳನ್ನು ನೀಡಿ ನೆರವು ಕಲ್ಪಿಸುತ್ತಾ ಬಂದಿದೆ.

ಸಾಂತ್ವನ ಕೇಂದ್ರದಲ್ಲಿ ಈವರೆಗೆ 4631 ವಿವಿಧ ಸ್ವರೂಪದ ಪ್ರಕರಣಗಳು ದಾಖಲಾಗಿದ್ದು, 4,612 ಪ್ರಕರಣಗಳು ಇತ್ಯರ್ಥಗೊಂಡಿರುತ್ತದೆ. 2022–23ನೇ ಆರ್ಥಿಕ ಸಾಲಿನಲ್ಲಿ ಒಟ್ಟು 149 ಪ್ರಕರಣಗಳು ದಾಖಲಾಗಿ 131 ಪ್ರಕರಣಗಳು ಇತ್ಯರ್ಥಗೊಂಡು ಉಳಿದ 18 ಪ್ರಕರಣಗಳು ಇತ್ಯರ್ಥದ ಹಂತದಲ್ಲಿದೆ. ಮಾಹಿತಿಗೆ ಮೊ.ಸಂ.9880985939 ನ್ನು ಸಂಪರ್ಕಿಸಬಹುದು ಎಂದು ಕೊಡಗು ಜಿಲ್ಲಾ ಶಿಶು ಕಲ್ಯಾಣ ಸಂಸ್ಥೆಯ ಅಧ್ಯಕ್ಷರು ತಿಳಿಸಿದ್ದಾರೆ.

ಗ್ರಾಪಂ ಸದಸ್ಯೆ ಶಾಯಿನಾ ನಿಧನ



ಗೋಣಿಕೊಪ್ಪ, ಅ.28– ಅನಾರೋಗ್ಯದಿಂದ ಬಳಲುತ್ತಿದ್ದ ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಹರಿಶ್ಚಂದ್ರಪುರ ವಾರ್ಡ್ ಸದಸ್ಯೆ ಎಂ.ಬಿ. ಶಾಯಿನಾ(51) ಗುರುವಾರ ನಿಧನರಾದರು.

ಮೃತರು ಪತಿ ಹಾಗೂ ಒಬ್ಬ ಪುತ್ರಿ, ಪುತ್ರ ಹಾಗೂ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಗೋಣಿಕೊಪ್ಪದಲ್ಲಿ ನಡೆಯಿತು. ಮೃತರ ಗೌರವಾರ್ಥ ಶುಕ್ರವಾರ ಬೆಳಗ್ಗೆ 10 ರಿಂದ 11 ಗಂಟೆವರೆಗೆ ಅಂಗಡಿ ಮುಂಗಟ್ಟು ಮುಚ್ಚಲಾಗಿತ್ತು.

ಕೊಳ್ಳೇಗಾಲ ನಗರಸಭೆ ಉಪಚುನಾವಣೆ

ಶೇ.71.82ರಷ್ಟು ಶಾಂತಿಯುತ ಮತದಾನ

7 ವಾರ್ಡ್‌ಗಳಲ್ಲಿಯೂ ಉತ್ಸಾಹದಿಂದ ಹಕ್ಕು ಚಲಾವಣೆ

ಕೊಳ್ಳೇಗಾಲ, ಅ.28–ಕೊಳ್ಳೇಗಾಲ ನಗರಸಭೆಯ 7 ವಾರ್ಡ್‌ಗಳಿಗೆ ಶುಕ್ರವಾರ ನಡೆದ ಉಪಚುನಾವಣೆಯಲ್ಲಿ ಸಣ್ಣಪುಟ್ಟ ಗೊಂದಲ ಹೊರತುಪಡಿಸಿ ಶೇ.71.82 ರಷ್ಟು ಶಾಂತಿಯುತ ಮತದಾನವಾಗಿದೆ.





ನಗರದ 7 ವಾರ್ಡ್‌ನಲ್ಲಿಯೂ ಮತದಾರರು ಬೆಳಗಿನಿಂದ ಸಂಜೆ 5ರತನಕ ಸರತಿ ಸಾಲಿನಲ್ಲಿ ನಿಂತು ಉತ್ಸಾಹದಿಂದ ಹಕ್ಕು ಚಲಾಯಿಸಿದರು. ಮತದಾರರು ಮತಗಟ್ಟೆಗೆ ಆಗಮಿಸುತ್ತಿದ್ದಂತೆ ದೂರದಲ್ಲಿದ್ದ ಅಭ್ಯರ್ಥಿಗಳು ತಮಗೆ ಮತ ನೀಡುವಂತೆ ಮನವಿ ಮಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.


ವೃದ್ಧರು–ಅಶಕ್ತರ ಹಕ್ಕು ಚಲಾವಣೆ: 13ನೇ ವಾರ್ಡ್‌ನಲ್ಲಿ ಹಿರಿಯರು, ವಯೋವೃದ್ಧರನ್ನು ಮಹಿಳಾ ಪೊಲೀಸ್ ಸಿಬ್ಬಂದಿಯೊಬ್ಬರು ಕೈ ಹಿಡಿದು ಮತದಾನಕ್ಕೆ ಕರೆದೊಯ್ದು ಗಮನ ಸೆಳೆದರೆ, ಅಶಕ್ತರು, ವಯಸ್ಸಾದ ಅಜ್ಜಿಯೊಬ್ಬರನ್ನು ತಮ್ಮ ಸಂಬಂಧಿಯೋರ್ವ ಹೊತ್ತುಕೊಂಡು ಬಂದು ಮತ ಹಾಕಿಸಿದ್ದು ಕಂಡು ಬಂತು. 21ನೇ ವಾರ್ಡ್‌ನಲ್ಲಿ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, 13ನೇ ವಾರ್ಡ್‌ನಲ್ಲಿ ಶಾಸಕ ಎನ್.ಮಹೇಶ್ ಅವರ ಆಪ್ತ ಸಹಾಯಕ ಗಿರೀಶ್ ಬಾಬು, ಪತ್ನಿ ಅಂಜಲಿದೇವಿ ಜೊತೆ ಆಗಮಿಸಿ ತಮ್ಮ ಹಕ್ಕು ಚಲಾಯಿಸಿದರು.

10 ಮತಗಟ್ಟೆಯಲ್ಲೂ ಮತದಾನ ಬಿರುಸು: ಮತದಾನದ ಹಿನ್ನೆಲೆಯಲ್ಲಿ 7 ವಾರ್ಡ್‌ಗಳಲ್ಲಿ 10 ಮತಗಟ್ಟೆಗಳನ್ನು ತಾಲೂಕು ಆಡಳಿತ ಸ್ಥಾಪಿಸಿ, ಮತದಾನಕ್ಕೆ ಅಗತ್ಯ ಸಿದ್ಧತೆ ಕೈಗೊಂಡಿತ್ತು. ಬೆಳಗ್ಗೆ 7ರಿಂದ ಪ್ರಾರಂಭವಾದ ಮತದಾನ ಪ್ರಕ್ರಿಯೆ ಸಂಜೆ 5ಗಂಟೆಗೆ ಕೊನೆಗೊಂಡಿತು. ಒಟ್ಟು 8,898 ಮತದಾರರ ಪೈಕಿ 6,391 ಮಂದಿ ಹಕ್ಕು ಚಲಾಯಿಸಿದರು. ಈ ಪೈಕಿ 3,143 ಪುರುಷರು ಹಾಗೂ 3,248 ಮಹಿಳಾ ಮತದಾರರು ಮತ ಚಲಾಯಿಸಿ ಉತ್ಸಾಹ ತೋರಿದರು.

ಲಿಂಗಣಾಪುರದಲ್ಲಿ ಅಧಿಕ ಮತದಾನ: ನಗರದ ಎಂಸಿಕೆಸಿ ಶಾಲಾ ಮತಗಟ್ಟೆಯಲ್ಲಿ ಶೇ.54.83 ಕಡಿಮೆ ಮತದಾನವಾದರೆ, ಲಿಂಗಣಾಪುರ ಸರ್ಕಾರಿ ಶಾಲಾ ಮತಗಟ್ಟೆಯಲ್ಲಿ ಶೇ.79.14 ಅಧಿಕ ಮತದಾನವಾಗಿದೆ. ಉಳಿದಂತೆ ಐಇಎಲ್‌ಸಿ ಶಾಲಾ ಮತಗಟ್ಟೆಯಲ್ಲಿ 70.45, ಎಸ್‌ವಿಕೆ ಕಾಲೇಜು ಮತಗಟ್ಟೆಯಲ್ಲಿ ಶೇ.68.56, ತೋಟಗಾರಿಕೆ ಇಲಾಖೆ ಪೀಸ್ ಪಾರ್ಕ್ ಮತಗಟ್ಟೆಯಲ್ಲಿ 74.10, ಚೌಡೇಶ್ವರಿ ಶಾಲಾ ಮತಗಟ್ಟೆಯಲ್ಲಿ ಶೇ.74.86, ಮಂಜುನಾಥ ನಗರದ ಸರ್ಕಾರಿ ಶಾಲಾ ಮತಗಟ್ಟೆ 1ರಲ್ಲಿ ಶೇ.69.48, ಮತಗಟ್ಟೆ 2ರಲ್ಲಿ ಶೇ.69.78, ಬಾಪುನಗರ ಶಾಲಾ ಮತಗಟ್ಟೆಯಲ್ಲಿ ಶೇ.74.86, ಶಂಕನಪುರ ಶಾಲಾ ಮತಗಟ್ಟೆಯಲ್ಲಿ ಶೇ.77.05ರಷ್ಟು ಮತದಾನವಾಗಿದೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಅಂತಿಮ ಕಣದಲ್ಲಿರುವವರು: ಬಿಜೆಪಿಯಿಂದ ನಾಗಮಣಿ, ನಾಸೀರ್ ಷರೀಫ್, ಮಾನಸ, ನಾಗಸುಂದ್ರಮ್ಮ, ಪವಿತ್ರ, ರಾಮಕೃಷ್ಣ, ಪ್ರಕಾಶ್ ಕಣದಲ್ಲಿದ್ದರೆ, ಕಾಂಗ್ರೆಸ್‌ನಿಂದ ಭಾಗ್ಯಾ, ಸಂಪತ್ ಕುಮಾರಿ, ಮಹಮದ್ ಕಿಜರ್, ಸರಸ್ವತಿ ಮನೋಹರ್, ಕೆ.ಕೆ.ಮೂರ್ತಿ, ನಗರಸಭೆ ಮಾಜಿ ಅಧ್ಯಕ್ಷ ರಮೇಶ್, ಸುನೀತಾ ಮಹದೇಶ್, ಜೆಡಿಎಸ್‌ನಿಂದ ಮಂಗಳಮ್ಮ, ಇರ್ಫಾನ್ ಕಣದಲ್ಲಿದ್ದಾರೆ. ಬಿಎಸ್‌ಪಿಯಿಂದ ರಂಗಸ್ವಾಮಿ, ಇನಾಯತ್ ಪಾಷ ಲೋಕೇಶ್ ವಿವಿಧ ವಾರ್ಡ್‌ನ ಕಣದಲ್ಲಿದ್ದಾರೆ. ಎಸ್‌ಡಿಪಿಐ ಅಭ್ಯರ್ಥಿಯಾಗಿ ಹೆಚ್.ಕೆ. ಶಾಂತಲಕ್ಷ್ಮಿ, ಕೆಆರ್‌ಎಸ್ ಪಕ್ಷದಿಂದ ಜಗದೀಶ್, ಪಕ್ಷೇತರ ಅಭ್ಯರ್ಥಿಗಳಾಗಿ ಕವಿತಾ ಶೇಖರ್, ಶಿವಶಂಕರ್, ನಿವೃತ್ತ ಯೋಧ ಎಂ. ಮಹದೇವ, ಶಿವಮಲ್ಲು ಕಣದಲ್ಲಿದ್ದಾರೆ.

24 ಮಂದಿ ಭವಿಷ್ಯ ಭದ್ರ: 7 ವಾರ್ಡ್‌ಗಳಿಂದ 24 ಮಂದಿ ಅಂತಿಮ ಕಣದಲ್ಲಿದ್ದು, ಇವರೆಲ್ಲರ ಭವಿಷ್ಯವನ್ನು ಮತದಾರರು ಇವಿಎಂನಲ್ಲಿ ಭದ್ರಪಡಿಸಿದ್ದಾರೆ. ಮತಯಂತ್ರಗಳನ್ನು ನಗರದ ನ್ಯಾಷನಲ್ ಶಾಲೆಯಲ್ಲಿ ಬಿಗಿ ಬಂದೋಬಸ್ತ್‌ನಲ್ಲಿರಿಸಲಾಗಿದೆ. 31ರಂದು ಎಣಿಕೆ ನಡೆಯಲಿದ್ದು, ಅಂದು ಅಭ್ಯರ್ಥಿಗಳ ಹಣೆಬರಹ ತಿಳಿಯಲಿದೆ.

> **ಕೊಳ್ಳೇಗಾಲ ಉಪಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಬಿಜೆಪಿಯ 7 ಅಭ್ಯರ್ಥಿಗಳೂ ಗೆಲ್ಲಲಿದ್ದಾರೆ. ನಗರಸಭೆ 7 ವಾರ್ಡ್‌ಗಳಲ್ಲೂ ಬಿರುಸಿನ ಮತದಾನ ನಡೆದಿದೆ. ಬಿಜೆಪಿ ಸಮಾಜಮುಖಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಎಲ್ಲರೂ ಜಯಗಳಿಸುವ ಮೂಲಕ ನಗರಸಭೆ ಮತ್ತೊಮ್ಮೆ ಬಿಜೆಪಿ ತೆಕ್ಕೆಗೆ ತರುವಲ್ಲಿ ಮತದಾರರು ಸಹಕರಿಸಲಿದ್ದಾರೆ. ಈ ಬಗ್ಗೆ ನಾನು ಹಾಗೂ ಶಾಸಕ ಎನ್. ಮಹೇಶ್ ವಿಶ್ವಾಸ ಹೊಂದಿದ್ದೇವೆ. ಮತದಾರರು ಖಂಡಿತ ಆಶೀರ್ವದಿಸಿದ್ದು, ಆ ಮೂಲಕ ಜನತೆ ನಗರದ ಅಭಿವೃದ್ಧಿಗೆ ಕೊಡುಗೆ ನೀಡಲಿದ್ದಾರೆ.**
>
> 
>
> –ಜಿ.ಎನ್.ನಂಜುಂಡಸ್ವಾಮಿ, ಮಾಜಿ ಶಾಸಕ.

ಮತದಾರರ ಪಟ್ಟಿಯಲ್ಲಿ ಲೋಪ; ಅಧಿಕಾರಿಗಳಿಗೆ ತರಾಟೆ

ಕೊಳ್ಳೇಗಾಲದ 2ನೇ ವಾರ್ಡ್‌ನಲ್ಲಿ ಮತದಾರರ ಪಟ್ಟಿಯಲ್ಲಿ ಲೋಪವಿದ್ದು, ಕೂಡಲೇ ಸರಿಪಡಿಸಬೇಕು, ಇಲ್ಲವಾದಲ್ಲಿ ಚುನಾವಣೆ ಮುಂದೂಡಬೇಕು ಎಂದು ವಾರ್ಡ್‌ನ ನಿವಾಸಿಗಳು, ನಗರಸಭೆ ಹಾಗೂ ತಾಲೂಕು ಅಧಿಕಾರಿಗಳಿಗೆ ದೂರು ನೀಡಿದ್ದರೂ ಸಹ ನಿರ್ಲಕ್ಷ್ಯದ ಪರಿಣಾಮ ಇಂದು 30ರಿಂದ 40ಕ್ಕೂ ಅಧಿಕ ಮಂದಿ ಹೆಸರು ಮತದಾರ ಪಟ್ಟಿಯಲ್ಲಿ ನಾಪತ್ತೆಯಾಗಿತ್ತು. ಇದರಿಂದ ಅಸಮಾಧಾನಗೊಂಡ ಮತದಾರರು ಚುನಾವಣಾ ಅಧಿಕಾರಿಯೂ ಆದ ತಹಸೀಲ್ದಾರ್ ಶಿವಪ್ರಸಾದ್‌ರನ್ನು ತರಾಟೆ ತೆಗೆದುಕೊಂಡರು.

ಮತಪಟ್ಟಿ ಲೋಪದಿಂದ ಮತದಾನಕ್ಕೆ ಅವಕಾಶವಿಲ್ಲದೆ ಪರಿಣಾಮ ಚುನಾವಣಾಧಿಕಾರಿ ಹಾಗೂ ನಗರಸಭೆ ಆಯುಕ್ತರ ವಿರುದ್ಧ ವಾರ್ಡ್‌ನ ನಿವಾಸಿಗಳಾದ ಮಹದೇವ, ಚಂದ್ರು ಸೇರಿದಂತೆ ಹಲವು ಮತದಾರರು ಧಿಕ್ಕಾರ ಕೂಗಿದರಲ್ಲದೆ, ಕಂದಾಯ ಇಲಾಖೆ ಮತದಾರ ಪಟ್ಟಿ ಪರಿಷ್ಕರಣಾ ಕಾರ್ಯ ಸಮರ್ಪಕ ರೀತಿಯಲ್ಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಗರಸಭಾ ಆಯುಕ್ತ ನಂಜುಂಡಸ್ವಾಮಿ ಲೋಪ ಸಂಬಂಧ ಪರಿಶೀಲಿಸುವುದಾಗಿ ಮತದಾರರ ಮನವೊಲಿಸಿ, ಬಳಿಕ ನಿರ್ಗಮಿಸಿದರು.

ಇನ್ನು ವಾರ್ಡ್ ನಂ.13ರಲ್ಲೂ ಮತದಾರರ ಪಟ್ಟಿಯಲ್ಲಿ ಲೋಪ ಕಂಡು ಬಂತು. ಕೆಲವರ ಹೆಸರಿದ್ದು ಪಟ್ಟಿಯಲ್ಲಿ ಫೋಟೊ ಇರಲಿಲ್ಲ. ಇನ್ನು ಕೆಲವರ ಫೋಟೋ ಹೆಸರು ಅದಲು–ಬದಲಾಗಿ ಗೊಂದಲಕ್ಕೂ ಕಾರಣವಾಯಿತು. ಕಳೆದ ಬಾರಿ ನಗರಸಭೆ ಚುನಾವಣೆಯಲ್ಲಿ ಮತದಾನ ಮಾಡಿದ್ದ ಅನೇಕ ಮಂದಿಯ ಹೆಸರು ಪಟ್ಟಿಯಲ್ಲಿ ಇರಲಿಲ್ಲ. ಇದು ಮತದಾರರ ಆಕ್ರೋಶಕ್ಕೂ ಕಾರಣವಾಯಿತು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ

ರಾಜ್ಯದ 150 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ವಿಶ್ವಾಸ



ಹನೂರು/ ಗುಂಡ್ಲುಪೇಟೆ, ಅ.28– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ 150 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಬಿಜೆಪಿ ಮತ್ತೆ ಅಧಿಕಾರಕ್ಕೇರಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಖಾಸಗಿ ಕಲ್ಯಾಣ ಮಂಟಪದ ಬಳಿ ಏರ್ಪಡಿಸಿದ್ದ ಕಾರ್ಯಕರ್ತರ ಸಂಕಲ್ಪ ಯಾತ್ರೆಯ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹನೂರಿನಲ್ಲೂ ಕೂಡ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿದರೆ ಸರ್ಕಾರದಿಂದ ಸಾಕಷ್ಟು ಅನುದಾನ ನೀಡುವ ಮೂಲಕ ಮಾದರಿ ವಿಧಾನಸಭಾ ಕ್ಷೇತ್ರವನ್ನಾಗಿ ಮಾಡಲಾಗುವುದು. ರಾಜ್ಯದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅವರ ಉತ್ತಮ ಆಡಳಿತವನ್ನು ಜನ ಮೆಚ್ಚಿದ್ದಾರೆ. 60 ವರ್ಷಗಳ ಆಳ್ವಿಕೆ ನಡೆಸಿದ ಕಾಂಗ್ರೆಸ್ ಭ್ರಷ್ಟಾಚಾರ, ವಿಭಜನೆವಾದ ಮಾಡಿದೆ. ಗರೀಬ್ ಹಠಾವ್ ಹೆಸರಿನಲ್ಲಿ ಕಾಂಗ್ರೆಸ್ ಮುಖಂಡರಾದ ಗಾಂಧಿ, ಖರ್ಗೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಕುಟುಂಬಗಳ ಬಡತನ ಹೋಗಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಚುನಾವಣೆಗೆ ನಿಲ್ಲಲು ಕ್ಷೇತ್ರವೇ ಇಲ್ಲವಾಗಿದೆ. ಅರ್ಕಾವತಿ ಹಗರಣ ಹೊರ ಬಂದರೆ ಸಿದ್ದರಾಮಯ್ಯ ಜೈಲಿಗೆ ಹೋಗಲಿದ್ದಾರೆ ಎಂದು ಆರೋಪಿಸಿದರಲ್ಲದೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಹಾರ್ ಜೈಲಿಗೆ ಯಾಕೆ ಹೋಗಿ ಬಂದರು... ಪರೀಕ್ಷೆ ಬರೆಯಲಾ? ಎಂದು ವ್ಯಂಗ್ಯವಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ್ ತೆಂಗಿನಕಾಯಿ, ರಾಜ್ಯ ಕಾರ್ಯದರ್ಶಿ ಸಿದ್ದರಾಜು, ಮೈ.ವಿ.ರವಿಶಂಕರ್, ಎಂಎಲ್‌ಸಿ ಮುನಿರಾಜು, ರಾಷ್ಟ್ರೀಯ ಪರಿಷತ್ ಸದಸ್ಯ ಬೂದುಬಾಳು ವೆಂಕಟಸ್ವಾಮಿ, ಕಾಡ ಅಧ್ಯಕ್ಷ ನಿಜಗುಣರಾಜು, ಜಿಲ್ಲಾಧ್ಯಕ್ಷ ಸುಂದರ್, ಜಿಲ್ಲಾ ಪ್ರಧಾನಕಾರ್ಯದರ್ಶಿ ಮಂಗಲ ಶಿವಕುಮಾರ್, ಮಾಜಿ ಶಾಸಕಿ ಪರಿಮಳಾ ನಾಗಪ್ಪ, ನಂಜುಂಡಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ದತ್ತೇಶ್‌ಕುಮಾರ್, ಪ್ರೀತನ್ ನಾಗಪ್ಪ, ಜಿಲ್ಲಾ ಓಬಿಸಿ ಮೋರ್ಚಾ ಸಂಚಾಲಕ ಬಿ.ವೆಂಕಟೇಶ್, ಹನೂರು ಮಂಡಲ ಅಧ್ಯಕ್ಷ ಮಹಾಲಿಂಗನಕಟ್ಟೆ ಸಿದ್ದಪ್ಪ, ಮಲೆ ಮಹದೇಶ್ವರಬೆಟ್ಟ ಮಂಡಲ ಅಧ್ಯಕ್ಷ ವೀರಭದ್ರ, ಹನೂರು ಪಪಂ ಅಧ್ಯಕ್ಷ ಚಂದ್ರಮ್ಮ ಸೇರಿದಂತೆ ಇನ್ನಿತರೆ ಮುಖಂಡರು, ಕಾರ್ಯಕರ್ತರಿದ್ದರು.

ಗುಂಡ್ಲುಪೇಟೆ ವರದಿ: ವೀರಶೈವ ಲಿಂಗಾಯತ ಸಮುದಾಯವನ್ನು ಹೊಡೆಯುವುದರೊಂದಿಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಧರ್ಮದ್ರೋಹಿಯಾಗಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲು ಕಿಡಿಕಾರಿದರು.

ಗುಂಡ್ಲುಪೇಟೆ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಜನ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಗಾಂಧಿ ಕುಟುಂಬವು ರಾಜ್ಯ ರಾಜ್ಯಗಳನ್ನು ಒಡೆದಂತೆ ಸಿದ್ದರಾಮಯ್ಯ ವೀರಶೈವ–ಲಿಂಗಾಯತರನ್ನು ಒಡೆಯುವುದರೊಂದಿಗೆ ಧರ್ಮದ್ರೋಹಿ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ನಡೆಸುತ್ತಿರುವುದು ಜೋಡೋ ಯಾತ್ರೆಯಲ್ಲ ಕಾಂಗ್ರೆಸ್ ಓಡೋ ಯಾತ್ರೆ, ರಾಜ್ಯದಿಂದ ಕಾಂಗ್ರೆಸ್ ಓಡುವುದು ಖಚಿತ. ರಾಹುಲ್ ಕಾಲಿಟ್ಟ ಕಡೆಗಳಲ್ಲಿ ಕಮಲ ಅರಳುವುದು ಗ್ಯಾರಂಟಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ್ ತಿಂಗಿನಕಾಯಿ, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ರಾಜ್ಯ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಎನ್. ಮಲ್ಲೇಶ್, ಎಂಎಲ್‌ಸಿ ಮುನಿರಾಜ್‌ಗೌಡ, ಮಾಜಿ ಶಾಸಕ ಕೆ.ಆರ್.ಮಲ್ಲಿಕಾರ್ಜುನಪ್ಪ ಜಿಲ್ಲಾಧ್ಯಕ್ಷ ಸುಂದರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಮಂಡಲಾಧ್ಯಕ್ಷ ದೊಡ್ಡಹುಂಡಿ ಜಗದೀಶ್, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಮುಖಂಡರಾದ ಎಸ್.ಸಿ.ಮಂಜುನಾಥ್, ಕಮರಹಳ್ಳಿ ರವಿ, ಹೊರೆಯಾಲ ಮಹೇಶ್, ಹಿರಿಕಾಟಿ ಸೋಮಶೇಖರ್, ಸಿ.ಮಹದೇವಪ್ರಸಾದ್ ಮತ್ತು ಕ್ಷೇತ್ರದ ಬೂತ್ ಮಟ್ಟದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಕಾರ್ಯಕರ್ತರಿದ್ದರು.

ಚಾ.ನಗರ ಜಿಲ್ಲಾದ್ಯಂತ ಮೇಳೈಸಿದ

ಕೋಟಿ ಕಂಠ ಗೀತ ಗಾಯನ



ಚಾಮರಾಜನಗರ, ಅ.28–ಕರ್ನಾಟಕ ರಾಜ್ಯೋತ್ಸವದ ಪೂರ್ವವಾಗಿ ಇಂದು ಜಿಲ್ಲಾದ್ಯಂತ ಕೋಟಿ ಕಂಠ ಗೀತ ಗಾಯನ ಮೇಳೈಸಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ 'ನನ್ನ ನಾಡು–ನನ್ನ ಹಾಡು' ಶೀರ್ಷಿಕೆಯಡಿ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದ ಮುಂಭಾಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಜಿಲ್ಲಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಜನಪ್ರತಿನಿಧಿಗಳು, ಕನ್ನಡಪರ ಸಂಘಟನೆಗಳ ಮುಖಂಡರು, ಪ್ರತಿನಿಧಿಗಳು, ಅಧಿಕಾರಿಗಳು, ಕಲಾವಿದರು, ಸಾರ್ವಜನಿಕರು ಪಾಲ್ಗೊಂಡು ಕನ್ನಡ ಗೀತೆಗಳನ್ನು ಹಾಡಿ ಗಮನ ಸೆಳೆದರು.

ಮೊದಲಿಗೆ ರಾಷ್ಟ್ರಕವಿ ಕುವೆಂಪುರವರ ನಾಡಗೀತೆ 'ಜಯಭಾರತ ಜನನಿಯ ತನುಜಾತೆ' ಹಾಡಲಾಯಿತು. ಬಳಿಕ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು', ಕುವೆಂಪುರವರ 'ಬಾರಿಸು ಕನ್ನಡ ಡಿಂಡಿಮವ', ಡಾ.ಡಿ.ಎಸ್. ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ', ನಾಡೋಜ ಡಾ.ಚನ್ನವೀರ ಕಣವಿ ಅವರ 'ವಿಶ್ವ ವಿನೂತನ ವಿದ್ಯಾಚೇತನ' ಹಾಗೂ ಡಾ.ಹಂಸಲೇಖ ಅವರ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಗೀತೆಗಳ ಸಮೂಹ ಗಾಯನ ಏಕಕಾಲದಲ್ಲಿ ಮೊಳಗಿತು.


ಕೋಟಿ ಕಂಠ ಸಮೂಹ ಗೀತ ಗಾಯನ ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್‌ಪಿ ಟಿ.ಪಿ. ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಹಾಗೂ ನಗರಸಭಾ ಸದಸ್ಯರು, ಕನ್ನಡ ಪರ ಸಂಘಟನೆಗಳ ಮುಖಂಡರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಇತರೆ ಜನಪ್ರತಿ ನಿಧಿಗಳು, ಗಣ್ಯರು, ಕಲಾವಿದರು, ವಿದ್ಯಾರ್ಥಿಗಳು ಸೇರಿದಂತೆ ಹೆಚ್ಚು ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಎಡಿಸಿ ಎಸ್.ಕಾತ್ಯಾಯಿನಿ ದೇವಿ, ಕನ್ನಡ ಬಳಕೆ, ಕಲಿಕೆ, ನಾಡು, ನುಡಿ, ಸಂಸ್ಕೃತಿ, ಪರಂಪರೆ ಉಳಿಸಿ ಪೋಷಿಸುವ ಕುರಿತು ಪ್ರತಿಜ್ಞಾ ವಿಧಿ ಬೋಧಿಸಿದರು.

ಗಡಿ ಗ್ರಾಮಗಳಲ್ಲಿಯೂ ಗೀತ ಗಾಯನ

ಚಾಮರಾಜನಗರ: ಜಿಲ್ಲೆಯ ಗಡಿ ಗ್ರಾಮಗಳಲ್ಲೂ ಕೋಟಿ ಕಂಠ ಗೀತ ಗಾಯನ ಮೊಳಗಿತು.

ಚಾಮರಾಜನಗರ ತಾಲೂಕಿನ ಯರಗನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ, ಪುಣಜನೂರು ಗ್ರಾಪಂ ವ್ಯಾಪ್ತಿಯ ಕೋಳಿಪಾಳ್ಯ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣ, ಅರಕಲವಾಡಿ ಗ್ರಾಪಂ ವ್ಯಾಪ್ತಿಯ ಜೆಎಸ್‌ಎಸ್ ಪ್ರೌಢಶಾಲೆ, ಬಿಸಲವಾಡಿ ಗ್ರಾಮದ ಪ್ರೌಢಾಶಾಲೆ ಆವರಣ, ಗುಂಡ್ಲುಪೇಟೆ ತಾಲೂಕಿನಲ್ಲಿ ಗಡಿಯಂಚಿನ ಮಂಗಲ ಗ್ರಾಪಂ ಕಾರ್ಯಾಲಯ, ಬೇರಾಂಬಾಡಿ ಗ್ರಾಮದ ಸರ್ಕಾರಿ ಶಾಲೆ, ಬೊಮ್ಮನಹಳ್ಳಿ ಗ್ರಾಪಂ ಕಾರ್ಯಾಲಯ, ಹನೂರು ತಾಲೂಕಿನಲ್ಲಿ ಬೈಲೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸೇರಿದಂತೆ ವಿವಿಧೆಡೆ ಕೋಟಿ ಕಂಠ ಗೀತ ಗಾಯನ ಯಶಸ್ವಿಯಾಯಿತು. ಗ್ರಾಪಂ ಆಡಳಿತ ಮಂಡಳಿ, ಅಭಿವೃದ್ಧಿ ಅಧಿಕಾರಿಗಳು, ಶಾಲಾ ಶಿಕ್ಷಕರು, ಪೋಷಕರಿದ್ದರು.

ಬಸವಯ್ಯ ನಿಧನ



ಚಾಮರಾಜನಗರ, ಅ.28–ತಾಲೂಕಿನ ಬದನಗುಪ್ಪೆ ಗ್ರಾಮದ ನಿವಾಸಿ, ಜಲಾನಯನ ಅಭಿವೃದ್ಧಿ ಇಲಾಖೆಯ ನಿವೃತ್ತ ನೌಕರ ಬಸವಯ್ಯ(75) ಅನಾರೋಗ್ಯದಿಂದ ಶುಕ್ರವಾರ ಸಂಜೆ ನಿಧನರಾದರು. ಮೃತರು, ಪುತ್ರ–ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಗ್ರಾಮದ ಸ್ಮಶಾನದಲ್ಲಿ ನಡೆಯಲಿದೆ.

ಎಸ್‌ಪಿ ಮುಖಂಡ ಆಜಂ ಖಾನ್ ಶಾಸಕ ಸ್ಥಾನದಿಂದ ಅನರ್ಹ

ಉತ್ತರಪ್ರದೇಶ: ಪ್ರಧಾನಿ ನರೇಂದ್ರ ಮೋದಿ ವಿರುದ್ಧ ದ್ವೇಷಪೂರಿತ ಭಾಷಣ ಮಾಡಿದ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಸಮಾಜವಾದಿ ಪಕ್ಷದ ನಾಯಕ ಆಜಂ ಖಾನ್ ಅವರನ್ನು ಶುಕ್ರವಾರ ಶಾಸಕ ಸ್ಥಾನದಿಂದಲೂ ಅನರ್ಹಗೊಳಿಸಲಾಗಿದೆ.



ಪ್ರಧಾನಿ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಭಾರತೀಯ ಆಡಳಿತ ಸೇವೆ ಅಧಿಕಾರಿ ವಿರುದ್ಧ ದ್ವೇಷಪೂರಿತ ಭಾಷಣ ಮಾಡಿದ ಆಜಂ ಖಾನ್ ಅವರಿಗೆ ಉತ್ತರ ಪ್ರದೇಶದ ರಾಂಪುರದ ನ್ಯಾಯಾಲಯವು ಗುರುವಾರ 3 ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಅದರ ಬೆನ್ನಲ್ಲೇ ಶಾಸಕ ಸ್ಥಾನದಿಂದ ಅನರ್ಹಗೊಳಿಸಿರುವುದಾಗಿ ಉತ್ತರ ಪ್ರದೇಶ ವಿಧಾನಸಭಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ದುಬೆ ಹೇಳಿದ್ದಾರೆ.

ಖಾನ್ ಪ್ರತಿನಿಧಿಸುತ್ತಿದ್ದ ರಾಂಪುರ ಸದರ್ ಕ್ಷೇತ್ರ ತೆರವುಗೊಂಡಿರುವುದಾಗಿ ಘೋಷಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. 2019ರಲ್ಲಿ ಪ್ರಧಾನಿ ನರೇಂದ್ರ ಮೋದಿ, ಯೋಗಿ ಆದಿತ್ಯನಾಥ್ ಮತ್ತು ಐಎಎಸ್ ಅಧಿಕಾರಿ ಆಂಜನೇಯ ಕುಮಾರ್ ಸಿಂಗ್ ವಿರುದ್ಧ ದ್ವೇಷಪೂರಿತ ಭಾಷಣ ಮಾಡಿದ್ದಕ್ಕಾಗಿ ಖಾನ್ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಪ್ರೀಮಿಯಂ ರಹಿತ ವಿಮಾ ಯೋಜನೆ

ಮೈಸೂರು, ಅ.28– ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ತಮ್ಮ ವೇತನ ಖಾತೆಯನ್ನು ಹೊಂದಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರಿಗೆ ಪ್ರೀಮಿಯಂ ರಹಿತ ವಿಮಾ ವೈಯಕ್ತಿಕ ಅಪಘಾತ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ವೈಯಕ್ತಿಕ ವಿಮಾ ಯೋಜನೆಯಿಂದ ಪಾಲಿಸಿದಾರರು ಅಪಘಾತದಲ್ಲಿ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ 50 ಲಕ್ಷ ರೂ. ಪರಿಹಾರ ಧನ ದೊರೆಯಲಿದೆ. ಅಪಘಾತದಲ್ಲಿ ಸಿಬ್ಬಂದಿಗಳು ಶಾಶ್ವತವಾಗಿ ಪೂರ್ಣ ಅಂಗವೈಕಲ್ಯತೆಗೆ ತುತ್ತಾದಲ್ಲಿ 20 ಲಕ್ಷ ರೂ. ಹಣ ಹಾಗೂ ಶಾಶ್ವತ, ಭಾಗಶಃ ಅಂಗವೈಕಲ್ಯತೆ ಉಂಟಾದಲ್ಲಿ 10 ಲಕ್ಷ ರೂ. ವಿಮಾ ಪರಿಹಾರ ದೊರೆಯಲಿದೆ.

ಈ ಯೋಜನೆಯ ಮತ್ತೊಂದು ವೈಶಿಷ್ಟ್ಯವೆಂದರೆ ಕರ್ತವ್ಯ ನಿರತ ಹಾಗೂ ಕರ್ತವ್ಯದಲ್ಲಿ ಇಲ್ಲದ ಸಮಯದಲ್ಲಿ ಕೂಡ ಆಗುವ ವೈಯಕ್ತಿಕ ಅಪಘಾತಗಳಿಗೂ ವಿಮೆ ಅನ್ವಯಿಸುತ್ತದೆ. ಸಿಬ್ಬಂದಿಗಳ ಅಪಘಾತದಲ್ಲಿನ ಪ್ಲಾಸ್ಟಿಕ್ ಸರ್ಜರಿ ಚಿಕಿತ್ಸೆಗಾಗಿ ಗರಿಷ್ಟ 10 ಲಕ್ಷ/– ರೂ. ಕೋಮಾದಲ್ಲಿ ಮೃತಪಟ್ಟರೆ 50 ಲಕ್ಷ ಅಲ್ಲದೆ ಹೆಚ್ಚುವರಿಯಾಗಿ 2 ಲಕ್ಷ ರೂ. ಗಳನ್ನು ಮತ್ತು ಏರ್ ಅಂಬ್ಯುಲೆನ್ಸ್ ಸೇವೆಗಾಗಿ 10 ಲಕ್ಷ ರೂ. ವಿಮಾ ಪರಿಹಾರ ನೀಡಲಾಗುವುದು.

ಸಿಬ್ಬಂದಿಗಳು ಅಪಘಾತದಲ್ಲಿ – ಮೃತಪಟ್ಟರೆ ಮಕ್ಕಳ ಪದವಿ ಶಿಕ್ಷಣಕ್ಕಾಗಿ ಗರಿಷ್ಟ ರೂ 5 ಲಕ್ಷ ಹಾಗೂ ಹೆಣ್ಣು ಮಕ್ಕಳ ವಿವಾಹಕ್ಕೆ ಗರಿಷ್ಟ 5 ಲಕ್ಷ ರೂ. ಗಳವರೆಗೆ ಆರ್ಥಿಕ ಸಹಾಯವನ್ನು ವಿಮಾ ಯೋಜನೆ ಒಳಗೊಂಡಿರುತ್ತದೆ. ಕಾರ್ಮಿಕರ ಮತ್ತು ಅವರ ಕುಟುಂಬ ವರ್ಗದವರ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಡನೆ ಒಡಂಬಡಿಕೆ ಮಾಡಿಕೊಂಡು ಜಾರಿಗೊಳಿಸುತ್ತಿರುವ ಉತ್ತಮ ಯೋಜನೆ ಇದಾಗಿದೆ ಎಂದು ಮೈಸೂರು ವಿಭಾಗದ ಕ.ರಾ.ರ.ಸಾ. ನಿಗಮ ವಿಭಾಗಿಯ ನಿಯಂತ್ರಣಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಅಪ್ಪು ಅಭಿಮಾನಿಗಳು

ಸಂಗಂ ಚಿತ್ರಮಂದಿರ ದಲ್ಲಿ ಪ್ರದರ್ಶನಗೊಂಡಿತು. ಡಾ.ಪುನೀತ್ ರಾಜ್‌ಕುಮಾರ್ ನಮ್ಮನ್ನಗಲಿ ನಾಳೆ (ಅ. 29)ಗೆ ಒಂದು ವರ್ಷ. ಮೊದಲ ವರ್ಷದ ಪುಣ್ಯಸ್ಮರಣೆ ಮುನ್ನಾ ದಿನವಾದ ಇಂದು ರಾಜ್ಯಾದ್ಯಂತ 1,500 ಸ್ಕ್ರೀನ್‌ಗಳಲ್ಲಿ ಅವರು ಅಭಿನಯಿಸಿದ ಕಡೇ ಚಿತ್ರ 'ಗಂಧದ ಗುಡಿ' ಬಿಡುಗಡೆಯಾಗಿದೆ. ಮೈಸೂರಲ್ಲಿ ಬೆಳಗ್ಗೆ 6.30 ಗಂಟೆಗೆ ಸಂಗಂ ಟಾಕೀಸ್ ಮತ್ತು ಎಲ್ಲಾ ಮಲ್ಟಿಪ್ಲೆಕ್ಸ್‌ಗಳಲ್ಲಿ ಚಿತ್ರ ಪ್ರದರ್ಶನಗೊಳ್ಳುತ್ತಿದೆ.

ಕೇವಲ 1 ಗಂಟೆ 6 ನಿಮಿಷ ಅವಧಿಯ ಗಂಧದ ಗುಡಿಯನ್ನು ಪ್ರತೀ ಸ್ಕ್ರೀನ್‌ನಲ್ಲಿ ಇಂದು 6 ಪ್ರದರ್ಶನ ಮಾಡಲಾಯಿತು. ಬೆಳಗ್ಗೆ 6.30ರಿಂದ ರಾತ್ರಿ 10 ಗಂಟೆವರೆಗೆ ನಿರಂತರವಾಗಿ ಚಿತ್ರ ಪ್ರದರ್ಶಿಸಿದರೂ ಎಲ್ಲಾ ಶೋಗಳಿಗೂ ಪ್ರೇಕ್ಷಕರು ಕಿಕ್ಕಿರಿದು ಚಿತ್ರ ವೀಕ್ಷಿಸಿದರು. ಬಿಡುಗಡೆ ದಿನವೇ ಮೊದಲ ಪ್ರದರ್ಶನದಲ್ಲೇ ನೋಡಬೇಕೆಂಬ ಅಭಿಮಾನಿಗಳ ಮಹದಾಸೆಯಿಂದ ನಿನ್ನೆ (ಅ. 27)ಯೇ ಎಲ್ಲಾ ಸ್ಕ್ರೀನ್‌ಗಳಲ್ಲೂ ಇಂದಿನ ಪ್ರದರ್ಶನದ ಟಿಕೆಟ್‌ಗಳು ಸೋಲ್ಡ್‌ಔಟ್ ಆಗಿದ್ದವು.

ಪ್ರದರ್ಶನ ಆರಂಭವಾಗುತ್ತಿದ್ದಂತೆಯೇ ಎಲ್ಲಾ ಮಲ್ಟಿಪ್ಲೆಕ್ಸ್ ಮತ್ತು ಸಂಗಂ ಟಾಕೀಸ್‌ನಲ್ಲಿ ಪುನೀತ್ ಮೊದಲ ದೃಶ್ಯ ಕಣ್ಣಿಗೆ ಬೀಳುತ್ತಿದ್ದಂತೆ ಅಭಿಮಾನಿಗಳ ಸಂಭ್ರಮದ ಜೊತೆಗೆ ಭಾರೀ ಅಳು, ಆಕ್ರಂದನದ ಜೊತೆಗೆ ಜೋರಾಗಿ ಕೂಗಿ, ಶಿಳ್ಳೆ ಹೊಡೆದು ಸಂಭ್ರಮಿಸಿದರು. ಅಪ್ಪುವಿನ ಅಭಿನಯ, ಭಾವನಾತ್ಮಕ ಮಾತುಗಳನ್ನು ಕೇಳಿ ಮೂಕವಿಸ್ಮಿತರಾದರು.

ಕಾಡಿನೊಳಗೆ ಹಾವುಗಳಿರುವ ಸ್ಥಳಕ್ಕೆ ಸ್ನೇಹಿತನೊಂದಿಗೆ ಹೋಗುವ ಪುನೀತ್, "ಸೇಫಾಗಿದೆಯಾ ಈ ಜಾಗ? ಏಕೆಂದರೆ ಹಾವುಗಳನ್ನು ಕಂಡರೆ ನನಗೆ ಭಯ. ಮನೆಯಲ್ಲಿ ಹೆಂಡತಿ–ಮಕ್ಕಳು ಕಾಯುತ್ತಿರುತ್ತಾರೆ. ಅಲ್ಲದೆ ಇನ್ನೂ 2–3 ಸಿನೆಮಾ ಬಾಕಿ ಇದೆ" ಎನ್ನುವ ಅಪ್ಪು ಅವರ ಸಹಜ ಮಾತುಗಳಿಗೆ 'ಅಯ್ಯೋ ಭಗವಂತ' ಎಂದು ಗದ್ಗದಿತರಾದ ಪ್ರೇಕ್ಷಕರು ಹಾಗೂ ಅಭಿಮಾನಿಗಳು ಕಣ್ಣೀರು ಸುರಿಸಿದರು.

ಪುನೀತ್ ರಾಜ್‌ಕುಮಾರ್ ಅವರ ಪ್ರತಿ ಮಾತು, ಅಭಿನಯದ ಪ್ರತೀ ಸಂದರ್ಭದಲ್ಲೂ ಭಾವುಕರಾಗುತ್ತಿದ್ದ ಅಭಿಮಾನಿಗಳು ಸಿನೆಮಾ ಮುಗಿಯುವವರೆಗೂ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಸಿನೆಮಾ ಸ್ಕ್ರೀನ್‌ಗಳ ಮುಂದೆ ದುಃಖದ ಛಾಯೆ ಆವರಿಸಿದರೆ, ಟಾಕೀಸ್ ಹೊರಗಡೆ, ಮಲ್ಟಿಪ್ಲೆಕ್ಸ್ ಥಿಯೇಟರ್‌ಗಳ ಬಳಿ ಸಂಭ್ರಮಾಚರಣೆ ಮಾಡಿ ಕುಣಿದು ಕುಪ್ಪಳಿಸುತ್ತಿದ್ದ ದೃಶ್ಯ ಕಂಡುಬಂದಿತು. ಥಿಯೇಟರ್‌ಗಳಲ್ಲಿ ಅಪ್ಪು ಲೈಫ್‌ಸೈಜ್ ಕಟೌಟ್, ಫ್ಲೆಕ್ಸ್‌ಗಳನ್ನು ಅಳವಡಿಸಿ ಪುಷ್ಪಾಲಂಕಾರ ಮಾಡಿ, ಜಾನಪದ ಕಲಾವಿದರ ಡೊಳ್ಳು, ತಮಟೆ ಶಬ್ಧಕ್ಕೆ ಅಭಿಮಾನಿಗಳು ಹೆಜ್ಜೆ ಹಾಕಿ ಜೈಕಾರದೊಂದಿಗೆ 'ಗಂಧದ ಗುಂಡಿ' ಚಿತ್ರವನ್ನು ಅದ್ಧೂರಿಯಾಗಿ ಅಪ್ಪಿಕೊಂಡರು. ಕೆಲವೆಡೆ ಗಂಧದ ಗುಡಿ ಚಿತ್ರ ಬಿಡುಗಡೆ ಹಿನ್ನೆಲೆಯಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಚಿತ್ರಮಂದಿರ, ಮಲ್ಟಿಪ್ಲೆಕ್ಸ್‌ಗಳ ಬಳಿ ಅಪ್ಪು ಕಟೌಟ್‌ಗಳಿಗೆ ಭಾರೀ ಗಾತ್ರದ ಹಾರ ಹಾಕಿ ಸಂಭ್ರಮಿಸಿದ ಅಭಿಮಾನಿಗಳು ಸಂಭ್ರಮಾಚರಣೆ ಮಾಡಿದರು. ಕೆಲವೆಡೆ ಅಪ್ಪು ಕಟೌಟ್‌ಗಳಿಗೆ ಕ್ಷೀರಾಭಿಷೇಕ ಮಾಡಿ, ಪಟಾಕಿಗಳನ್ನು ಸಿಡಿಸಿ 'ಗಂಧದ ಗುಡಿ'ಯನ್ನು ಸ್ವಾಗತಿಸಿದ ಅಭಿಮಾನಿಗಳು, ಕೇಕ್ ಕತ್ತರಿಸಿದರು. ಕಾಡಿನಲ್ಲಿ ನೈಸರ್ಗಿಕ ಸಂಪತ್ತು, ಬಯೋ ಡೈವರ್ಸಿಟಿ (ಜೀವ ವೈವಿಧ್ಯ)ಯ ಇತಿಹಾಸ, ಹಿನ್ನೆಲೆಯನ್ನು ಕಣ್ಮುಂದೆ ತಂದಿರುವ ನಿರ್ದೇಶಕ ಅಮೋಘವರ್ಷ, ಆ ಮೂಲಕ ಅಪ್ಪು ಅವರ ಮೂಲಕ ಪ್ರಾಣಿ ಜಗತ್ತನ್ನೂ 'ಗಂಧದ ಗುಡಿ' ಮೂಲಕ ಅನಾವರಣಗೊಳಿಸಿದ್ದಾರೆ. ಇಂದು ಮೊದಲ ದಿನದ ಮೊದಲ ಪ್ರದರ್ಶನ ವೀಕ್ಷಿಸಿ ಕಣ್ಣೀರಿಡುತ್ತಲೇ ಹೊರ ಬಂದ ಅಪ್ಪು ಅಭಿಮಾನಿ, ವಿಜಯನಗರ ರೈಲ್ವೆ ಲೇಔಟ್ ಇಂಜಿನಿಯರಿಂಗ್ ಪದವೀಧರ ಆಕಾಶ್, 'ಗಂಧದ ಗುಡಿ' ಚಿತ್ರದ ಮೂಲಕ ಅಪ್ಪು ನಾನು ಇನ್ನು ನಿಮ್ಮೊಂದಿಗೆ ಜೀವಂತವಾಗಿದ್ದೇವೆ ಎಂಬ ಸಂದೇಶ ಸಾರಿದ್ದಾರೆ. ಅವರ ಒಂದೊಂದು ಮಾತು, ಅಭಿನಯವೂ ಹೃದಯ ಕಲಕುವಂತಿದೆ ಎಂದರು.

"ಅಪ್ಪು ಅವರು ನಮ್ಮ ನಡುವೆಯೇ ಇದ್ದಾರೆ. ಗಂಧದ ಗುಡಿ ಚಿತ್ರವನ್ನು ಮತ್ತೆ ಮತ್ತೆ ನೋಡಬೇಕು. ಚಿತ್ರ ಆರಂಭದಿಂದ ಅಂತ್ಯದವರೆಗೂ ನಮ್ಮ ಭಾವನೆಗಳೊಂದಿಗೆ ಬೆಸೆಯುತ್ತದೆ. ಇಂತಹ ಸಿನೆಮಾ ಇನ್ನೊಂದು ಬರಲು ಸಾಧ್ಯವಿಲ್ಲ" ಎಂದು ಮತ್ತೋರ್ವ ಯುವಕ ಎಸ್.ಆರ್. ಯಶಸ್ ಭಾರವಾದ ಹೃದಯದಿಂದ ನುಡಿದ. ಒಟ್ಟಾರೆ ಅಪ್ಪು ಅವರ ಕಡೇ ಚಿತ್ರಕ್ಕೆ ಇನ್ನಿಲ್ಲದ ಪ್ರಶಂಸೆ, ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಎಲ್ಲಾ ಮಲ್ಟಿಪ್ಲೆಕ್ಸ್ ಹಾಗೂ ಥಿಯೇಟರ್‌ನಲ್ಲಿ ಟಿಕೆಟ್‌ಗಳು ಒಂದು ದಿನ ಮುಂಚಿತವಾಗಿಯೇ ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಆಗುತ್ತಿವೆ. ಇನ್ನೂ ಒಂದು ವಾರ ಇದೇ ಪರಿಸ್ಥಿತಿ ಮುಂದುವರೆಯುವ ಸಾಧ್ಯತೆ ಇದೆ. ಆಯಾ ಠಾಣೆಗಳ ಪೊಲೀಸ್ ಸಿಬ್ಬಂದಿಯನ್ನು ಸಿನೆಮಾ ಪ್ರದರ್ಶನ ಸ್ಥಳದಲ್ಲಿ ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದೆ.

ಶುದ್ಧೀಕರಣ ಘಟಕ ಸ್ಥಾಪನೆಗೆ ಕಟ್ಟಾದೇಶ

ಜಾನುವಾರುಗಳು ಕಾಯಿಲೆಯಿಂದ ನರಳುವಂತಾಗಿದೆ. ಬೆಳೆಗಳು ಒಂದಲ್ಲ ಒಂದು ರೀತಿಯ ಕೀಟಗಳಿಗೆ ತುತ್ತಾಗುತ್ತಿವೆ. ಇದರ ಸಂಪೂರ್ಣ ಮಾಹಿತಿ ಪಡೆದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪರಿಸರ ಮಂಡಳಿ ಮತ್ತು ಜಿಲ್ಲಾಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ನದಿ ಭಾಗದಲ್ಲಿರುವ ಎಲ್ಲಾ ಕೈಗಾರಿಕೆಗಳು ತಕ್ಷಣವೇ ಶುದ್ಧಿಕರಣ ಘಟಕಗಳನ್ನು ಪ್ರಾರಂಭಿಸಬೇಕು. ಸರ್ಕಾರಿ ಆದೇಶವನ್ನು ಧಿಕ್ಕರಿಸಿ, ನದಿಗಳಿಗೆ ಕಲುಷಿತ ನೀರನ್ನು ಹರಿಸಿದ್ದಲ್ಲಿ, ಕೈಗಾರಿಕೆ ಗಳನ್ನು ಬಂದ್ ಮಾಡುವಂತೆ ಕಟ್ಟಾದೇಶ ಮಾಡಿ ದ್ದಾರೆ ಎಂದರು. ರಾಜ್ಯದ ಇತಿಹಾಸದಲ್ಲೇ ನೀರಾ ವರಿ ಯೋಜನೆಗಳಿಗೆ ಪ್ರಸಕ್ತ

ವರ್ಷ 20 ಸಾವಿರ ಕೋಟಿ ರೂ.ಗಳನ್ನು ವೆಚ್ಚ ಮಾಡುತ್ತಿದ್ದೇವೆ.

ರಾಜ್ಯದಲ್ಲಿ ಒಟ್ಟಾರೆ 66 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ತೆಗೆಯಬಹುದು. ಆದರೆ ನಾವು ಇದುವರೆಗೂ 51 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರುಣಿಸಿದ್ದೇವೆ.

ಬೃಹತ್ ಹಾಗೂ ಸಣ್ಣ ನೀರಾವರಿ ಇಲಾಖೆಗಳು ಉಳಿದಿರುವ 15 ಲಕ್ಷ ಹೆಕ್ಟೇರ್ ಭೂಮಿಗೆ ನೀರುಣಿಸಲು ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕಾಗಿದೆ. ಕಾವೇರಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನಮ್ಮ ನೀರಿನ ಪಾಲನ್ನು ಸದುಪಯೋಗ ಪಡೆದುಕೊಳ್ಳಲು ಹತ್ತು ಹಲವು ಯೋಜನೆಗಳನ್ನು ರೂಪಿಸಿದ್ದೇವೆ ಎಂದರು.

ಭದ್ರಾ ಯೋಜನೆಗೆ ಯಾವುದೇ ಕ್ಷಣದಲ್ಲಿ ರಾಷ್ಟ್ರೀಯ ಮಾನ್ಯತೆ ದೊರೆಯಲಿದೆ. ಇದಾದ ನಂತರ ಅದರ ಖರ್ಚು–ವೆಚ್ಚಗಳಲ್ಲಿ ಕೇಂದ್ರ ಸರ್ಕಾರ ಶೇ.60ರಷ್ಟು ಪಾಲನ್ನು ನೀಡಲಿದೆ ಎಂದರು. ಈ ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿಗೆ ಮಾರ್ಚ್ ಅಂತ್ಯದೊಳಗಾಗಿ 10 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲು ತೀರ್ಮಾನಿಸಲಾಗಿದ್ದು, 1964 ರಿಂದ ಇದುವರೆಗೆ ಕೃಷ್ಣಾ ನದಿ ಪಾತ್ರದ ಯೋಜನೆಗಳಿಗೆ ಈ ಪ್ರಮಾಣದ ಹಣವನ್ನು ನೀಡಿರಲಿಲ್ಲ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿಗೆ 76 ಸಾವಿರ ಎಕರೆ ಭೂಮಿ ಬೇಕಿದ್ದು, ಈ ಪೈಕಿ 26 ಸಾವಿರ ಎಕರೆಯಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.ಉಳಿದ 51 ಸಾವಿರ ಎಕರೆ ಭೂಮಿಯ ಸ್ವಾಧೀನಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ಇನ್ನು ಯೋಜನೆಯ ವ್ಯಾಪ್ತಿಯಲ್ಲಿ 3700 ಮನೆಗಳಿದ್ದು, ಭೂ ಸ್ವಾಧೀನ ಮತ್ತು ಮನೆಗಳಿಗೆ ಪರಿಹಾರ ನೀಡುವ ಸಲುವಾಗಿ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ ಎಂದು ಅವರು ವಿವರಿಸಿದರು.

ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ದುರಸ್ತಿ ಕಾಮಗಾರಿಗೆ ಶಾಸಕ ನಾಗೇಂದ್ರ ಚಾಲನೆ

ಪಾರಂಪರಿಕ ಕಟ್ಟಡಗಳ ಬಗ್ಗೆ ಅಲ್ಲಿರುವವರೇ ನಿಗಾ ವಹಿಸುವುದು ಒಳ್ಳೆಯದು: ಶಾಸಕರ ಸಲಹೆ





ಮೈಸೂರು, ಅ.28(ಎಂಟಿವೈ)– ಶಿಥಿಲ ಗೊಂಡಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ದುರಸ್ತಿ ಕಾಮಗಾರಿಗೆ ಶಾಸಕ ಎಲ್. ನಾಗೇಂದ್ರ ಇಂದು ಚಾಲನೆ ನೀಡಿದರು.

ಸತತ ಮಳೆಯ ನಡುವೆ ಶತಮಾನಕ್ಕೂ ಹಳೆಯದಾದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ಪ್ರಯೋಗಾಲಯವಿದ್ದ ಕಟ್ಟಡದ ಒಂದು ಭಾಗ ಅ.21ರಂದು ಬೆಳಗ್ಗೆ ಕುಸಿದಿತ್ತು. ಈ ಹಿನ್ನೆಲೆಯಲ್ಲಿ ಕುಸಿದ ಕಟ್ಟಡದ ಭಾಗ ಹೊರತುಪಡಿಸಿ, ಉಳಿದ ಭಾಗವನ್ನು ದುರಸ್ತಿ ಮಾಡಲು ಗುದ್ದಲಿ ಪೂಜೆ ನೆರವೇರಿಸಲಾಯಿತು. ಕಾಲೇಜಿನ ಕಟ್ಟಡದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರಿಂದಲೇ ಗುದ್ದಲಿ ಪೂಜೆ ನೆರವೇರಿಸಲಾಯಿತು. ಬಳಿಕ ಆದಷ್ಟು ಬೇಗ ಕಟ್ಟಡದ ದುರಸ್ತಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಇದೇ ವೇಳೆ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದು, ದುರಸ್ತಿಗೆ ಕ್ರಮ ಕೈಗೊಳ್ಳಲಾಗಿತ್ತು. ಅದಕ್ಕಾಗಿ 2 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. 107 ವರ್ಷದ ಹಳೆಯ ಕಟ್ಟಡ ಕುಸಿದಿರುವುದು ಬೇಸರ ತಂದಿದೆ. ಆದರೆ, ಘಟನೆಯಿಂದ ಯಾರಿಗೂ ಹಾನಿಯಾಗದಿರುವುದು ಸಮಾಧಾನ ಎಂದರು.

ಮಹಾರಾಣಿ ಕಾಲೇಜಿನ ಕಟ್ಟಡ, ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಅಗ್ನಿಶಾಮಕ ಠಾಣೆಯ ಕಟ್ಟಡ ಕುಸಿತಕ್ಕೆ ನಿರ್ವಹಣೆ ಮಾಡದಿರುವುದೇ ಕಾರಣ. ಪಾರಂಪರಿಕ ಕಟ್ಟಡಗಳ ಸುಲಭವಾಗಿ ರಿಪೇರಿ ಕೆಲಸ ಮಾಡಲು ಅವಕಾಶವಿಲ್ಲ. ದುರಸ್ತಿಗೆ ಅನುಸರಿಸಬೇಕಾದ ಕ್ರಮ ಕಠಿಣವಾಗಿದೆ. ಮಾಮೂಲಿನಂತೆ ದುರಸ್ತಿ ಮಾಡುವುದಕ್ಕೆ ಬಿಡುವುದೇ ಇಲ್ಲ. ಪಾರಂಪರಿಕ ಇಲಾಖೆಯೂ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಹಾಗಾಗಿ ಮೈಸೂರಲ್ಲಿ ಪಾರಂಪರಿಕ ಕಟ್ಟಡಗಳು ಕುಸಿಯುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಇನ್ನಾದರೂ ಪಾರಂಪರಿಕ ಕಟ್ಟಡಗಳ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ಪತ್ರ ಬರೆಯುತ್ತೇವೆ. ಮುಂದಿನ ವಾರದಲ್ಲಿ ಪಾರಂಪರಿಕ ಕಟ್ಟಡಗಳ ರಕ್ಷಣೆಗಾಗಿ ಅಧಿಕಾರಿಗಳ ಸಭೆ ನಡೆಸುತ್ತೇವೆ. ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡದ ದುರಸ್ತಿಗೆ ಅಗತ್ಯ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಲಾಗಿದ್ದು, ಮುಖ್ಯಮಂತ್ರಿಗಳು ಪೂರಕವಾಗಿ ಸ್ಪಂದಿಸಿದ್ದಾರೆ. ಕುಸಿದಿರುವ ಕಟ್ಟಡವನ್ನು ಹೇಗೆ ಪುನರ್ ನಿರ್ಮಾಣ ಮಾಡಬೇಕು ಎನ್ನುವುದನ್ನು ತಜ್ಞರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ. ಅಲ್ಲದೇ, ಕಾಲೇಜಿನ ಕಟ್ಟಡದ ದುರಸ್ತಿಗೆ ಯಾವ ಸಾಮಗ್ರಿ ಬಳಸಬೇಕು. ಕಟ್ಟಡದ ಮೂಲ ಸ್ವರೂಪದಂತೆ ಸುಣ್ಣದ ಗಾರೆ ಬಳಸಬೇಕೋ ಎನ್ನುವುದನ್ನು ತಜ್ಞರ ಅಭಿಪ್ರಾಯ ಪಡೆದು ನಿರ್ಧರಿಸುವುದಾಗಿ ತಿಳಿಸಿದರು.

ವಿಜ್ಞಾನ ಕಾಲೇಜಿನ ವಿಸ್ತೃತ ನೂತನ ಕಟ್ಟಡ ಈಗಾಗಲೇ ನಿರ್ಮಾಣವಾಗಿದ್ದು, ಅದು ಇನ್ನು ಉದ್ಘಾಟನೆಗೊಂಡಿಲ್ಲ. ಆದರೂ, ಕುಸಿದ ಕಟ್ಟಡದಲ್ಲಿದ್ದ ತರಗತಿ ಹಾಗೂ ಪ್ರಯೋಗಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿ, ಕಾರ್ಯಾರಂಭ ಮಾಡುವಂತೆ ಸೂಚನೆ ನೀಡಲಾಗಿದೆ ಎಂದರು.

ಮೈಸೂರಲ್ಲಿರುವ ಪಾರಂಪರಿಕ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಗಳ ಮುಖ್ಯಸ್ಥರು, ಕಚೇರಿ ಮುಖ್ಯಸ್ಥರು, ಶಾಲಾ–ಕಾಲೇಜುಗಳ ಮುಖ್ಯಸ್ಥರು ಕಟ್ಟಡದ ನಿರ್ವಹಣೆಯ ಜವಾಬ್ದಾರಿ ಹೊರುವಂತೆ ಸೂಚಿಸಲಾಗುವುದು. ಕಟ್ಟಡಗಳ ಮೇಲ್ಭಾಗ ಮಳೆ ನೀರು ಸಂಗ್ರಹವಾಗಿ ಕಟ್ಟಡ ದುರ್ಬಲಗೊಳ್ಳುತ್ತವೆ. ಹಾಗಾಗಿ ತಿಂಗಳಿಗೊಮ್ಮೆ ಕಟ್ಟಡದ ಮೇಲ್ಭಾಗಕ್ಕೆ ಹೋಗಿ ಮಳೆ ನೀರು ಸರಾಗವಾಗಿ ಹರಿದು ಹೋಗುತ್ತಿದೆಯೇ ಎಂದು ಪರಿಶೀಲಿಸಬೇಕು. ಮಳೆ ನೀರಿನ ಪೈಪ್ ಎಲೆ ಹಾಗೂ ತ್ಯಾಜ್ಯಗಳಿಂದ ಕಟ್ಟಿಕೊಂಡಿದೆಯೇ ಎಂದು ಪರಿಶೀಲಿಸಬೇಕು. ಕಟ್ಟಡಗಳ ಮೇಲೆ ಬೆಳೆದಿರುವ ಗಿಡಗಳನ್ನು ಕಾಲ ಕಾಲಕ್ಕೆ ತೆರವುಗೊಳಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಶಿವಕುಮಾರ್, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಪ್ರೊ.ಗಿರಿಧರ್ ರಾವ್, ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ, ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲ ಪ್ರೊ.ಶ್ರೀನಿವಾಸ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

> ಮಹಾರಾಣಿ ವಿಜ್ಞಾನ ಮತ್ತು ಕಲಾ ಕಾಲೇಜಿನ ಕಟ್ಟಡದ ಮೇಲ್ಭಾಗಕ್ಕೆ ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಪ್ರಾಂಶುಪಾಲರ ನೇತೃತ್ವದಲ್ಲಿ ವಿದ್ಯಾರ್ಥಿನಿಯರನ್ನು ಕರೆದುಕೊಂಡು ಹೋಗಿ ಮಳೆ ನೀರಿನ ಪೈಪ್ ಕಟ್ಟಿಕೊಂಡಿರುವ ಬಗ್ಗೆ ಪರಿಶೀಲಿಸಬೇಕು. ಅಲ್ಲದೆ, ಕಟ್ಟಡದ ಮೇಲ್ಭಾಗ ಮರಗಳ ಒಣಗಿದ ಎಲೆಗಳು ಸಂಗ್ರಹವಾಗಿದ್ದರೆ ಮಳೆ ನೀರು ಹರಿದು ಹೋಗಲು ಸಾಧ್ಯವಾಗುವುದಿಲ್ಲ. ಕಾಲೇಜಿನ ಕಟ್ಟಡ ನಮ್ಮ ಕಟ್ಟಡವೆಂದು ಭಾವಿಸಿ, ವಿದ್ಯಾರ್ಥಿನಿಯರೇ ಕಟ್ಟಡ ಸ್ವಚ್ಛಗೊಳಿಸಿಕೊಳ್ಳುತ್ತಾರೆ. ಅದಕ್ಕೆ ಕಾಲೇಜಿನ ಮುಖ್ಯಸ್ಥರು ಮಾರ್ಗದರ್ಶನ ನೀಡಬೇಕು.
> -ಎಲ್.ನಾಗೇಂದ್ರ, ಶಾಸಕ

ದಕ್ಷಿಣ ಕನ್ನಡ, ಕರಾವಳಿ ಸಂಘಗಳ ಒಕ್ಕೂಟ ನಾಳೆ ಉದ್ಘಾಟನೆ




ಮೈಸೂರು, ಅ.28(ಆರ್‌ಕೆಬಿ)– ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ದಕ್ಷಿಣ ಕನ್ನಡ ಮತ್ತು ಕರಾವಳಿ ಸಂಘಗಳ ಒಕ್ಕೂಟದ ಉದ್ಘಾಟನಾ ಸಮಾರಂಭ ಮತ್ತು ಬಲೆ ತೆಲಿಪಾಲೆ ಎಂಬ 10 ನೇ ಸುತ್ತಿನ ಮೊದಲ ಸ್ಪರ್ಧಾ ಕಾರ್ಯಕ್ರಮ ಅ.30 ರಂದು ಕಲಾಮಂದಿರದಲ್ಲಿ ನಡೆಯಲಿದೆ ಎಂದು ಒಕ್ಕೂಟದ ಅಧ್ಯಕ್ಷ ಗ್ರೇಶಿಯಸ್ ರೋಡ್ರಿಗಸ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಕ್ಷಿಣ ಕನ್ನಡ ಜಿಲ್ಲಾ ಸಂಘವು 27 ವರ್ಷಗಳಿಂದ ಮೈಸೂರಿನಲ್ಲಿ ಸಕ್ರಿಯವಾಗಿ ಸುಧಾಕರ್ ಶೆಟ್ಟಿ ನೇತೃತ್ವದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿದೆ. ಮೊದಲಿಗೆ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯ ಜನರು ಮೈಸೂರಿನಲ್ಲಿ ನೆಲೆಸಿದ್ದು, ಬೇರೆ ಬೇರೆ ಜಾತಿ ಸಂಘಟನೆಗಳೊಂದಿಗೆ ಗುರುತಿಸಿಕೊಂಡಿದ್ದರೂ ದಕ್ಷಿಣ ಕನ್ನಡ ಜಿಲ್ಲಾ ಸಂಘದ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಆದರೆ ಈಗ ಮೈಸೂರಿನಲ್ಲಿ ನೆಲೆಸಿರುವ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಎಲ್ಲ ಸಂಘ ಸಂಸ್ಥೆಗಳನ್ನು ಒಗ್ಗೂಡಿಸಿ, ಈ ಒಕ್ಕೂಟ ರಚಿಸಲಾಗಿದೆ ಎಂದು ವಿವರಿಸಿದರು.

ಅ.30ರ ಬೆಳಗ್ಗೆ ನಡೆಯುವ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್ ಹಾಗೂ ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ಒಕ್ಕೂಟ ಉದ್ಘಾಟಿಸುವರು. ಸುರೇಶ್ ಶೆಟ್ಟಿ ಗುರ್ಮೆ, ಡಾ.ಶಿವಶರಣಶೆಟ್ಟಿ, ಒಕ್ಕೂಟದ ಗೌರವಾಧ್ಯಕ್ಷ ಎಸ್.ಸುಧಾಕರ ಶೆಟ್ಟಿ, ಅಧ್ಯಕ್ಷ ಗ್ರೇಶಿಯಸ್ ರೋಡ್ರಿಗಸ್ ಭಾಗವಹಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ಶಿವಶರಣಶೆಟ್ಟಿ, ನಾರಾಯಣ ಹೆಗ್ಡೆ, ಎಂ.ಕೆ.ಪುರಾಣಿಕ್ ರವೀಂದ್ರ ಎಂ.ರತ್ನರಾಜು ಉಪಸ್ಥಿತರಿದ್ದರು.

ವಿವಿ, ಪದವಿ ಕಾಲೇಜುಗಳ ನಿವೃತ್ತ ಪ್ರಾಧ್ಯಾಪಕರಿಗೆ ಪಿಂಚಣಿ



ಮೈಸೂರು, ಅ.28(ಆರ್‌ಕೆಬಿ)– ರಾಜ್ಯದ ವಿವಿ ಹಾಗೂ ಕಾಲೇಜುಗಳ ನಿವೃತ್ತ ಪ್ರಾಧ್ಯಾಪಕರಿಗೆ ಪಿಂಚಣಿ ವೇಳೆ ನಿವೃತ್ತಿಯ ಕೊನೆ ತಿಂಗಳ ಮೂಲ ವೇತನದ ಶೇ.50 ರಷ್ಟು ಹಾಗೂ ಏಳನೇ ವೇತನ ಆಯೋಗದ ವ್ಯಾಪ್ತಿಗೆ ಪಿಂಚಣಿ ಸೇರಿಸಬೇಕೆಂದು ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಕೆ.ಪಿ.ಶ್ರೀನಾಥ್ ಮನವಿ ಮಾಡಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾವೆಲ್ಲರೂ ಇತ್ತ ರಾಜ್ಯ ಸರ್ಕಾರದ ನೌಕರ ಅಥವಾ ಕೇಂದ್ರ ಸರ್ಕಾರದ ನೌಕರರಲ್ಲ ಎಂಬಂತ ಪರಿಸ್ಥಿತಿ ಎದುರಿಸಿದ್ದೇವೆ. ಹೀಗಾಗಿ ವೇತನ ಪರಿಷ್ಕರಣೆ ಸಮರ್ಪಕವಾಗಿಲ್ಲ. ಇದರಿಂದಾಗಿ ಪಿಂಚಣಿಯೂ ಸಮರ್ಪಕವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

1996 ರ ಯುಜಿಸಿ ವೇತನ ಶ್ರೇಣಿ ವಿಸ್ತರಣೆ ಸಂದರ್ಭದಲ್ಲಿಯೂ ಇಬ್ಬಗೆ ನೀತಿ ಅನುಸರಿಸಲಾಗಿದೆ. ಅಂತಿಮವಾಗಿ ಉಚ್ಚ ನ್ಯಾಯಾಲಯದ ತೀರ್ಪಿನಂತೆ ಪರಿಷ್ಕರಿಸಿ ಆದೇಶ ನೀಡಿದ್ದು, ಇದನ್ನು ಸರ್ಕಾರ ಮರೆತಂತಿದೆ. ಆದ್ದರಿಂದ ಈಗಾಗಲೇ ಹೊರಡಿಸಿರುವ ಆದೇಶಕ್ಕೆ ಸೂಕ್ತ ಮಾರ್ಪಾಡು ಮಾಡಿ, ಕೊನೆ ತಿಂಗಳ ಮೂಲ ವೇತನದ ಶೇ.50 ರಷ್ಟನ್ನು ನಿಗದಿಪಡಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ರಂಗಸ್ವಾಮಿ, ಪ್ರೊ.ರಾಮಚಂದ್ರಸ್ವಾಮಿ, ಪ್ರೊ.ಎಚ್.ಕೆ.ಮರಿಸ್ವಾಮಿ ಉಪಸ್ಥಿತರಿದ್ದರು.

ನ.2ರಿಂದ ಎನ್‌ಐಇ ಸಂಸ್ಥೆಯಿಂದ

ಎರಡು ದಿನಗಳ ಸ್ವಚ್ಛ ಇಂಧನ ಸಮಾವೇಶ



ಮೈಸೂರು, ಅ.28(ಆರ್‌ಕೆಬಿ)– ಎನ್‌ಐಇ ಸಂಸ್ಥೆಯು ಜರ್ಮನಿಯ ಟೆಕ್ ಫಾರ್ ಫ್ಯೂಯೆಲ್ ಹಾಗೂ ಒಡಬ್ಲ್ಯುಐ ಸೈನ್ಸ್ ಫಾರ್ ಫ್ಯೂಯೆಲ್ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ನ.2 ಮತ್ತು 3ರಂದು ಮೈಸೂರಿನ ಸೈಲೆಂಟ್ ಶೋರ್ಸ್ ಸೆನೆಟ್ ಸಭಾಂಗಣದಲ್ಲಿ ಸ್ವಚ್ಛ (ಜೈವಿಕ) ಇಂಧನ ಸಮಾವೇಶ ಆಯೋಜಿಸಿದೆ.

ಎನ್‌ಐಇ ಕ್ರೆಸ್ಟ್ ಮುಖ್ಯಸ್ಥ ಪ್ರೊ.ಶ್ಯಾಮ ಸುಂದರ್ ಗುರುವಾರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಸಮಾವೇಶ ರಾಷ್ಟ್ರೀಯ ಜೈವಿಕ ಇಂಧನ ನೀತಿ ಅನ್ವಯ 8 ವರ್ಷಗಳಲ್ಲಿ ಆಗಿರುವ ಬೆಳವಣಿಗೆ ಹಾಗೂ ಅಭಿವೃದ್ಧಿ ಪಥದ ಬಗ್ಗೆ ಚಿಂತನ ಮಂಥನ ನಡೆಸಲಿದೆ. ಇತ್ತೀಚಿನ ವರ್ಷಗಳಲ್ಲಿ ಆಗಿರುವ ತಂತ್ರಜ್ಞಾನ ಅಭಿವೃದ್ಧಿ, ನೂತನ ಆಲೋಚನೆಗಳು, ನೀತಿಗಳ ಬಗ್ಗೆ ಬೆಳಕು ಚೆಲ್ಲಲಿದೆ. ರಾಷ್ಟ್ರೀಯ ಗುರಿ, ಆದ್ಯತೆ ಹಾಗೂ ಅವಕಾಶಗಳ ಬಗ್ಗೆ ಉದ್ಯಮಿಗಳು ಹಾಗೂ ಬಂಡವಾಳ ಹೂಡಿಕೆದಾರರಿಗೆ ಮಾಹಿತಿ ನೀಡುವ ವೇದಿಕೆಯಾಗಲಿದೆ ಎಂದು ತಿಳಿಸಿದರು.

ಇದು ತಂತ್ರಜ್ಞಾನ ಪರಿಣಿತರು, ಸಂಶೋಧಕರು, ಶೈಕ್ಷಣಿಕ ತಜ್ಞರು, ಸಾಹಸಿ ಬಂಡವಾಳ ಹೂಡಿಕೆದಾರರು, ನೀತಿ ರೂಪಿಸುವವರು, ಸರ್ಕಾರೇತರ ಸಂಸ್ಥೆಗಳು ಮೊದಲಾದವುಗಳ ನಡುವೆ ಸಂಪರ್ಕ ಸೇತುವೆಯಾಗಲಿದೆ. ಈ ವೇಳೆ ವಿಜ್ಞಾನಿಗಳಿಗೆ ಪೋಸ್ಟರ್ ವಿನ್ಯಾಸ ಸ್ಪರ್ಧೆಯೂ ಇರಲಿದೆ ಎಂದರು.

ನ.2ರಂದು ಎನ್‌ಐಇ ಆಡಳಿತ ಮಂಡಳಿ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್ ಸಮಾವೇಶಕ್ಕೆ ಚಾಲನೆ ನೀಡಲಿದ್ದಾರೆ. ಸದಸ್ಯ ಎನ್.ಸತ್ಯಕುಮಾರ್, ಪ್ರಾಚಾರ್ಯ ಪ್ರೊ.ರೋಹಿಣಿ ನಾಗಪದ್ಮ ಭಾಗವಹಿಸುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವಿಶ್ರಾಂತ ಪ್ರಾಚಾರ್ಯ ಡಾ.ಎನ್.ವಿ.ರಾಘವೇಂದ್ರ ಸಾರ್ವಜನಿಕ ಸಂಪರ್ಕ ಅಧಿಕಾರಿ ಎಸ್.ಆರ್.ಗಾಯಕ್ವಾಡ್, ಅನಿಲ್ ಕುಮಾರ್ ನಾಡಿಗೇರ್ ಉಪಸ್ಥಿತರಿದ್ದರು.

ನಾಳೆ ಮಾಜಿ ಸೈನಿಕರ ಸಂಘದಿಂದ ರಕ್ತದಾನ ಶಿಬಿರ



ಮೈಸೂರು, ಅ.28(ಆರ್‌ಕೆಬಿ)– ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ ಹಾಗೂ ರೋಟರಿ ಹೆರಿಟೇಜ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಅ.30 ರಂದು ಬೆಳಗ್ಗೆ 8 ಗಂಟೆಗೆ ಸರಸ್ವತಿಪುರಂ ರೋಟರಿ ಪಶ್ಚಿಮ ಸಭಾಂಗಣದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಜಿಲ್ಲಾ ಘಟಕದ ಅಧ್ಯಕ್ಷರಾದ ಕೆ.ಪಿ. ದಿವಾಕರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಾರ್ವಜನಿಕರಲ್ಲಿ ರಕ್ತದಾನ ಕುರಿತು ಅರಿವು ಮೂಡಿಸಲು ಹಾಗೂ ರಕ್ತದ ಕೊರತೆ ಹೋಗಲಾಡಿಸುವ ನಿಟ್ಟಿನಲ್ಲಿ ಈ ಶಿಬಿರ ಆಯೋಜಿಸಲಾಗಿದೆ. ಇದರಲ್ಲಿ ಸಾರ್ವಜನಿಕರು, ಮಾಜಿ ಹಾಗೂ ಹಾಲಿ ಸೈನಿಕರು ಮತ್ತು ರೋಟರಿ ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದರು. ಮಾಜಿ ಸೈನಿಕರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ನಂಜುಂಡಸ್ವಾಮಿ, ಉಪಾಧ್ಯಕ್ಷ ನೀಲಕಂಠಕುಮಾರ್ ಶೆಟ್ಟಿ, ರೋಟರಿ ಹೆರಿಟೇಜ್ ಅಧ್ಯಕ್ಷ ಜಿ.ಎಂ.ಸುರೇಶ್, ರಮೇಶ್ ಉಪಸ್ಥಿತರಿದ್ದರು.

ಸ್ತನ ಕ್ಯಾನ್ಸರ್ ಬಗ್ಗೆ ಅರಿವಿಗಾಗಿ ನಾಳೆ ಸೀರೆಯುಟ್ಟು ನಡಿಗೆ




ಮೈಸೂರು, ಅ.28(ಆರ್‌ಕೆಬಿ)– ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ವೀಸಖಿ ಮತ್ತು ರೋಟರಿ ಮೈಸೂರು ಪೂರ್ವ ಆಶ್ರಯದಲ್ಲಿ ಅ.30ರಂದು ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಸೀರೆಯುಟ್ಟು ನಡಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವೀಸಖಿ ಸಂಸ್ಥಾಪಕಿ ರಾಜಲಕ್ಷ್ಮಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 7 ಗಂಟೆಗೆ ಈ ವಾಕಥಾನ್ ನಡೆಯಲಿದೆ. ಸೀರೆಯುಟ್ಟ ಮಹಿಳೆಯರು ಅರಮನೆ ಸುತ್ತಲೂ ಒಂದು ಸುತ್ತು ನಡಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮಕ್ಕೆ ರಾಜವಂಶಸ್ಥರಾದ ಡಾ.ಪ್ರಮೋದಾದೇವಿ ಒಡೆಯರ್ ಚಾಲನೆ ನೀಡುವರು. ರೋಟರಿ ಅಧ್ಯಕ್ಷೆ ಎಲಿಜಬೆತ್ ಶಕುಂತಲಾ, ವೀಸಖಿ ಅಧ್ಯಕ್ಷೆ ಭಾನು ಆನಂದ್ ಭಾಗವಹಿಸುವರು ಎಂದರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮಧ್ಯಾಹ್ನ 1 ಗಂಟೆಯವರೆಗೆ ಸ್ತನ ಕ್ಯಾನ್ಸರ್ ತಪಾಸಣೆ, ಇದೇ ವೇಳೆ ಕ್ಯಾನ್ಸರ್ ಪೀಡಿತರಿಗೆ ವಿಗ್ ತಯಾರಿಸಲು ಅರಮನೆ ಉತ್ತರ ದ್ವಾರದ ಬಳಿ ಕೇಶದಾನ ಶಿಬಿರ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಲಿಜಬೆತ್ ಶಕುಂತಲಾ, ಭಾನು ಆನಂದ್ ಉಪಸ್ಥಿತರಿದ್ದರು.

ಸರ್ದಾರ್ ವಲ್ಲಭಬಾಯ್ ಪಟೇಲ್ ಏಕತಾ ಸಪ್ತಾಹ

ಮೈಸೂರು ವಿಭಾಗದ ಎಲ್ಲಾ ರೈಲ್ವೆ ನಿಲ್ದಾಣಗಳಲ್ಲಿ ಪಟೇಲ್ ಜೀವನ, ಸಾಧನೆ ಪ್ರದರ್ಶನ



ಮೈಸೂರು, ಅ.28(ಆರ್‌ಕೆಬಿ)– ಸರ್ದಾರ್ ವಲ್ಲಭಭಾಯ್ ಪಟೇಲ್ ಏಕತಾ ಸಪ್ತಾಹ ದಿನಾಚರಣೆ ಅಂಗವಾಗಿ ಅವರ ಜೀವನ ಮತ್ತು ಕೊಡುಗೆಗಳನ್ನು ಸ್ಮರಿಸಲು, ನೈಋತ್ಯ ರೈಲ್ವೆಯ ಮೈಸೂರು ವಿಭಾಗವು ಶುಕ್ರವಾರದಿಂದ (ಅ.28) 31ರವರೆಗೆ ವಿಭಾಗದ ಮೈಸೂರು, ಚಾಮರಾಜನಗರ, ಹಾಸನ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಮತ್ತು ಹಾವೇರಿ ರೈಲು ನಿಲ್ದಾಣಗಳ ಆವರಣದಲ್ಲಿ ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ ಜೀವನ ಮತ್ತು ಸಾಧನೆ ಪ್ರದರ್ಶನವನ್ನು ಆಯೋಜಿಸಿದೆ.

ಸರ್ದಾರ್ ವಲ್ಲಭಬಾಯ್ ಪಟೇಲ್ ಅವರು ಭಾರತೀಯ ರಾಜಪ್ರಭುತ್ವದ ರಾಜ್ಯಗಳ ಏಕೀಕರಣ ನಡೆಸಿ ನಾವು ಈಗ ನೋಡುತ್ತಿರುವ ಸಮಗ್ರ ಭಾರತೀಯ ಒಕ್ಕೂಟ ವ್ಯವಸ್ಥೆಯ ರೂಪಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿ, ಹೆಸರಾಗಿದ್ದಾರೆ. ಅವರ ಜೀವನ ಮತ್ತು ಕೊಡುಗೆಯನ್ನು ಪ್ರದರ್ಶಿಸುವ ಮತ್ತು ಬಿಂಬಿಸುವ ಈ ಪ್ರದರ್ಶನವು ಭಾರತದ ಏಕತೆ ಮತ್ತು ಸಮಗ್ರತೆಯ ಶಕ್ತಿಯನ್ನು ಪ್ರತಿಬಿಂಬಿಸುವ ಉದ್ದೇಶವನ್ನು ಹೊಂದಿದೆ. 2022ನೇ ಸಾಲಿನ ಭಾರತದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಪಂಚ ಪ್ರಾಣ' ಎಂದು ಉಲ್ಲೇಖಿಸಿದ್ದಾರೆ ಎಂದು ರೈಲ್ವೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರಿ ವೈದ್ಯರ ಖಾಸಗಿ ಪ್ರಾಕ್ಟೀಸ್‌ಗೆ ಕಡಿವಾಣ

ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ವಾರ್ನಿಂಗ್

ಮೈಸೂರು, ಅ.28(ಆರ್‌ಕೆ)–ಸರ್ಕಾರಿ ವೈದ್ಯರು ಕೆಲಸದ ಅವಧಿಯಲ್ಲಿ ಖಾಸಗಿಯಾಗಿ ಪ್ರಾಕ್ಟೀಸ್ ಮಾಡುವುದಕ್ಕೆ ಕಡಿವಾಣ ಹಾಕಲಾಗುವುದು ಎಂದು ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಮೈಸೂರು ವಿಭಾಗದಲ್ಲಿರುವ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳಲ್ಲಿ ವೈದ್ಯರು ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗುತ್ತಿಲ್ಲ. ಕೆಲಸದ ವೇಳೆ ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿರುವುದರಿಂದ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ತೊಂದರೆಯಾಗುತ್ತಿದೆ ಎಂಬ ದೂರುಗಳು ವ್ಯಾಪಕವಾಗಿ ಕೇಳಿಬರುತ್ತಿವೆ ಎಂದರು.

ಖಾಸಗಿ ಪ್ರಾಕ್ಟೀಸ್‌ಗೆ ಕಡಿವಾಣ ಹಾಕಲು ಬಯೋ ಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯ ಮಾಡಿ ಜಿಪಿಎಸ್ ತಂತ್ರಜ್ಞಾನ ಅಳವಡಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ಕೆಲಸದ ವೇಳೆ ನಿಯೋಜಿತ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಅವರು ನುಡಿದರು. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕ್ರಿಟಿಕಲ್ ಕೇರ್ ಮತ್ತು ಡಯಾಲಿಸಿಸ್ ಟೆಕ್ನೀಷಿಯನ್ ಕೋರ್ಸ್‌ಗಳನ್ನು ಆರಂಭಿಸುವುದು, ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ (STP) ಹಾಗೂ ಎಫ್ಲ್ಯೂಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ (ETP)ಗಳನ್ನು ಅಳವಡಿಸುವುದು, ಸಂಶೋಧನೆ ಮತ್ತು ಅಂತರರಾಷ್ಟ್ರೀಯ ಜರ್ನಲ್‌ಗಳಿಗೆ ಒತ್ತು ನೀಡಿ ನಮ್ಮ ರಾಜ್ಯದ ಮೆಡಿಕಲ್ ಕಾಲೇಜುಗಳು ವಿಶ್ವಮಟ್ಟದಲ್ಲಿ ಗುರ್ತಿಸಿಕೊಳ್ಳುವಂತೆ ಮಾಡಲು ಆದ್ಯತೆ ನೀಡಲಾಗುವುದು ಎಂದು ಸಚಿವರು ತಿಳಿಸಿದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ಸುದ್ದಿಗೋಷ್ಠಿ ನಡೆಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿರ್ದೇಶಕಿ ಡಾ. ಇಂದುಮತಿ ಹಾಗೂ ವಿಭಾಗೀಯ ಜಂಟಿ ನಿರ್ದೇಶಕಿ ಡಾ. ರಾಜೇಶ್ವರಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಕೆ.ಆರ್.ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ತೆರೆದು ಅಗತ್ಯ ಮೂಲ ಸೌಲಭ್ಯಗಳೊಂದಿಗೆ ರೋಗಿಗಳಿಗೆ ಸೇವೆ ಒದಗಿಸಬೇಕು. ಟೆಲಿ–ಮೆಡಿಸಿನ್ ಸಮಾಲೋಚನೆ ಸಂಪರ್ಕವನ್ನು ಸದೃಢಗೊಳಿಸಬೇಕು. ಕಾಲೇಜಿನ ಎಲ್ಲಾ ವಿಭಾಗಗಳ ಮುಖ್ಯಸ್ಥರೊಂದಿಗೆ ಪ್ರತೀ ಶುಕ್ರವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿ ಸಮಸ್ಯೆಗಳಿದ್ದರೆ ಪರಿಹರಿಸಿಕೊಂಡು ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡುವಂತೆ ಡೀನ್‌ಗಳಿಗೆ ನಿರ್ದೇಶನ ನೀಡಿದ್ದೇನೆ ಎಂದು ಡಾ. ಸುಧಾಕರ್ ಅವರು ಇದೇ ಸಂದರ್ಭ ತಿಳಿಸಿದರು.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಿಂದ ನೀಡುತ್ತಿರುವ ಮೆಡಿಕಲ್ ರೀ–ಇಂಬರ್ಸ್‌ಮೆಂಟ್ ಅನ್ನು ಸಮರ್ಪಕವಾಗಿ ಬಳಸಿಕೊಂಡು ವೈದ್ಯಕೀಯ ಕಾಲೇಜುಗಳ ಸಂಪನ್ಮೂಲವನ್ನು ಹೆಚ್ಚಿಸಿ ಮೂಲ ಸೌಕರ್ಯ ಅಭಿವೃದ್ಧಿಗೆ ಬಳಸಿಕೊಳ್ಳುವಂತೆ ಸೂಚಿಸಲಾಗಿದೆ. 2025ರೊಳಗೆ ಕರ್ನಾಟಕವನ್ನು ಕ್ಷಯಮುಕ್ತ ರಾಜ್ಯ ಮಾಡಲು ಸರ್ಕಾರ ಮುಂದಾಗಿದೆ ಎಂದು ಅವರು ತಿಳಿಸಿದರು. ರಾಜ್ಯದಲ್ಲಿ ನವೆಂಬರ್ 8ರೊಳಗಾಗಿ 'ನಮ್ಮ ಕ್ಲಿನಿಕ್'ಗಳು ಆರಂಭವಾಗಲಿದ್ದು, 128 ಮಹಿಳಾ ಸ್ವಾಸ್ಥ್ಯ ಕೇಂದ್ರಗಳನ್ನು ರಾಜ್ಯದ ವಿವಿಧೆಡೆ ಸ್ಥಾಪಿಸಲಾಗುವುದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳಲ್ಲಿ ಸೇವೆಯನ್ನು ಸದೃಢಗೊಳಿಸಲು ಅಗತ್ಯ ಎಲ್ಲಾ ಕ್ರಮಗಳನ್ನು ವಹಿಸಲಾಗಿದೆ ಎಂದು ಸಚಿವರು ನುಡಿದರು.

ಗಂಧದ ಗುಡಿ ನೋಡಿ ನನಗೆ ಗರ್ವ ಎನಿಸಿತು



ಬೆಂಗಳೂರು, ಅ.28– ಡಾ. ಸುಧಾ ಮೂರ್ತಿ ಅವರಿಗೆ 'ಗಂಧದ ಗುಡಿ' ಹೆಚ್ಚು ಆಪ್ತ ಎನಿಸಿದೆ. ಕನ್ನಡದಲ್ಲಿ ಇಂಥ ಚಿತ್ರವನ್ನು ನೋಡಿ ಗರ್ವ ಎನಿಸಿತು ಎಂದು ಅವರು ಹೇಳಿದ್ದಾರೆ. ಹಲವು ಕಡೆಗಳಲ್ಲಿ ಗುರುವಾರವೇ (ಅ.27) 'ಗಂಧದ ಗುಡಿ' ಪ್ರೀಮಿಯರ್ ಶೋ ಏರ್ಪಡಿಸಲಾಗಿತ್ತು. ಬೆಂಗಳೂರಿನಲ್ಲಿ ಸುಧಾ ಮೂರ್ತಿ ಅವರು ಈ ಸಾಕ್ಷ್ಯ ಚಿತ್ರ ವೀಕ್ಷಿಸಿದ್ದಾರೆ. ಇದು ಅವರಿಗೆ ಬಹಳ ಖುಷಿಕೊಟ್ಟಿದೆ. ಪುನೀತ್ ರಾಜ್‌ಕುಮಾರ್ ಅವರ ಈ ಪ್ರಯತ್ನಕ್ಕೆ ಡಾ. ಸುಧಾ ಮೂರ್ತಿ ಫುಲ್ ಮಾರ್ಕ್ಸ್ ನೀಡಿದ್ದಾರೆ. ಯುವಜನತೆ ನೋಡಿ ತಿಳಿಯಬೇಕಾದ ಅನೇಕ ಅಂಶಗಳು ಇದರಲ್ಲಿ ಇವೆ ಎಂದು ಅವರು ಹೇಳಿದ್ದಾರೆ. ಉತ್ತರ ಕರ್ನಾಟಕದ ಬಗ್ಗೆ ತೋರಿಸಿರುವುದರಿಂದ ಸುಧಾ ಮೂರ್ತಿ ಅವರಿಗೆ 'ಗಂಧದ ಗುಡಿ' ಹೆಚ್ಚು ಆಪ್ತ ಎನಿಸಿದೆ. ಕನ್ನಡದಲ್ಲಿ ಇಂಥ ಚಿತ್ರವನ್ನು ನೋಡಿ ಗರ್ವ ಎನಿಸಿತು ಎಂದು ಅವರು ಹೇಳಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಶೀಘ್ರ ವೈದ್ಯರ ನೇಮಕ

ಕಿದ್ವಾಯಿ ಆಸ್ಪತ್ರೆ ಕಟ್ಟಡಕ್ಕೂ ಅನುದಾನ ಭರವಸೆ



ಮೈಸೂರು, ಅ.28(ಆರ್‌ಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಶೀಘ್ರ ವೈದ್ಯರು, ನರ್ಸ್‌ಗಳು ಹಾಗೂ 'ಡಿ' ಗ್ರೂಪ್ ನೌಕರರನ್ನು ನೇಮಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ತಿಳಿಸಿದ್ದಾರೆ.

ಕೆ.ಆರ್.ಆಸ್ಪತ್ರೆ ಒತ್ತಡ ಕಡಿಮೆ ಮಾಡಲೆಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಿಂದ ಸುಸಜ್ಜಿತವಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಲಾಗಿದ್ದು, ವೈದ್ಯಕೀಯ ಉಪಕರಣ ಅಳವಡಿಸಬೇಕಾಗಿದೆ. ವೈದ್ಯರು ಹಾಗೂ ಸಿಬ್ಬಂದಿಗಳ ನೇಮಕ ಪ್ರಕ್ರಿಯೆ ಪ್ರಗತಿಯಲ್ಲಿದೆ. ಶೀಘ್ರ ಆಸ್ಪತ್ರೆಯಲ್ಲಿ ಸೇವೆ ಆರಂಭಿಸಲು ಕ್ರಮ ವಹಿಸಲಾಗಿದೆ ಎಂದು ಅವರು ತಿಳಿಸಿದರು. ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಕಟ್ಟಡ ನಿರ್ಮಿಸಲು 50 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆದು ಅನುದಾನ ಮಂಜೂರು ಮಾಡಿಸಲಾಗುವುದು ಹಾಗೂ ಟ್ರಾಮಾ ಕೇರ್ ಸೆಂಟರ್ ಅನ್ನು ಪೂರ್ಣ ಪ್ರಮಾಣದಲ್ಲಿ ಮೂಲ ಸೌಕರ್ಯದೊಂದಿಗೆ ಆರಂಭಿಸುವುದಾಗಿಯೂ ಸಚಿವರು ತಿಳಿಸಿದರು. ಕೆ.ಆರ್.ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸಲಕರಣೆಯೊಂದಿಗೆ ಡಯಾಲಿಸಿಸ್ ಕೇಂದ್ರ ಸ್ಥಾಪಿಸಿ, ಅಗತ್ಯವಿರುವ ರೋಗಿ ಗಳಿಗೆ ಚಿಕಿತ್ಸೆ ನೀಡಲು ಕ್ರಮ ವಹಿಸಲಾ ಗಿದೆ ಎಂದು ಡಾ.ಸುಧಾಕರ್ ಇದೇ ಸಂದರ್ಭ ನುಡಿದರು. ಆರೋಗ್ಯ ಇಲಾಖೆ ನಿರ್ದೇಶಕಿ ಡಾ. ಇಂದುಮತಿ, ವಿಭಾ ಗೀಯ ಜಂಟಿ ನಿರ್ದೇಶಕಿ ಡಾ. ರಾಜೇಶ್ವರಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕಿ ಡಾ. ಕೆ.ಆರ್.ದಾಕ್ಷಾಯಿಣಿ ಹಾಗೂ ಇತರರು ಈ ವೇಳೆ ಉಪಸ್ಥಿತರಿದ್ದರು.

ನಾಳೆ ಗಂಧದ ಗುಡಿ ಚಿತ್ರಕಲಾ ಸ್ಪರ್ಧೆ



ಮೈಸೂರು, ಅ.28– ಪುನೀತ್ ರಾಜ್‌ಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಕರ್ನಾಟಕ ರತ್ನ ಅಪ್ಪು ಅಭಿಮಾನಿಗಳ ಬಳಗದ ವತಿಯಿಂದ ಮೈಸೂರು ದಸರಾ ವಸ್ತು ಪ್ರದರ್ಶನದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಅ.30ರಂದು 'ಗಂಧದ ಗುಡಿ ಚಿತ್ರಕಲಾ ಸ್ಪರ್ಧೆ' ನಡೆಯಲಿದೆ. ಪರಿಸರ, ಬೆಟ್ಟಗುಡ್ಡ, ನದಿ–ಕೆರೆ, ವನ್ಯಜೀವಿ, ಅಭಯಾರಣ್ಯ, ಜಲಪಾತ ಇನ್ನಿತರ ನಿಸರ್ಗಕ್ಕೆ ಸಂಬಂಧಿಸಿದ ಚಿತ್ರ ಬಿಡಿಸಬೇಕು. 8 ರಿಂದ 12, 13ರಿಂದ 18 ಹಾಗೂ 18 ವರ್ಷ ಮೇಲ್ಪಟ್ಟವರಿಗೆ ಪ್ರತ್ಯೇಕವಾಗಿ ಸ್ಪರ್ಧೆ ನಡೆಯಲಿದ್ದು, ಪ್ರತಿ ವಿಭಾಗದಲ್ಲೂ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಲಾಗುವುದು. ಪ್ರವೇಶ ಉಚಿತವಾಗಿದ್ದು, ಅಗತ್ಯ ಪರಿಕರಗಳನ್ನು ಸ್ಪರ್ಧಿಗಳೇ ತರಬೇಕು. ಆಸಕ್ತರು ಮೊ.ಸಂ.9880752727 ಅಥವಾ 7829067769 ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಬಾಲಕರ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆ

ಮೈಸೂರು, ಅ. 28– ನ. 11 ರಿಂದ 13 ರವರೆಗೆ ಕರ್ನಾಟಕ ರಾಜ್ಯ ಬಾಲಕರ ಕಬಡ್ಡಿ ಚಾಂಪಿಯನ್‌ಶಿಪ್ ನಡೆಯಲಿದ್ದು, ಈ ಸಂಬಂಧ ಮೈಸೂರು ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ವತಿಯಿಂದ ಮೈಸೂರು ಜಿಲ್ಲಾ ಬಾಲಕರ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆ ಅ.30ರಂದು ಬೆಳಗ್ಗೆ 9 ಗಂಟೆಗೆ ಮೈಸೂರು ವಿಶ್ವವಿದ್ಯಾಲಯದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ಆಸಕ್ತ ಆಟಗಾರರು 17.11.2022ರೊಳಗೆ 20 ವರ್ಷ ತುಂಬಿರಬೇಕು, 70 ಕೆ.ಜಿ. ತೂಕದ ಒಳಗಿರಬೇಕು. ಕಡ್ಡಾಯವಾಗಿ 2 ಭಾವಚಿತ್ರ ಮತ್ತು ಆಧಾರ್ ಕಾರ್ಡ್ ತರಬೇಕು. ಮೈಸೂರು ಜಿಲ್ಲೆಗೆ ಒಳಪಟ್ಟವರಾಗಿರಬೇಕು. ಹೆಚ್ಚಿನ ಮಾಹಿತಿಗೆ ಮೊ. 9591933699, 9902435251 ಸಂಪರ್ಕಿಸಬಹುದು.

ಸಣ್ಣ ಫ್ಲಾಟ್‌ನಲ್ಲಿ ಇರ್ತಾರಂತೆ ಬ್ರಿಟನ್ ಪ್ರಧಾನಿ ರಿಷಿ ಸುನಾಕ್



ಲಂಡನ್, ಅ.28– ಬ್ರಿಟನ್ ನೂತನ ಪ್ರಧಾನಿ ರಿಷಿ ಸುನಾಕ್ ಅವರ ಕುಟುಂಬವು ಈ ಮೊದಲಿನ ತಮ್ಮ ಸಣ್ಣ ಫ್ಲಾಟ್‌ಗೆ ಮರಳಲಿದೆ ಎಂದು ವಕ್ತಾರರು ಮಾಹಿತಿ ನೀಡಿದ್ದಾರೆ.

ಸುನಾಕ್ ಅವರ ಕುಟುಂಬವು 10 ಡೌನಿಂಗ್ ಸ್ಟ್ರೀಟ್ ನಿವಾಸಕ್ಕೆ ಬದಲಾಗಿ ತಮ್ಮ ಸಣ್ಣ ಫ್ಲಾಟ್‌ಗೆ ತೆರಳಿದ್ದಾರೆ. ಅಲ್ಲಿ ಅವರು ಸಂತೋಷವಾಗಿದ್ದಾರೆ ಎಂದು ವಕ್ತಾರರು ತಿಳಿಸಿದ್ದಾರೆ. 10 ಡೌನಿಂಗ್ ಸ್ಟ್ರೀಟ್, 1735 ರಿಂದ ಬ್ರಿಟಿಷ್ ಪ್ರಧಾನ ಮಂತ್ರಿಗಳ ನಿವಾಸವಾಗಿದೆ. ಇದು ಮೂರು ವ್ಯವಸ್ಥೆಯನ್ನು ಒಳಗೊಂಡಿದೆ. ಪ್ರಧಾನ ಮಂತ್ರಿಯ ಅಧಿಕೃತ ನಿವಾಸ, ಅವರ ಕಚೇರಿ ಮತ್ತು ಪ್ರಧಾನ ಮಂತ್ರಿ, ವಿಶ್ವ ನಾಯಕರು ಹಾಗೂ ರಾಜಮನೆತನದ ಅತಿಥಿಗಳನ್ನು ಸತ್ಕಾರ ಮಾಡುವ ವ್ಯವಸ್ಥೆ ಇಲ್ಲಿದೆ.

ಸುನಾಕ್ ಅವರು ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅವರ ಚಾನ್ಸೆಲರ್ ಆಗಿದ್ದಾಗ, ತಮ್ಮ ಪತ್ನಿ ಅಕ್ಷತಾ ಮೂರ್ತಿ ಮತ್ತು ಇಬ್ಬರು ಪುತ್ರಿಯರೊಂದಿಗೆ ಸಣ್ಣ ಫ್ಲಾಟ್‌ನಲ್ಲಿ ತಂಗಿದ್ದರು. ಈಚಿನ ವರ್ಷಗಳಲ್ಲಿ ಅನೇಕ ಪ್ರಧಾನ ಮಂತ್ರಿಗಳು ತಮ್ಮ ಕುಟುಂಬದೊಂದಿಗೆ ಅಧಿಕೃತವಾಗಿ ಕುಲಪತಿಗಾಗಿ ಗೊತ್ತುಪಡಿಸಿದ 11 ಕ್ಕಿಂತ ಹೆಚ್ಚಿನ ದೊಡ್ಡ ಫ್ಲಾಟ್‌ನಲ್ಲಿ ವಾಸಿಸುತ್ತಾರೆ.

ರಾಜ್ಯದಲ್ಲಿ 5 ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ



ಹುಬ್ಬಳ್ಳಿ, ಅ.28– ರಾಜ್ಯದಲ್ಲಿ ಶೀಘ್ರದಲ್ಲೇ ಐದು ಹೊಸ ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿದೆ ಎಂದು ಸಚಿವ ಮುರುಗೇಶ್ ನಿರಾಣಿ ಹೇಳಿದ್ದಾರೆ.

ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ 18 ತಿಂಗಳಲ್ಲಿ ರಾಜ್ಯದಲ್ಲಿ ಐದು ಏರ್‌ಪೋರ್ಟ್ ನಿರ್ಮಾಣ ಮಾಡಲು ನಮ್ಮ ಸರ್ಕಾರ ಮುಂದಾಗಿದ್ದು, ದಾವಣಗೆರೆ, ಬಾಗಲಕೋಟೆ, ಬಾದಾಮಿ, ಕೊಪ್ಪಳ, ರಾಯಚೂರು, ಚಿಕ್ಕಮಗಳೂರಿನಲ್ಲಿ ಏರ್‌ಪೋರ್ಟ್ ನಿರ್ಮಾಣ ಆರಂಭಗೊಳ್ಳಲಿದೆ ಎಂದರು. ಜಾಗತಿಕ ಸಮಾವೇಶ ಸಿದ್ಧತೆ ಕುರಿತು ಮಾಹಿತಿ ನೀಡಿದ ಸಚಿವರು, ಬೆಂಗಳೂರಿನಲ್ಲಿ ಜಾಗತಿಕ ಸಮಾವೇಶ ಪ್ರಾರಂಭವಾಗಲಿದ್ದು, ಕಳೆದ ಒಂದು ವರ್ಷದಿಂದ ತಯಾರಿ ಆರಂಭವಾಗಿದೆ. ನವೆಂಬರ್‌ನಲ್ಲಿ ಜಾಗತಿಕ ಸಮಾವೇಶ ನಡೆಯಲಿದೆ. ಕರ್ನಾಟಕಕ್ಕೆ ಅತೀ ಹೆಚ್ಚು ಬಂಡವಾಳ ಬಂದಿದೆ. ಇದು ಹೆಮ್ಮೆಯ ವಿಷಯ. ನಾವು ಅನೇಕ ಕಡೆ ಕರ್ನಾಟಕದ ಕೈಗಾರಿಕಾ ನೀತಿ ತಿಳಿಸಿದ್ದೇವೆ. 5 ಲಕ್ಷ ಜನರಿಗೆ ಉದ್ಯೋಗ ಸಿಗುವ ಪ್ರಯತ್ನ ಮಾಡಿದ್ದೇವೆ ಎಂದರು. ಕರ್ನಾಟಕಕ್ಕೆ ಐದು ಲಕ್ಷ ಕೋಟಿ ರೂ. ಹೂಡಿಕೆ ಹರಿದು ಬರಲಿದೆ. ಕೈಗಾರಿಕೆಗಾಗಿ 50 ಸಾವಿರ ಎಕರೆ ಭೂಮಿ ವಶಪಡಿಸಿಕೊಳ್ಳಲಾಗಿದೆ. ಬೆಂಗಳೂರು ಸುತ್ತ ಮುತ್ತ 20 ಸಾವಿರ ಎಕರೆ, ಉಳಿದ ಭಾಗದಲ್ಲಿ ಕೈಗಾರಿಕೆಗಾಗಿ ಭೂಮಿ ವಶಪಡಿಸಿಕೊಳ್ಳಲಾಗಿದೆ. ಸ್ಥಗಿತಗೊಂಡಿರುವ ಕಾರ್ಖಾನೆಗಳನ್ನು ಮತ್ತೆ ಪ್ರಾರಂಭ ಮಾಡಲು ಮುಂದಾಗಿ ದ್ದೇವೆ. ಆದರೆ ಬೆಂಗಳೂರಲ್ಲಿ ಹೊಸ ಕಾರ್ಖಾನೆ ನಿರ್ಮಾಣಕ್ಕೆ ನಾವು ಸಬ್ಸಿಡಿ ಕೊಡುತ್ತಿಲ್ಲ. ಬಿಯಾಂಡ್ ಬೆಂಗಳೂರು ಬರುವ ಕಾರ್ಖಾನೆಗಳಿಗೆ ನಾವು ಸೌಲಭ್ಯ ಕೊಡುತ್ತಿದ್ದೇವೆ ಎಂದರು.

ಬಿಜೆಪಿ ಮುಖಂಡ ಜಯಪ್ರಕಾಶ್ ಹುಟ್ಟುಹಬ್ಬ ಆಚರಣೆ



ಮೈಸೂರು, ಅ.28(ಆರ್‌ಕೆ)–ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಇಂದು ಬಿಜೆಪಿ ಮುಖಂಡ ಹಾಗೂ ಚಲನಚಿತ್ರ ನಟ ಜಯಪ್ರಕಾಶ್(ಜೆಪಿ) ಅವರು ತಮ್ಮ ಹುಟ್ಟುಹಬ್ಬವನ್ನು ಸ್ನೇಹಿತರು, ಅಭಿಮಾನಿಗಳೊಂದಿಗೆ ಆಚರಿಸಿಕೊಂಡರು.

ಜನ್ಮ ದಿನದ ಅಂಗವಾಗಿ ಏರ್ಪಡಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿಗೆ ಆರೋಗ್ಯ ತಪಾಸಣೆ ಮಾಡಿದ ಸರ್ಕಾರಿ ಆಯುರ್ವೇದ, ಕೆ.ಆರ್., ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ ವೈದ್ಯರು ಚಿಕಿತ್ಸೆನೀಡಿದರು. ಮೇಯರ್ ಶಿವಕುಮಾರ್, ಶಾಸಕ ಎಲ್‌ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಕಾರ್ಪೋರೇಟರ್‌ಗಳಾದ ಎಸ್‌ಬಿಎಂ ಮಂಜು, ಭಾಗ್ಯ ಮಹದೇಶ, ಮುಖಂಡ ಸಿ.ಮಹದೇಶ, ಬಿಜೆಪಿ ಕಾರ್ಯಕರ್ತರು ಜನ್ಮ ದಿನಾಚರಣೆಯಲ್ಲಿ ಪಾಲ್ಗೊಂಡು ಜಯಪ್ರಕಾಶ್ ಅವರಿಗೆ ಶುಭ ಕೋರಿದರು.

ಮಕ್ಕಳಿಗೆ ಲೈಂಗಿಕ ಶಿಕ್ಷಣ ಅನಿವಾರ್ಯ

ಡಯಟ್ ಹಿರಿಯ ಉಪನ್ಯಾಸಕಿ ಜಯಂತಿ ಪ್ರತಿಪಾದನೆ

ಮೈಸೂರು, ಅ.28(ಜಿಎ)– ನಮ್ಮ ದೇಶದಲ್ಲಿ ಹೆಚ್ಚು ಮಡಿವಂತಿಕೆ ಇರುವುದರಿಂದ ಮಕ್ಕಳಿಗೆ ಇಂದಿಗೂ ಲೈಂಗಿಕ ಶಿಕ್ಷಣ ಕುರಿತು ತಿಳಿಸುವಲ್ಲಿ ಹಿಂದುಳಿದಿದ್ದೇವೆ. ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯ ಪುಸ್ತಕದಲ್ಲಿ ಇರುವುದನ್ನು ಹೊರತುಪಡಿಸಿದ ಶಿಕ್ಷಣ ನೀಡಬೇಕಿದೆ ಎಂದು ಡಯಟ್ ಹಿರಿಯ ಉಪನ್ಯಾಸಕಿ ಎನ್. ಜಯಂತಿ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ವಿಜಯನಗರದ ಸಾಹಿತ್ಯ ಭವನದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳು' ವಿಷಯದ ಕುರಿತು ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇತ್ತೀಚೆಗೆ ಮಂಡ್ಯದ ಮಳವಳ್ಳಿಯಲ್ಲಿ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ ಕೊಲೆ ಪ್ರಕರಣ ನೋಡುತ್ತಿದ್ದರೆ, ಮನುಷ್ಯನ ಮನಸ್ಥಿತಿಯೂ ಎಷ್ಟು ವಿಕೃತವಾಗುತ್ತಿದೆ ಎಂಬ ಆತಂಕ ಹೆಚ್ಚುತ್ತಿದೆ. ಯಾವುದೇ ಅತ್ಯಾಚಾರ ಪ್ರಕರಣಗಳು ನಡೆದರು ಹೆಣ್ಣನ್ನೇ ತಪ್ಪಿತಸ್ಥರ ಭಾವನೆಯಲ್ಲಿ ನೋಡಿ ಚರ್ಚೆಗಳನ್ನು ಮಾಡುತ್ತೇವೆ. ಅದರ ಬದಲು ಆಕೆಗೆ ಧೈರ್ಯ ತುಂಬುವ ಕಾರ್ಯಗಳು ನಡೆಯಬೇಕಿದೆ ಎಂದರು.



ಸಮಾಜದಲ್ಲಿ ಗಂಡು ಹೆಚ್ಚೋ ಅಥವಾ ಹೆಣ್ಣು ಹೆಚ್ಚೋ ಎಂಬುದರ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ. ಮಾನವ ಮುಖ್ಯ ಎಂಬ ಸಂದೇಶವನ್ನು ಸಾರುವ ಅಗತ್ಯವಿದೆ. ಇಂದಿನ ಸಮಸ್ಯೆಗಳ ಬಗ್ಗೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳಿಗೆ ಗುಡ್ ಬ್ಯಾಡ್ ಟಚ್ ಬಗ್ಗೆ ಹಾಗೂ ಪ್ರೌಢಾವಸ್ಥೆಗೆ ಮಕ್ಕಳು ಬಂದಾಗ ಅವರಲ್ಲಿ ಆಗುವ ಬದಲಾವಣೆಗಳ ಕುರಿತು ಅರಿವು ಮೂಡಿಸಬೇಕು. ಶಾಲೆಗಳಲ್ಲಿ ನಾವು ಇದನ್ನು ಕಲಿಸಲು ಮುಜುಗರ ಪಟ್ಟುಕೊಂಡು ಕೇವಲ ಪಠ್ಯಪುಸ್ತಕದಲ್ಲಿರುವುದನ್ನು ಕಲಿಸುತ್ತಿದ್ದೇವೆ ಎಂದು ತಿಳಿಸಿದರು.

ದೇಶದಲ್ಲಿ ನಡೆಯುತ್ತಿರುವ ಈ ರೀತಿ ಪ್ರಕರಣಗಳ ಬಗ್ಗೆ ಗಮನಹರಿಸಿದರೆ ಅದರಲ್ಲಿ ಆರೋಪಿಗಳಲ್ಲಿ ತುಂಬಾ ಶ್ರೀಮಂತರು ಇಲ್ಲವೆ ಬಡವರ ಮಕ್ಕಳು ಕಾಣಿಸಿಕೊಳ್ಳುತ್ತಿದ್ದಾರೆ. ಅವರ ಪೋಷಕರು ಮಕ್ಕಳ ಮೇಲೆ ಗಮನಹರಿಸದಿರುವುದು ಇದಕ್ಕೆ ಮುಖ್ಯ ಕಾರಣವಾಗಿದ್ದು, ಇವುಗಳನ್ನು ಗಮನಿಸಿ ಮಕ್ಕಳಿಗೆ ವೈದ್ಯರ ಸಮಾಲೋಚನೆ ಕೊಡಿಸಬೇಕು ಎಂದು ಸಲಹೆ ನೀಡಿದರು. ದೇಶದ ನ್ಯಾಯಾಂಗ, ಶಾಸಕಾಂಗ ಮತ್ತು ಸಾಮಾಜಿಕ ವ್ಯವಸ್ಥೆ ಈ ರೀತಿ ಪ್ರಕರಣದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು. ಹಾಗೇ ಇಡೀ ಸಮಾಜ ಎಚ್ಚರಗೊಳ್ಳುವುದರ ಜೊತೆಗೆ ಶಿಕ್ಷಣ ವ್ಯವಸ್ಥೆ ಬಲಶಾಲಿಯಾಗಬೇಕು ಎಂದು ತಿಳಿಸಿದರು. ನಂತರ ಶರಣ ಸಾಹಿತ್ಯ ಚಿಂತಕ ಹೆಚ್.ಸಿ.ಶಿವಬುದ್ಧಿ ಮಾತನಾಡಿ, ತಂದೆ–ತಾಯಿ ಯಾವ ರೀತಿಯ ಸಂಸ್ಕೃತಿಯನ್ನು ಬೆಳೆಸಿಕೊಂಡಿರುತ್ತಾರೋ ಅದೇ ರೀತಿ ಸಂಸ್ಕೃತಿಯನ್ನು ಮಕ್ಕಳು ಪಾಲಿಸುತ್ತಾರೆ ಈ ಹಿನ್ನೆಲೆಯಲ್ಲಿ ಪೋಷಕರು ಮೊದಲು ಉತ್ತಮ ಸಂಸ್ಕೃತಿಯನ್ನು ರೂಢಿಸಿಕೊಳ್ಳಬೇಕಿದ್ದು, ಇತ್ತೀಚಿನ ದಿನಗಳಲ್ಲಿ ಚಲನಚಿತ್ರಗಳು ಮಕ್ಕಳ ಮನಸ್ಸಿನ ಮೇಲೆ ಹೆಚ್ಚು ಪ್ರಭಾವ ಬೀರುತ್ತಿವೆ ಎಂದರು. ಇಸ್ಲಾಂ ರಾಷ್ಟ್ರಗಳಲ್ಲಿ ಅತ್ಯಾಚಾರ ಪ್ರಕರಣ ಕಡಿಮೆ. ಏಕೆಂದರೆ ಅಲ್ಲಿ ಈ ರೀತಿಯ ಪ್ರಕರಣಗಳಿಗೆ ಕಠಿಣ ಶಿಕ್ಷೆ ನೀಡುವ ಮೂಲಕ ಎಚ್ಚರಿಸುತ್ತವೆ. ನಮ್ಮಲ್ಲಿಯೂ ರಾಜಕೀಯ, ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರದಲ್ಲಿರುವ ಅನೇಕ ಗೋಮುಖವ್ಯಾಘ್ರಗಳ ಮುಖವಾಡ ಪೋಕ್ಸೋ ಕಾಯ್ದೆಯಿಂದ ಹೊರ ಬಂದಿದೆ. ಆದರೆ, ನ್ಯಾಯಾಂಗ ವ್ಯವಸ್ಥೆ ಮೂಲಕ ಮತ್ತಷ್ಟು ಕಠಿಣ ಕ್ರಮ ಆಗಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಖ್ಯಾತ ವಕೀಲೆ ಎಂ.ಪೂರ್ಣಿಮಾ, ರೈತ ಸಂಘದ ಅಧ್ಯಕ್ಷ ಕಣೇನೂರು ಜಗದೀಶ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಬಸವ ರಾಜೇಂದ್ರ ಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪಿರಿಯಾಪಟ್ಟಣ ಬಳಿ ನೂತನ ಪಶು ಆಹಾರ ಘಟಕಕ್ಕೆ ಭೂಮಿ ಪೂಜೆ

ಶಾಸಕ ಕೆ.ಮಹದೇವ್‌ಗೆ ಕೆಲಸ ಮಾಡುವ ಬದ್ಧತೆ ಇದೆ

ಶಾಸಕರನ್ನು ಹಾಡಿ ಹೊಗಳಿದ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್



ಪಿರಿಯಾಪಟ್ಟಣ, ಅ.28– ಜನಪ್ರತಿನಿಧಿಗಳಿಗೆ ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಜನಸೇವೆ ಮಾಡುವ ಬದ್ಧತೆ ಇರಬೇಕು. ಆ ರೀತಿ ಬದ್ಧತೆಯಿಂದ ಕೆಲಸ ಮಾಡುವ ಶಾಸಕರಿದ್ದರೆ ಅದು ಶಾಸಕ ಕೆ.ಮಹದೇವ್ ಮಾತ್ರ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹೊಗಳಿದರು.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ಬೆಂಗಳೂರು ಹಾಗೂ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ವತಿಯಿಂದ ತಾಲೂಕಿನ ಸತ್ತೇಗಾಲ ಗ್ರಾಮದಲ್ಲಿ 150 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಪಶು ಆಹಾರ ಘಟಕಕ್ಕೆ ಭೂಮಿ ಪೂಜಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಿಮ್ಮ ಆಶೀರ್ವಾದದಿಂದ ಶಾಸಕರಾಗಿ ಆಯ್ಕೆಯಾಗಿರುವ ಕೆ.ಮಹದೇವ್ ಅವರು, ನಿಮ್ಮ ಋಣ ತೀರಿಸಲು ಶ್ರಮಿಸುತ್ತಿದ್ದಾರೆ. ಇಂತಹ ಸೇವಾ ಮನೋಭಾವ ಹಾಗೂ ಬದ್ಧತೆ ಇರುವ ಶಾಸಕನನ್ನು ನಾನು ಇದುವರೆಗೂ ಕಂಡಿಲ್ಲ. ಅದರಲ್ಲೂ ಶಾಸಕ ಕೆ.ಮಹದೇವ್ ಗುಮಾಸ್ತನಂತೆ ಟೇಬಲ್‌ನಿಂದ ಟೇಬಲ್‌ಗೆ ಅಲೆದಾಡಿ ನಿಮ್ಮ ತಾಲೂಕಿಗೆ ಅನುದಾನವನ್ನು ತರಲು ಕಟಿಬದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಚುನಾವಣೆವರೆಗೆ ಮಾತ್ರ ಪಕ್ಷ, ನಂತರ ಪ್ರತಿಯೊಬ್ಬ ಜನಪ್ರತಿನಿಧಿಗೂ ಸೇವಾ ಮನೋಭಾವ ಮುಖ್ಯ ಎಂದ ಸಚಿವರು, ಸರ್ಕಾರ ನ.1ರಂದು ಮತ್ತೆ ಯಶಸ್ವಿನಿ ಯೋಜನೆಗೆ ಚಾಲನೆ ನೀಡಲಿದ್ದು, ಎಲ್ಲ ಸಹಕಾರಿಗಳು ಇದರ ಸದುಪಯೋಗಪಡೆಯಬೇಕು ಎಂದರು.

ಶಾಸಕ ಕೆ.ಮಹದೇವ್ ಮಾತನಾಡಿ, ರಾಜ್ಯದಲ್ಲಿ ನಮ್ಮ ಸರ್ಕಾರ ಇಲ್ಲದಿದ್ದರೂ ರೈತರು, ಹಾಲು ಉತ್ಪಾದಕರ ಏಳಿಗೆಗಾಗಿ ಸಚಿವರ ಮನೆ ಬಾಗಿಲಿಗೆ ಹೋಗಿ ಅನುದಾನ ತಂದು ಕೆಲಸ ಮಾಡುತ್ತಿದ್ದೇನೆ. ಆದರಲ್ಲೂ ಸಚಿವ ಸೋಮಶೇಖರ್ ಅವರು ಕ್ಷೇತ್ರಕ್ಕೆ ಬಹಳಷ್ಟು ಅನುದಾನ ನೀಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ. ಯಾರೋ ಮಾಡಿದ ತಪ್ಪಿಗಾಗಿ ಪಟ್ಟಣದಲ್ಲಿ ಮಸಣಿಕಮ್ಮ ದೇವಸ್ಥಾನದ ಅಭಿವೃದ್ಧಿ ಕುಂಠಿತವಾಗಿದೆ. ಈಗ ದೇವಸ್ಥಾನದ ಅಭಿವೃದ್ಧಿ ಕಾರ್ಯ ಮುಂದುವರೆದಿದ್ದು, 12 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ ಸಿದ್ಧವಾಗುತ್ತಿದೆ. ಯಾರು ಅಪಪ್ರಚಾರಕ್ಕೆ ಕಿವಿಗೊಡಬೇಡಿ. ವಿರೋಧ ಪಕ್ಷದವರ ಟೀಕೆಗೆ ಒಳಗಾಗಿ ನಾನು ಒತ್ತಡದಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದು ಭಾವುಕರಾದರು.

ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಮಾತನಾಡಿ, ಆಹಾರ ಬೆಳೆ ಸೇರಿದಂತೆ ವಾಣಿಜ್ಯ ಬೆಳೆಗಳನ್ನು ಬೆಳೆದು ರೈತರು ನಷ್ಟ ಅನುಭವಿಸುತ್ತಾರೆ. ಆದರೆ ಹೈನುಗಾರಿಕೆಯಲ್ಲಿ ನಷ್ಟ ಹೊಂದಿದ ರೈತನ ಉದಾಹರಣೆ ಇಲ್ಲ. ಆದ್ದರಿಂದ ಪ್ರತಿಯೊಬ್ಬ ರೈತರು ತಮ್ಮ ಆರ್ಥಿಕ ಸ್ಥಿತಿಗತಿ ಉತ್ತಮಪಡಿಸಿಕೊಳ್ಳಲು ಹೈನುಗಾರಿಕೆ ಅವಲಂಬಿಸಬೇಕು. ನಾನು ಅಧ್ಯಕ್ಷನಾದ ಬಳಿಕ ಇಲ್ಲಿವರೆಗೆ ರೈತರಿಗೆ ಹಾಲಿನ ದರ 5 ರೂ. ಹೆಚ್ಚಳ ಮಾಡಿದ್ದೇನೆ. ಸರ್ಕಾರದ ಯಶಸ್ವಿನಿ ಯೋಜನೆ ಜಾರಿಯಾಗುತ್ತಿದೆ. ಪ್ರತಿಯೊಬ್ಬ ರೈತರು ಇದರ ಸದುಪಯೋಗ ಪಡೆಯಬೇಕು ಎಂದರು.

ಮೈಮುಲ್ ವತಿಯಿಂದ 10 ಕೋಟಿ ರೂ. ವೆಚ್ಚದಲ್ಲಿ ಮೈಸೂರಲ್ಲಿ 250 ಕೊಠಡಿಗಳ ಮಹಿಳಾ ಹಾಸ್ಟೆಲ್ ನಿರ್ಮಿಸುವ ಯೋಜನೆ ಹೊಂದಿದ್ದು, ಮುಂದಿನ ದಿನಗಳಲ್ಲಿ ಇದಕ್ಕೆ ಚಾಲನೆ ನೀಡಲಾಗುವುದು. ತಾಲೂಕಿನ ರೈತರು ಹೆಚ್ಚಾಗಿ ಜೋಳ ಬೆಳೆಯುತ್ತಿದ್ದು, ಜೋಳಕ್ಕೆ ಬೆಂಬಲ ಬೆಲೆ ಸಿಗದ ಹಿನ್ನೆಲೆಯಲ್ಲಿ ಪಶು ಆಹಾರ ಘಟಕ ಸ್ಥಾಪಿಸಲು ಉದ್ದೇಶಿಸಿ, ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳದ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರಲ್ಲಿ ಈ ಬಗ್ಗೆ ಮನವಿ ಮಾಡಿದ್ದೇವು. ಅವರ ಸಹಕಾರದಿಂದ ಇಲ್ಲಿ ಈ ಘಟಕ ಪ್ರಾರಂಭವಾಗುತ್ತಿದೆ ಎಂದರು.

ಕೆಎಂಎಫ್ ವ್ಯವಸ್ಥಾಪಕ ಸತೀಶ್ ಮಾತನಾಡಿ, ಸಂಸ್ಥೆ ಈಗಾಗಲೇ 26 ಲಕ್ಷ ರೈತರಿಂದ 94 ಲಕ್ಷ ಲೀಟರ್ ಹಾಲನ್ನು ಖರೀದಿಸುತ್ತಿದ್ದು, ಸಂಸ್ಥೆಯಲ್ಲಿ 2 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಈ ಮಹಾಮಂಡಳದಿಂದ 150ಕ್ಕೂ ಹೆಚ್ಚು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಅಲ್ಲದೇ ರೈತರಿಂದ 8 ಲಕ್ಷ ಲೀಟರ್ ಹಾಲು ಸರಬರಾಜು ಕಡಿಮೆಯಾಗಿದೆ. ಆದ್ದರಿಂದ ಸರ್ಕಾರ ರೈತರ ನೆರವಿಗೆ ಧಾವಿಸಬೇಕೆಂದು ಮನವಿ ಮಾಡಿದರು.

ಸಮಾರಂಭದಲ್ಲಿ ಶಾಸಕ ಜಿ.ಟಿ.ದೇವೇಗೌಡ, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡರಾದ ಆರ್.ಟಿ.ಸತೀಶ್, ವಿಕ್ರಂರಾಜ್, ಮೈಮುಲ್ ನಿರ್ದೇಶಕರು ಹಾಗೂ ಗ್ರಾಮಸ್ಥರು ಸೇರಿದಂತೆ ರೈತರು ಇದ್ದರು.

ಬಸ್ ಹರಿದು ಬಾಲಕ ಸಾವು



ನಂಜನಗೂಡು, ಅ.28– ಹಿಮ್ಮುಖವಾಗಿ ಚಲಿಸುತ್ತಿದ್ದ ಬಸ್ ಹತ್ತಲು ಹೋದ ಬಾಲಕನ ಮೇಲೆ ಬಸ್ ಹರಿದು ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಹಳೇಬಸ್ ನಿಲ್ದಾಣದಲ್ಲಿ ಶುಕ್ರವಾರ ನಡೆದಿದೆ.

ಸರಗೂರು ತಾಲೂಕಿನ ನಂಜೀಪುರ ಗ್ರಾಮದ ಪ್ರಕಾಶ್ ಎಂಬುವರ ಪುತ್ರ ಪ್ರಜ್ವಲ್(14) ಸಾವನ್ನಪ್ಪಿದವರು. ಪ್ರಕಾಶ್ ಅವರು ತಿ.ನರಸೀಪುರದಲ್ಲಿರುವ ತನ್ನ ಅಣ್ಣನಿಗೆ ಬೈಕ್ ಕೊಡಲು ಮಗ ಪ್ರಜ್ವಲ್‌ನೊಂದಿಗೆ ಬಂದಿದ್ದರು. ಬೈಕ್ ನೀಡಿ ವಾಪಸ್ ಊರಿಗೆ ಹೋಗಲು ಮಗನೊಂದಿಗೆ ನಂಜನಗೂಡಿನ ಹಳೇ ಬಸ್ ನಿಲ್ದಾಣಕ್ಕೆ ಆಗಮಿಸಿದ ಪ್ರಕಾಶ್ ಸರಗೂರಿಗೆ ತೆರಳುವ ಬಸ್ ಹತ್ತಿದ್ದಾರೆ. ಪ್ರಜ್ವಲ್ ಬಸ್ ಹತ್ತುತ್ತಿದ್ದ ವೇಳೆ ಚಾಲಕ ಅಜಾಗರೂಕತೆಯಿಂದ ಇದ್ದಕ್ಕಿದ್ದಂತೆ ಹಿಮ್ಮುಖವಾಗಿ ಬಸ್ ಚಾಲನೆ ಮಾಡಿದ್ದರಿಂದ ಕಾಲು ಜಾರಿ ಕೆಳಗೆ ಬಿದ್ದ ಪ್ರಜ್ವಲ್ ಮೇಲೆ ಬಸ್ ಹಿಂಭಾಗದ ಚಕ್ರ ಹರಿದಿದೆ. ಪರಿಣಾಮ ತೀವ್ರ ಗಾಯಗೊಂಡ ಬಾಲಕ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ನಗರದ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನದಿಗೆ ಹಾರಿ ವೃದ್ಧ ಆತ್ಮಹತ್ಯೆ



ಹುಣಸೂರು, ಅ.28– ಜೀವನದಲ್ಲಿ ಜಿಗುಪ್ಸೆಗೊಂಡ ವೃದ್ಧನೋರ್ವ ಲಕ್ಷ್ಮಣತೀರ್ಥ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ. ನಗರದ ಮೂರೂರಮ್ಮ ಬಡಾವಣೆ ನಿವಾಸಿ, ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ನರಸಿಂಹ ಅವರ ತಂದೆ ವೆಂಕಟಪ್ಪ (75) ಆತ್ಮಹತ್ಯೆ ಮಾಡಿಕೊಂಡವರು. ಇವರು ದೀಪಾವಳಿ ಹಬ್ಬದಂದು ಲಕ್ಷ್ಮಣತೀರ್ಥ ನದಿಯ ಹೊಸ ಸೇತುವೆ ಮೇಲಿಂದ ನದಿಗೆ ಹಾರಿದ್ದನ್ನು ಸ್ಥಳದಲ್ಲಿದ್ದವರು ನೋಡಿ ನಗರದ ಪೊಲೀಸ್ ಠಾಣೆಗೆ ವಿಷಯ ಮುಟ್ಟಿಸಿದ್ದರು.

ಈ ವೇಳೆ ಸ್ಥಳಕ್ಕಾಗಮಿಸಿ ಪರಿಶೀಲಿಸಿದ್ದ ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಮತ್ತು ಎಎಸ್‌ಐ ರಮೇಶ್ ತಮ್ಮ ಸಿಬ್ಬಂದಿಗಳು, ಕಳೆದ 2 ದಿನಗಳಿಂದ ನದಿಯಲ್ಲಿ ಶವಕ್ಕಾಗಿ ನುರಿತ ಈಜುಗಾರರಿಂದ ಹುಡುಕಾಟ ನಡೆಸಿದ್ದರು. ಇಂದು ಮಧ್ಯಾಹ್ನ 2 ಗಂಟೆಗೆ ನದಿಯಿಂದ ಮೃತದೇಹ ಹೊರತೆಗೆಯಲಾಯಿತು. ಪ್ರಕರಣ ದಾಖಲಿಸಿಕೊಂಡಿರುವ ನಗರ ಠಾಣೆ ಪೊಲೀಸರು ಮರಣೋತ್ತರ ಪರೀಕ್ಷೆ ನಂತರ ಶವವನ್ನು ವಾರಸುದಾರರಿಗೆ ಒಪ್ಪಿಸಿದರು.

ಇಂದು ನಂ.ಗೂಡಿಗೆ ಬಿಜೆಪಿ ರಾಜ್ಯಾಧ್ಯಕ್ಷ



ನಂಜನಗೂಡು, ಅ.28– ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಅ.29 ರಂದು ನಂಜನಗೂಡಿಗೆ ಭೇಟಿ ನೀಡಿ, ಸರಣಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ವೇಳೆ ನಡೆಯುವ ಸಭೆಯಲ್ಲಿ, ಕ್ಷೇತ್ರದಲ್ಲಿ ಪಕ್ಷವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯಾಧ್ಯಕ್ಷರ ಸಲಹೆ ಪಡೆಯಲಾಗುವುದು ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದ್ದಾರೆ.

ಓಬಿಸಿ ಮೋರ್ಚಾ ಸಭೆಯಲ್ಲಿ ಪಾಲ್ಗೊಳ್ಳಲಿರುವ ಕಟೀಲ್ ಅವರು ಪೌರಕಾರ್ಮಿಕರ ಕಾಲೋನಿಗೆ ಭೇಟಿ ನೀಡಲಿದ್ದು, ಅಂಬೇಡ್ಕರ್ ಪ್ರತಿಮೆ ಹಾಗೂ ವಾಲ್ಮೀಕಿ ಭವನಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ಅವರಿಗೆ ಸನ್ಮಾನ ಆಯೋಜಿಸಲಾಗಿದೆ. ನಂತರ ಅವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಶಾಸಕರು ತಿಳಿಸಿದ್ದಾರೆ. ನಂಜನಗೂಡಿಗೆ ಸಚಿವ ಬಿ. ಶ್ರೀರಾಮುಲು ಅವರ ಅನೌಪಚಾರಿಕ ಭೇಟಿ ನೀಡಿದ ಕುರಿತು ಪ್ರಸ್ತಾಪಿಸಿದ ಹರ್ಷವರ್ಧನ್, ನ.20 ರಂದು ಬಳ್ಳಾರಿಯಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಎಸ್ಟಿ ಸಮಾವೇಶಕ್ಕೆ ಹಾಜರಾಗುವಂತೆ ಅವರು ತಮ್ಮನ್ನು ಆಹ್ವಾನಿಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ, ಹತ್ಯೆ ಖಂಡಿಸಿ ಪ್ರತಿಭಟನೆ



ತಿ.ನರಸೀಪುರ, ಅ.28– ಮಳವಳ್ಳಿಯಲ್ಲಿ ಬಾಲಕಿ ಮೇಲೆ ಅತ್ಯಾಚಾರ ನಡೆಸಿ, ಹತ್ಯೆಗೈದಿರುವ ಘಟನೆ ಖಂಡಿಸಿ ತಾಲೂಕಿನ ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಪಟ್ಟಣದ ವಿದ್ಯೋದಯ ವೃತ್ತದಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆ ನಗರದ ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ತಾಲೂಕು ಕಚೇರಿಗೆ ತಲುಪಿ ತಹಸೀಲ್ದಾರ್ ಸಿ.ಜಿ.ಗೀತಾ ಅವರಿಗೆ ಮನವಿ ಸಲ್ಲಿಸಿದರು.

ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠ ರಾಜ್‌ಗೌಡ ಮಾತನಾಡಿ, ಮುಗ್ಧ ಮಕ್ಕಳ ಮೇಲೆ ಅಮಾನವೀಯ ಕೃತ್ಯ ಎಸಗುವ ಕಾಮುಕರಿಗೆ ಕಠಿಣ ಶಿಕ್ಷೆ ಆಗಬೇಕು. ಕಾಮುಕರಿಗೆ ವಿಧಿಸುವ ಶಿಕ್ಷೆ ಕಂಡು ಬೇರೆ ಯಾರೂ ಕೂಡ ಇಂತಹ ಕೃತ್ಯ ಮಾಡಲು ಭಯ ಪಡಬೇಕು. ಅಂತಹ ಶಿಕ್ಷೆಗೆ ಅಪರಾಧಿಗಳನ್ನು ಗುರಿಪಡಿಸಬೇಕು ಎಂದು ಆಗ್ರಹಿಸಿದರು. ಇಂತಹ ಪ್ರಕರಣಗಳಲ್ಲಿ ಆರೋಪಿಗಳನ್ನು ತ್ವರಿತ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಸಿ, ಗಲ್ಲು ಶಿಕ್ಷೆ ವಿಧಿಸಬೇಕು ಎಂದರು.

ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಇದು ಅತ್ಯಂತ ಹೇಯ ಕೃತ್ಯ. ಸಣ್ಣ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಅಕ್ಷಮ್ಯ ಅಪರಾಧ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುವವರಿಗೆ ಗಲ್ಲು ಶಿಕ್ಷೆ ಖಾಯಂ ಮಾಡಿ ಪೋಕ್ಸೋ ಕಾಯ್ದೆ ತಿದ್ದುಪಡಿ ಮಾಡಬೇಕಿದೆ ಎಂದರು.

ಪ್ರತಿಭಟನೆಯಲ್ಲಿ ಪುರಸಭಾಧ್ಯಕ್ಷ ಮದನ್‌ರಾಜ್, ಕಬ್ಬು ಬೆಳೆಗಾರರ ಸಂಘದ ಶಂಕರ್, ಪ್ರಸಾದ್ ನಾಯಕ್, ಡಿಎಸ್‌ಎಸ್ ಮುಖಂಡ ರಾಜಶೇಖರ್, ದಯಾನಂದ ಪಾಟೀಲ್, ಸೋಮು ದಾದಾ, ಸರೋಜಮ್ಮ, ಸಿದ್ದು, ಸುರೇಶ್, ಪುರಸಭಾ ಸದಸ್ಯ ನಂಜುಂಡಸ್ವಾಮಿ, ಮಹದೇವಸ್ವಾಮಿ, ಆಟೋ ಚಾಲಕರು ಹಾಗೂ ಕಾರು ಚಾಲಕರು, ವಿದ್ಯಾರ್ಥಿಗಳು ಸೇರಿದಂತೆ ಇತರರಿದ್ದರು.

ಗಂಧದಗುಡಿ ಚಿತ್ರ ಬಿಡುಗಡೆ: ಕಪ್ಪು ಚಿರತೆ ದತ್ತು ಪಡೆದ ಶಾಸಕ ಬಿ.ಹರ್ಷವರ್ಧನ್



ಮಲ್ಕುಂಡಿ, ಅ.28– ನಟ ಡಾ.ಪುನೀತ್ ರಾಜಕುಮಾರ್ ಅವರ 'ಗಂಧದಗುಡಿ' ಚಿತ್ರ ಬಿಡುಗಡೆ ಹಾಗೂ ದಲಿತ ಪ್ಯಾಂಥರ್ಸ್ ಮೂವ್‌ಮೆಂಟ್ ಸಂಘಟನೆ ಸ್ಮರಣಾರ್ಥ ಶಾಸಕ ಬಿ.ಹರ್ಷವರ್ಧನ್ ಅವರು ನಂಜನಗೂಡಿನ ಜನತೆ ಹೆಸರಿನಲ್ಲಿ ಮೈಸೂರು ಮೃಗಾಲಯದ ಬ್ಲ್ಯಾಕ್ ಪ್ಯಾಂಥರ್ (ಕಪ್ಪು ಚಿರತೆ) ಅನ್ನು ದತ್ತು ಪಡೆದಿದ್ದಾರೆ.

ಅ.28ರಿಂದ 2023ರ ಅ.27ರವರೆಗೆ ಬ್ಲಾಕ್ ಪ್ಯಾಂಥರ್ ದತ್ತು ಪಡೆದಿರುವ ಅವರು, ಈ ಸಂಬಂಧ ಮೃಗಾಲಯ ಪ್ರಾಧಿಕಾರಕ್ಕೆ 50 ಸಾವಿರ ರೂ. ಚೆಕ್ ಅನ್ನು ಪಾವತಿಸಿದ್ದಾರೆ. ಈ ಕುರಿತು ಮಾತನಾಡಿದ ಶಾಸಕ ಬಿ.ಹರ್ಷವರ್ಧನ್ ನಟ ಡಾ.ಪುನೀತ್ ರಾಜಕುಮಾರ್ ನಾಡು ನುಡಿಯ ಹಿರಿಮೆ ಸಾರುವ ಜೊತೆಗೆ, ಪರಿಸರ ಪ್ರೇಮಿಯಾಗಿ ವನ್ಯಜೀವಿ ಹಾಗೂ ಪ್ರಕೃತಿ ಸಂಪತ್ತಿನ ಸಂರಕ್ಷಣೆ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಅವರ ಅಭಿನಯದ 'ಗಂಧದಗುಡಿ' ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿರುವ ಹಾಗೂ 70ರ ದಶಕದಲ್ಲಿ ಮಹಾರಾಷ್ಟ್ರದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಚಿಂತನೆಗಳಿಂದ ಪ್ರೇರೇಪಿತರಾಗಿದ್ದ ಯುವ ಜನರು ದಲಿತ ಪ್ಯಾಂಥರ್ ಮೂವ್ ಮೆಂಟ್ (ಡಿಪಿಎಂ) ಪ್ರಾರಂಭಿಸಿ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಪ್ರತಿರೋಧ ತೋರಿ ಭಾರತದ ರಾಜಕೀಯದಲ್ಲಿ ಮಹತ್ವದ ಹೆಜ್ಜೆ ಗುರುತು ಮೂಡಿಸಿದ್ದರು. ಈ ಸಂಘಟನೆ ಚಿಹ್ನೆ ಕೂಡ ಕಪ್ಪು ಚಿರತೆಯಾಗಿತ್ತು. ಇದರ ಸಂಸ್ಮರಣೆ ನಿಮಿತ್ತ ಮೈಸೂರು ಮೃಗಾಲಯದಲ್ಲಿ ಬ್ಲ್ಯಾಕ್ ಪ್ಯಾಂಥರ್ (ಕಪ್ಪು ಚಿರತೆ) ಅನ್ನು ನಂಜನಗೂಡು ವಿಧಾನಸಭಾ ಕ್ಷೇತ್ರದ ಜನರ ಹೆಸರಿನಲ್ಲಿ ದತ್ತು ಸ್ವೀಕರಿಸಲಾಗಿದೆ ಎಂದು ತಿಳಿಸಿದರು. ಇನ್ನು ಮನುಷ್ಯರಂತೆ ಪ್ರಾಣಿ, ಪಕ್ಷಿಗಳೂ ಜೀವಿಸುವ ಹಕ್ಕು ಹೊಂದಿವೆ. ಮೈಸೂರು ಮೃಗಾಲಯದಲ್ಲಿ ದೇಶ–ವಿದೇಶಗಳ ಹಲವು ಪ್ರಭೇದದ ಪ್ರಾಣಿ ಪಕ್ಷಿಗಳಿವೆ. ಅವುಗಳನ್ನು ಮೈಸೂರು ಮೃಗಾಲಯದಲ್ಲಿ ಉತ್ತಮ ರೀತಿ ನಿರ್ವಹಣೆ ಮಾಡಲಾಗುತ್ತಿದೆ. ವಿಶ್ವದ ಹಲವೆಡೆ ಮೃಗಾಲಯಗಳಿದ್ದರೂ ಮೈಸೂರು ಮೃಗಾಲಯ ವಿಭಿನ್ನವಾಗಿದ್ದು, ಪ್ರಾಣಿ ಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದೆ. ಹೀಗಾಗಿ ಬ್ಲ್ಯಾಕ್ ಪ್ಯಾಂಥರ್ ಅನ್ನು ಒಂದು ವರ್ಷದ ನಿರ್ವಹಣೆಯ ವೆಚ್ಚ ಪಾವತಿಸಿ ದತ್ತು ಸ್ವೀಕರಿಸಿದ್ದಾಗಿ ತಿಳಿಸಿದರು.



ಮೈಸೂರಿನ ಚಾರ್ಟೆಡ್ ಅಕೌಂಟೆಂಟ್ ಎಂ.ಶಿವಕುಮಾರ್ ಅವರು ತಮ್ಮ ಹುಟ್ಟೂರು ತಿ.ನರಸೀಪುರ ತಾಲೂಕಿನ ಕೋಣಗಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನಲಿಕಲಿ ಕಾರ್ಯಕ್ರಮಕ್ಕಾಗಿ ಉಚಿತವಾಗಿ ಟೇಬಲ್ ಹಾಗೂ ಶಾಲಾಬ್ಯಾಗ್ ನೀಡಿದರು. ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷ ಮಹದೇವಯ್ಯ, ಗ್ರಾಪಂ ಸದಸ್ಯ ಮಹೇಶ್, ಮುಖಂಡರಾದ ನಂಜುಂಡೇಗೌಡ, ಮುಖ್ಯಶಿಕ್ಷಕ ಎಂ.ರಮೇಶ್, ದೊಡ್ಡಬಾಗಿಲು ಶಾಲೆಯ ಮುಖ್ಯಶಿಕ್ಷಕ ಕೆ.ಕೆಂಪರಾಜು, ಅಂಗನವಾಡಿ ಕಾರ್ಯಕರ್ತೆ ಕೆ.ರಂಜಿತ, ಆಶಾ ಕಾರ್ಯಕರ್ತೆ ಶಾರದಮ್ಮ ಇತರರಿದ್ದರು.



ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ ತಾಲೂಕು ಆಡಳಿತದಿಂದ ಕೋಟಿ ಕಂಠ ಗಾಯನ ಕಾರ್ಯಕ್ರಮ ನಡೆಯಿತು. ಈ ವೇಳೆ ತಹಶೀಲ್ದಾರ್ ಎಂ.ಶಿವಮೂರ್ತಿ, ತಾಪಂ ಇಓ ಶ್ರೀನಿವಾಸ್, ನಗರಸಭಾ ಆಯುಕ್ತ ರಾಜಣ್ಣ, ತಾಲೂಕು ಕಸಾಪ ಅಧ್ಯಕ್ಷೆ ಲತಾ, ವಿದ್ಯಾರ್ಥಿಗಳು ಹಾಜರಿದ್ದರು.

ಡಿಸೆಂಬರ್ ಅಂತ್ಯದೊಳಗೆ ಸಾರ್ವಜನಿಕ ಆಸ್ಪತ್ರೆ ಲೋಕಾರ್ಪಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಸಚಿವ ಡಾ.ಕೆ.ಸುಧಾಕರ್



ಹುಣಸೂರು, ಅ.28– ನಗರದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯ ಅನುದಾನ ನೀಡಿ, ಮೂಲ ಸೌಕರ್ಯ ಒದಗಿಸಿ ಡಿಸೆಂಬರ್ ಅಂತ್ಯದೊಳಗೆ ಲೋಕಾರ್ಪಣೆಗೊಳಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ನಗರದಲ್ಲಿ 32 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಸಾರ್ವಜನಿಕ ಆಸ್ಪತ್ರೆ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, 2018ರಲ್ಲಿ 100 ಹಾಸಿಗೆಗಳ ಆಸ್ಪತ್ರೆಗಾಗಿ 25 ಕೋಟಿ ರೂ. ಅನುದಾನ ಬಿಡುಗಡೆಯಾಗಿತ್ತು. ನಂತರದ ದಿನಗಳಲ್ಲಿ ಸಾರ್ವಜನಿಕರ ಒತ್ತಾಯದ ಮೇರೆಗೆ ಆಸ್ಪತ್ರೆಯನ್ನು 135 ಹಾಸಿಗೆಗೆ ಹೆಚ್ಚಳ, ಸ್ಥಳ ಬದಲಾವಣೆ, ಅನುದಾನ ಕೊರತೆ ಸೇರಿದಂತೆ ತಾಂತ್ರಿಕ ಕಾರಣದಿಂದ ಕಾಮಗಾರಿ ಒಂದೂವರೆ ವರ್ಷಗಳ ಕಾಲ ವಿಳಂಬವಾಯಿತು. ಈ ಸಂಬಂಧ ಸದನದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ಪ್ರಶ್ನಿಸಿದಾಗ, ಸ್ಥಳ ಪರಿಶೀಲಿಸಿ ಹೆಚ್ಚುವರಿ ಅನುದಾನ ನೀಡುವುದಾಗಿ ಉತ್ತರಿಸಿದ್ದೆ. ಅದರಂತೆ ಇಂದು ಸ್ಥಳ ಪರಿಶೀಲಿಸಿದ್ದು, ಕಾಮಗಾರಿಗೆ ಅವಶ್ಯವಿರುವ ಹೆಚ್ಚುವರಿ ಅನುದಾನ 7 ಕೋಟಿ ರೂ. ಬಿಡುಗಡೆ ಮಾಡಲಾಗುವುದು. ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರು ಒಂದೂವರೆ ತಿಂಗಳು ಕಾಲಾವಕಾಶ ಕೇಳಿದ್ದಾರೆ. ಡಿಸೆಂಬರ್ ಅಂತ್ಯಕ್ಕೆ ಆಸ್ಪತ್ರೆಯನ್ನು ಸಾರ್ವಜನಿಕ ಸೇವೆಗೆ ನೀಡಲಾಗುವುದು ಎಂದರು. ನೂತನ ಆಸ್ಪತ್ರೆ ಕಾರ್ಯಾರಂಭವಾದ ನಂತರ ಹಳೇ ಕಟ್ಟಡದಲ್ಲಿ 30 ಹಾಸಿಗೆವುಳ್ಳ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭಿಸಲಾಗುವುದು ಎಂದರು. ನಾವು ಸಚಿವರಾದ ಮೇಲೆ ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಶೇ.85ರಷ್ಟು ಡಾಕ್ಟರ್ ಮತ್ತು ಸಿಬ್ಬಂದಿಗಳನ್ನು ನೇಮಿಸಿದ್ದೇವೆ. ಇನ್ನು ಕೇವಲ 15 ರಷ್ಟು ಕೊರತೆ ಇದ್ದು, ಅದನ್ನು ಸದ್ಯದಲ್ಲೇ ಸರಿದೂಗಿಸಲಾಗುವುದು. ಅಲ್ಲದೆ ಸಿಬ್ಬಂದಿ ಕೊರತೆ ಇರುವ ಕಡೆ ಪ್ಯಾರಾಮೆಡಿಕಲ್ ತರಬೇತಿ ಮಾಡಿದವರನ್ನು ಸಹ ನೇಮಿಸಲಾಗಿದೆ ಎಂದರು.

ನರ್ಸಿಂಗ್ ಕಾಲೇಜು ಪ್ರಾರಂಭಿಸಿ: ಈ ನೂತನ ಆಸ್ಪತ್ರೆಯಲ್ಲಿ ಹುಣಸೂರು, ಪಿರಿಯಾಪಟ್ಟಣ, ಕೋಟೆ, ಕೆ.ಆರ್.ನಗರ 4 ತಾಲೂಕುಗಳಿಗೆ ಅನುಕೂಲವಾಗುವ ರೀತಿ ನರ್ಸಿಂಗ್ ಕಾಲೇಜನ್ನು ಪ್ರಾರಂಭಿಸಬೇಕೆಂದು ಸಾರ್ವಜನಿಕರು ಮತ್ತು ನಗರಸಭಾ ಸದಸ್ಯರು ಒತ್ತಾಯಿಸಿದಾಗ, ಮುಂದಿನ ದಿನಗಳಲ್ಲಿ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ಪ್ರಯತ್ನಿಸಲಾಗುವುದು ಎಂದರು.

ಈ ವೇಳೆ ಶಾಸಕ ಹೆಚ್.ಪಿ.ಮಂಜುನಾಥ್, ಸಂಸದ ಪ್ರತಾಪ್ ಸಿಂಹ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮುಖ್ಯ ಅಭಿಯಂತರ ಜಿ.ಅಂಜಪ್ಪ, ಕಾರ್ಯಪಾಲಕ ಅಭಿಯಂತರ ಎಂ.ಬಿ.ಶ್ರೀನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರ ಬಿ.ದೊರೆಸ್ವಾಮಿ, ಸಹಾಯಕ ಅಭಿಯಂತರ ಸಿ.ಎಸ್.ಶ್ರೀನಿವಾಸ್, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸರ್ವೇಶ್ ರಾಜ್ ಅರಸ್, ತಾಲೂಕು ಆರೋಗ್ಯಾಧಿಕಾರಿ ಡಾ.ಕೀರ್ತಿಕುಮಾರ್, ಬೆಂಗಳೂರಿನ ಅರುಣ ಕನ್‌ಸ್ಟ್ರಕ್ಷನ್ ಪ್ರೈ. ಪ್ರಧಾನ ವ್ಯವಸ್ಥಾಪಕ ಎನ್.ಪಿ.ವಿಜಯೇಂದ್ರ, ನಗರಸಭಾ ಮುಖ್ಯ ಲೆಕ್ಕಾಧಿಕಾರಿ ಪುಟ್ಟರಾಜು, ಸದಸ್ಯರಾದ ಗಣೇಶ್ ಕುಮಾರಸ್ವಾಮಿ, ಸ್ವಾಮಿಗೌಡ, ರಮೇಶ್, ಜಾಕೀರ್, ಆಂಡಿ ಅಸ್ಲಾಂ, ಮುಖಂಡರಾದ ರಾಜು, ಶಿವರಾಜೇಗೌಡ, ರಾಘು, ಪ್ರಭಾಕರ್ ಇನ್ನಿತರರಿದ್ದರು.

ಮೈಸೂರು ರೇಸುಗಳು–2022



17ನೇ ದಿನ, ಶನಿವಾರ 29–10–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.00 ಗಂಟೆಗೆ)

I. C.ಶಾಶಾಚಲಂ ಮೆಮೋರಿಯಲ್ ಟ್ರೋಫಿ ಡಿ2–1600 ಮೀ. ರೇಟೆಡ್ 20ರಿಂದ45. ಮ.1.00ಕ್ಕೆ
1. ಮಿಸ್ಟಿಕ್ ಮೌಂಟೇನ್ 2. ಸಮೆಬಲವಾನ್ 3. ಎಕೊಫ್ರೆಂಡ್ಲಿ

II. ಶರಣ್ ಲಕ್ಷ್ಮಣ್ ಮೆಮೋರಿಯಲ್ ಟ್ರೋಫಿ ಡಿ1–1200 ಮೀ. ರೇಟೆಡ್ 20 ರಿಂದ 45. ಮ.1.30ಕ್ಕೆ
1. ಪಾಸ್ಟಿ ಚಿ 2. ಚಿಸಾಕ್ಸ್ 3. ವಾಲ್‌ಕೇರಿ

III. H.P.ವಿಶ್ವನಾಥನ್ ಮೆಮೊರಿಯಲ್ ಟ್ರೋಫಿ–2000 ಮೀ. ರೇಟೆಡ್ 60 ರಿಂದ 85. ಮ.2.00ಕ್ಕೆ
1 ಕೆನ್‌ಸಿಂಗ್ ಟನ್ 2 ಕೇಪಬಲ್ 3. ಗ್ಯಾರಿಸನ್

IV. C.ಶಾಶಾಚಲಂ ಮೆಮೋರಿಯಲ್ ಟ್ರೋಫಿ ಡಿ1–1600 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಸ್ಟಾರ್ ಕಾವೆಟ್ 2. ವರ್ಲ್ಡ್ ಲಿವೈಸ್ 3. ಕೊಯೊಟ್ ಗರ್ಲ್

V. R.M.ಪುಟ್ಟಣ್ಣ ಮೆಮೋರಿಯಲ್ ಟ್ರೋಫಿ–1600 ಮೀ. ರೇಟೆಡ್ 40 ರಿಂದ 65 ಮ.3.00ಕ್ಕೆ
1. ಮಿರ್ರಾ 2. ಲೋಚ್ ಲೋಮಂಡ್ 3. ಡೌವ್‌ಗ್ಲಾಸ್

VI. ಗಾಯತ್ರಿದೇವಿ ಮೆಮೋರಿಯಲ್ ಟ್ರೋಫಿ–1200 ಮೀ. 3 ವರ್ಷದ (ಟರ್ಮ್ಸ್) ಮ.3.30ಕ್ಕೆ
1. ಆರ್ಚ್‌ವೇ 2. ಅಡ್ಜಸ್ಟ್‌ಮೆಂಟ್ 3. ಬೆಲ್ಲಿಸ್ಸಿಮೊ

VII. ಮೈಸೂರು ರೇಸ್ ಕ್ಲಬ್ ಆ್ಯನಿವರ್ಸರಿ ಕಪ್–1400 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ನಾಟಿ ಡ್ಯಾನ್ಸರ್ 2. ಸೈಗಿಪೆರಿಲೋಸ್ 3. ಚಾಶಿನಿ


VIII. ಬೊಟ್ಟೊಲೊಂಡಾ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65 (ಮೈಸೂರ್ ಬೇಸ್ಡ್ ಹಾರ್ಸ್) ಸಂ.4.30ಕ್ಕೆ
1 ಪರ್ಫೆಕ್ಟ್ ಜಸ್ಟಿಸ್ 2 ಅಮೆಝೋನಿಯಾ 3. ಹಿರೋಯಿಸಮ್

IX. ಶರಣ್ ಲಕ್ಷ್ಮಣ್ ಮೆಮೋರಿಯಲ್ ಟ್ರೋಫಿ ಡಿ2–1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಬೆಲ್‌ಡೋನಾ 2. ಇಮ್‌ಪೆಕ್ಕಾಬಲ್ 3. ಲೈಟ್‌ನಿಂಗ್ ಚಾರ್ಲಿ

ದಿನದ ಅತ್ಯುತ್ತಮ	ಮಿರ್ರಾ
ಡಬ್ಬಲ್	ಪರ್ಫೆಕ್ಟ್ ಜಸ್ಟಿಸ್, ಬೆಲ್‌ಡೋನಾ
ಜಾಕ್‌ಪಾಟ್	5, 6, 7, 8 ಮತ್ತು 9
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	4, 5 ಮತ್ತು 6
III ಟ್ರಿಬಲ್	7, 8 ಮತ್ತು 9
ಎಕ್ಸ್‌ಆಕ್ಟ್	8 ಮತ್ತು 9

ಟಿಪ್‌ಸ್ಟರ್ ಪಿಜಿಸಿ

ಮಹದೇವಮ್ಮ ನಿಧನ



ತಿ.ನರಸೀಪುರ, ಅ.28– ತಾಲೂಕಿನ ದಾಸನೂರಿನ ಮಾಜಿ ಚೇರ್ಮನ್ ದಿ.ಟಿ.ಕೆ.ಪುಟ್ಟಸ್ವಾಮಿ ಅವರ ಪತ್ನಿ ಮಹದೇವಮ್ಮ(94) ಶುಕ್ರವಾರ ಸಂಜೆ ನಿಧನರಾದರು.

ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದು, ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದ ತೋಟದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ಮೂಲ ತಿಳಿಸಿದೆ.

ಕೆ.ಆರ್.ಪುರ ಇನ್ಸ್‌ಪೆಕ್ಟರ್ ನಂದೀಶ್ ಸಾವಿನ ಉನ್ನತ ತನಿಖೆಗೆ ಮಾಜಿ ಸಿಎಂ ಹೆಚ್‌ಡಿಕೆ ಆಗ್ರಹ


* ಉತ್ತರ ಭಾರತದ ಅಧಿಕಾರಿಗಳ ಉದ್ಧಟತನದಿಂದ ಇಂತಹ ಕೃತ್ಯ ಆರೋಪ
* ಬಿಜೆಪಿ ಹೈಕಮಾಂಡ್ ಕೃಪಾಕಟಾಕ್ಷದಿಂದ ವ್ಯಾಪಕ ಭ್ರಷ್ಟಾಚಾರ

ಬೆಂಗಳೂರು, ಅ.28(ಕೆಎಂಶಿ)–ಕೆ.ಆರ್.ಪುರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ನಂದೀಶ್ ಮಾನಸಿಕವಾಗಿ ನೊಂದು ಹೃದಯಾಘಾತದಿಂದ ಮೃತಪಟ್ಟ ಘಟನೆ ಹಾಗೂ ಅವರ ಸಾವಿಗೆ ಕಾರಣವಾದ ಅಂಶಗಳ ಬಗ್ಗೆ ಉನ್ನತ ಮಟ್ಟದ ತನಿಖೆ ಮಾಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯ ಸರಕಾರವನ್ನು ಒತ್ತಾಯ ಮಾಡಿದರು.

ಪಕ್ಷದ ರಾಜ್ಯ ಕಚೇರಿ ಜೆ.ಪಿ.ಭವನದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಉತ್ತರ ಭಾರತದ ಅಧಿಕಾರಿಗಳ ದರ್ಪ ಹಾಗೂ ಸರ್ಕಾರದಿಂದಲೇ ಆಗಿರುವ ಕಗ್ಗೊಲೆಯೇ ಹೊರತು ಬರೀ ಹೃದಯಾಘಾತ ಅಲ್ಲ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಲೇಬೇಕು ಎಂದು ಆಗ್ರಹಿಸಿದರು.

ಈ ಸಾವಿಗೆ ಬಿಜೆಪಿ ಹೈಕಮಾಂಡ್ ಕೃಪಾಕಟಾಕ್ಷ ಇರುವ, ಅದರಲ್ಲೂ ಉತ್ತರ ಭಾರತ ಮೂಲದ ಹಿರಿಯ ಅಧಿಕಾರಿಗಳ ಉದ್ಧಟತನ, ಕಿರುಕುಳ, ಸರ್ಕಾರದ ನಡವಳಿಕೆ, ಕಾಸಿಗಾಗಿ ಹುದ್ದೆ ಕೊಡುತ್ತಿರುವುದೇ ಕಾರಣ ಎಂದು ಹೆಚ್.ಡಿ.ಕುಮಾರಸ್ವಾಮಿ ನೇರ ಆರೋಪ ಮಾಡಿದರು.

ರಾಜ್ಯದಲ್ಲಿ ಒಂದು ದುರ್ಘಟನೆ ನಡೆದಿದೆ. ಪೊಲೀಸ್ ಅಧಿಕಾರಿಯೊಬ್ಬರು ಹೃದಯಾಘಾತದಿಂದ ತೀರಿಕೊಂಡರು. ಅಧಿಕಾರಿ ನಂದೀಶ್ ಅವರು ಹೃದಯಾಘಾತಕ್ಕೆ ಬಲಿಯಾಗಲು ಕಾರಣ ಏನು ಅನ್ನೋದು ನನ್ನ ಪ್ರಶ್ನೆ. ಅವರು ಮಾನಸಿಕ ಒತ್ತಡಕ್ಕೆ ಒಳಗಾಗಿ ಹೀಗೆ ಆಗಿದೆ ಅಂತ ಅವರ ಧರ್ಮಪತ್ನಿ ಅವರೇ ಹೇಳಿದ್ದಾರೆ. ಕೆಲಸ ಬೇಡ ಪತಿಯನ್ನು ತಂದು ಕೊಡಿ ಎಂದು ಕಣ್ಣೀರು ಹಾಕಿದ್ದಾರೆ. ಇದಕ್ಕೆ ಸರಕಾರ ಉತ್ತರ ಕೊಡಬೇಕು ಎಂದು ಅವರು ಆಗ್ರಹಿಸಿದರು. ಕೆ.ಆರ್.ಪುರಂ ಭಾಗದಲ್ಲಿ ಯಾವುದೋ ಒಂದು ಪಬ್ ಇವರ ವ್ಯಾಪ್ತಿಯಲ್ಲಿ ಇತ್ತು. ಬೆಳಗಿನ ಜಾವದವರೆಗೆ ಅದು ತೆಗೆದಿತ್ತು, ಇದಕ್ಕೆ ಈ ಪೊಲೀಸ್ ಸಹಕಾರವಿತ್ತೆಂದು ನಂದೀಶ್ ಅವರನ್ನು ಸಸ್ಪೆಂಡ್ ಮಾಡಿದ್ದಾರಂತೆ. ಸರ್ಕಾರ ಮಧ್ಯ ರಾತ್ರಿ ಒಂದು ಗಂಟೆಯವರೆಗೆ ರೆಸ್ಟೋರೆಂಟ್ ತೆರೆಯುವ ಅವಕಾಶ ಕೊಟ್ಟಿದೆ. ಆ ಪಬ್ ಎಷ್ಟೊತ್ತು ತೆಗೆದಿತ್ತು, ಅಲ್ಲಿ ಯಾರಿದ್ದರು, ರಾಜಕಾರಣಿ ಬೆಂಬಲಿಗರು ಎಷ್ಟು ಜನ ಅಲ್ಲಿ ಇದ್ದರು. ಪೊಲೀಸ್ ಅಧಿಕಾರಿಗಳು ಕೂಡ ಡಾನ್ಸ್ ಮಾಡಿದ್ದಾರೆ ಅಂತ ರಿಪೋರ್ಟ್ ಇದೆ. ಇದರ ಬಗ್ಗೆ ತನಿಖೆ ಮಾಡಬೇಕು ಎಂದು ಅವರು ಸರಕಾರವನ್ನು ಒತ್ತಾಯಿಸಿದರು. ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಅನಧಿಕೃತವಾಗಿ ಕ್ಯಾಸಿನೋ, ಮಟ್ಕಾ ದಂಧೆ ಕೂಡ ನಡೆಯುತ್ತಿದೆ. ಸರ್ಕಾರ ಮಾತ್ರ ಕಣ್ಣು ಮುಚ್ಚಿ ಕುಳಿತಿದೆ ಎಂದು ಅವರು ಆರೋಪಿಸಿದರು.



ಇನ್ಸ್‌ಪೆಕ್ಟರ್ ನಂದೀಶ್ ಹಿನ್ನೆಲೆಯನ್ನು ತಿಳಿದುಕೊಂಡಿದ್ದೇನೆ. ಹಿಂದುಳಿದ ವರ್ಗಕ್ಕೆ ಸೇರಿದ ವ್ಯಕ್ತಿ. ಸಸ್ಪೆಂಡ್ ರಿವೋಕ್‌ಗಾಗಿ ಹಲವು ಮುಖಂಡರ ಮನೆಗೂ ಹೋಗಿದ್ದರಂತೆ. ಪೊಲೀಸ್ ಅಧಿಕಾರಿ ಬಳಿ 70–80 ಲಕ್ಷ ಕೊಟ್ಟು ಪೋಸ್ಟಿಂಗ್ ಮಾಡಿ, ನಂತರ ಹೀಗೆ ಆದಾಗ ಅವರು ಎಲ್ಲಿ ಹಣ ವಸೂಲಿ ಮಾಡಬೇಕು. ತಪ್ಪು ನಿಮ್ಮದೇ ಇಟ್ಟುಕೊಂಡರೆ ಹೇಗೆ? ಸರ್ಕಾರದ ನಡವಳಿಕೆಯಿಂದ ಆದ ಕಗ್ಗೊಲೆಯೇ ಇದು. ಇದರ ಬಗ್ಗೆ ಉನ್ನತ ತನಿಖೆಯಾಗಬೇಕು ಎಂದು ಆಗ್ರಹಿಸಿದರು.

ಈ ಸರಕಾರ ನೇಮಕಾತಿ, ವರ್ಗಾವಣೆಗೆ ಲಕ್ಷಾಂತರ ಹಣ ಪಡೆದು ಕೊಳ್ಳೆ ಹೊಡೆಯುತ್ತಿದೆ. ಅದೇ ರೀತಿ ಒತ್ತಡ ತಂದು ನಂದೀಶ್ ಅವರಿಂದ ಹಣ ವಸೂಲಿ ಮಾಡಲಾಗಿದೆ. ಅವರಿಗೆ ಮಾನಸಿಕ ಕಿರುಕುಳ ನೀಡಲಾಗಿದೆ. ಬಿಜೆಪಿ ಹೈಕಮಾಂಡ್ ರಕ್ಷಣೆ ಇದೆ ಅಂತ ಹೀಗೆ ಮಾಡುತ್ತಿದ್ದಾರೆ ಹಿರಿಯ ಅಧಿಕಾರಿಗಳು ಎಂದ ಹೆಚ್‌ಡಿಕೆ ಅವರು, ಹಲವಾರು ಪ್ರಕರಣಗಳಲ್ಲಿ ಐಎಎಸ್ ಸೇರಿ ಕೆಲ ಅಧಿಕಾರಿಗಳ ಮನೆಗಳಲ್ಲಿ ಕೋಟಿ ಕೋಟಿ ಹಣ ಸಿಗುತ್ತದೆ. ನಂತರ ನೋಡಿದರೆ ಅಂತಹ ಅಧಿಕಾರಿಗಳು ಆಯಕಟ್ಟಿನ ಜಾಗಕ್ಕೆ ಬರುತ್ತಾರೆ. ಇವರೇ ದಾಳಿ ಮಾಡ್ತಾರೆ. ಅಂತಹ ವ್ಯಕ್ತಿಗಳಿಗೆ ಒಳ್ಳೊಳ್ಳೆ ಪೋಸ್ಟಿಂಗ್ ಕೊಡ್ತಾರೆ ಎಂದು ಅವರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ನನ್ನ ಸರ್ಕಾರದಲ್ಲಿ ಹೀಗೆ ಆಗಿಲ್ಲ. ಯಾಕೆಂದರೆ ಮೈತ್ರಿ ಸರ್ಕಾರ ಇತ್ತು. ಯಾವ ಕಾಲದಲ್ಲೂ ಕಾಸಿಗಾಗಿ ಹುದ್ದೆ ನೀಡುವ ಕೆಲಸ ಆಗಿಲ್ಲ. ಸಣ್ಣ–ಪುಟ್ಟ ಅಧಿಕಾರಿಗಳಿಗೆ ತೊಂದರೆ ಕೊಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಏನು ನಡೆಯುತ್ತಿದೆ ತನಿಖೆ ಆಗಲೇಬೇಕು. ಎಷ್ಟೊತ್ತು ಬಾರ್, ರೆಸ್ಟೋರೆಂಟ್, ಪಬ್ ಓಪನ್ ಇರುತ್ತವೆ. ನಂದೀಶ್ ವಿಧಾನಪರಿಷತ್ ಸದಸ್ಯರೊಬ್ಬರ ಸಂಬಂಧಿ ಎನ್ನುವ ಮಾಹಿತಿ ಇದೆ ರಾಜಕಾರಣಿಯ ಸಂಬಂಧಿ ಅಧಿಕಾರಿಗೇ ಹೀಗೆ ಆದರೆ ಯಾವ ಹಿನ್ನೆಲೆ ಇಲ್ಲದ ಅಧಿಕಾರಿಗಳ ಪರಿಸ್ಥಿತಿ ಏನು, ಗೃಹ ಸಚಿವರು ಇದಕ್ಕೆ ಉತ್ತರ ನೀಡಬೇಕು ಎಂದು ಒತ್ತಾಯಿಸಿದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಲ್ಲಪ್ಪ ಹಂಡಿಬಾಗ್ ಎಂಬ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡಾಗ ಅವರ ಪರವಾಗಿ ಹೋರಾಟ ಮಾಡಿದ್ದು ನಾವು. ಡಿವೈಎಸ್ಪಿ ಗಣಪತಿ ಅವರು ಆತ್ಮಹತ್ಯೆ ಮಾಡಿಕೊಂಡಾಗ ಅವರ ಕುಟುಂಬದ ಪರ ದನಿ ಎತ್ತಿದ್ದು ಕೂಡ ನಾವು. ಬೇರೆ ರಾಜ್ಯಗಳಿಂದ ಇಲ್ಲಿಗೆ ಬರುವ ಹಿರಿಯ ಅಧಿಕಾರಿಗಳಿಗೆ ಬಿಜೆಪಿ ಹೈಕಮಾಂಡ್ ಬೆಂಬಲ ಇದೆ. ಅದಕ್ಕೆ ಅವರು ದರ್ಪ ತೋರಿಸುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕು ಎಂದು ಅವರು ಆಗ್ರಹಿಸಿದರು.

ಸ್ವೇಚ್ಛಾಚಾರವಾಗಿ ದಂಧೆ ನಡೆಸಲು ಯಾಕೆ ಬಿಡಬೇಕು ಎನ್ನುವುದು ನನ್ನ ಪ್ರಶ್ನೆ. ರಾಮನಗರ ಜಿಲ್ಲೆಯಲ್ಲಿ ಏನಾಗುತ್ತಿದೆ ಎನ್ನುವುದು ಕೂಡ ನನಗೆ ಗೊತ್ತಿದೆ. ಎಲ್ಲಿ, ಹೇಗೆ, ಪೋಸ್ಟಿಂಗ್ ಕೊಡ್ತಾ ಇದ್ದಾರೆ ಅಂತಲೂ ಗೊತ್ತಿದೆ. ನಾನು ಹಣ ಪಡೆದು ಪೋಸ್ಟಿಂಗ್ ಕೊಟ್ಟಿದ್ದರೆ ತಲೆ ಬಾಗುತ್ತೇನೆ ಎಂದು ಅವರು ಸವಾಲು ಹಾಕಿದರು.

ಆಕಾಶದಲ್ಲಿ ಮೊಳಗಿದ ಕೋಟಿ ಕಂಠ ಗಾಯನ

ಬೆಂಗಳೂರು, ಅ.28– 67ನೇ ಕನ್ನಡ ರಾಜ್ಯೋತ್ಸವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಇಂದು ಆಯೋಜಿಸಿರುವ 'ಕೋಟಿ ಕಂಠ ಗಾಯನ' ಕಾರ್ಯಕ್ರಮಕ್ಕೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, ಆಕಾಶದಲ್ಲೂ ಗಾಯನ ಮೊಳಗಿದೆ.

ಇಂದು ಬೆಳ್ಳಂಬೆಳಗ್ಗೆಯೇ ಸ್ಪೈಸ್ ಜೆಟ್‌ನಲ್ಲಿ ವಿಮಾನದ ಸಿಬ್ಬಂದಿ ಹಾಗೂ ಪ್ರಯಾಣಿಕರು 'ಕೋಟಿ ಕಂಠ ಗಾಯನ' ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸುವ ಭಾಗವಾಗಿ ಒಟ್ಟಿಗೆ ಕನ್ನಡ ಹಾಡನ್ನು ಹಾಡಿದ್ದಾರೆ.

ವರನಟ ಡಾ. ರಾಜ್ ಕುಮಾರ್ ಹಾಡಿರುವ ಡಾ. ಹಂಸಲೇಖ ರಚಿಸಿರುವ 'ಹುಟ್ಟಿದ್ದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ಮೆಟ್ಟಿದರೆ ಕನ್ನಡ ಮಣ್ಣನ್ನು ಮೆಟ್ಟಬೇಕು' ಗೀತೆ ಹಾಡುವ ಮೂಲಕ ಕನ್ನಡ ಭಾಷೆಗೆ ನಮನ ಸಲ್ಲಿಸಲಾಯಿತು.

ರಸ್ತೆ ಅಗಲೀಕರಣ ಕಾಮಗಾರಿಗೆ ಗುದ್ದಲಿ ಪೂಜೆ



ಮೈಸೂರಿನ ಹಿನಕಲ್ ಜಂಕ್ಷನ್‌ನಿಂದ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದವರೆಗೆ ಹುಣಸೂರು ರಸ್ತೆ ಅಗಲೀಕರಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶುಕ್ರವಾರ ಗುದ್ದಲಿ ಪೂಜೆ ನೆರವೇರಿಸಿದರು. ಸಂಸದ ಪ್ರತಾಪ್ ಸಿಂಹ ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ದೀಪಾವಳಿ ಪ್ರಯುಕ್ತ ವಿಶೇಷ ಕಾರ್ಯಕ್ರಮ 'ಪರ್ಬಂತೊ ಪೊರ್ಲು'




ಮೈಸೂರು, ಅ.28(ಎಸ್‌ಪಿಎನ್)– ಬೆಳಕಿನ ಹಬ್ಬ ದೀಪಾವಳಿ ಪ್ರಯುಕ್ತ 'ಪರ್ಬಂತೊ ಪೊರ್ಲು' ವಿಶೇಷ ಕಾರ್ಯಕ್ರಮ ಶುಕ್ರವಾರ ಜರುಗಿತು.

ಮೈಸೂರು ಸರಸ್ವತಿಪುರಂನಲ್ಲಿರುವ ಶ್ರೀಕೃಷ್ಣಧಾಮದಲ್ಲಿ ಮೈಸೂರಿನ ತುಳು ಶಿವಳ್ಳಿ ಮಾಧ್ವ ಬ್ರಾಹ್ಮಣ ಮಹಾಮಂಡಲ, ಶ್ರೀ ಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀ ಕೃಷ್ಣ ಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇಂದು ಬೆಳಗಿನಿಂದಲೇ ವಿಶೇಷ ಪೂಜಾ ಕೈಂಕರ್ಯ ಕೈಗೊಳ್ಳಲಾಗಿತ್ತು. ಇಂದು ಬೆಳಗ್ಗೆ ಶ್ರೀ ಕೃಷ್ಣ ವಿಗ್ರಹವನ್ನು ವಿಶೇಷವಾಗಿ ಅಲಂಕರಿಸಿ, ವಿವಿಧ ಪೂಜೆಗಳನ್ನು ನೆರವೇರಿಸಲಾಯಿತು. ತದನಂತರ ಚಂಡೇ ಮೇಳ ವಾದನ. ನಂತರ ಬೆಂಗಳೂರು ಕರ್ನಾಟಕ ಕಲಾದರ್ಶಿನಿ ಕಲಾತಂಡದಿಂದ 'ಮೋಹಿನಿ ಭಸ್ಮಾಸುರ' ಯಕ್ಷಗಾನ ಅಮೋಘವಾಗಿ ಪ್ರದರ್ಶಿಸಲಾಯಿತು.

ನಂತರ ತುಳಸಿ ಮಾಧ್ವ ಮಹಿಳಾ ಮಂಡಳಿ ಮತ್ತು ವಿಶ್ವೇಶ ಕೃಷ್ಣ ಭಜನಾ ಮಂಡಳಿ ಭಜನಾ ಕಲಾತಂಡದಿಂದ ತುಳಸಿ ನೃತ್ಯ ಸಂಕೀರ್ತನೆ ಮನೋಜ್ಞವಾಗಿ ಮೂಡಿ ಬಂತು. ಕೊನೆಗೆ ಪಟಾಕಿ ಬಾಣ, ಬಿರುಸುಗಳ ಹಚ್ಚುವ ಮೂಲಕ 'ಪರ್ಬಂತೊ ಪೊರ್ಲು' ಕಾರ್ಯಕ್ರಮ ಮುಕ್ತಾಯಗೊಂಡಿತು. ಈ ವೇಳೆ ಮೈಸೂರಿನ ತುಳು ಶಿವಳ್ಳಿ ಮಾಧ್ವ ಬ್ರಾಹ್ಮಣ ಮಹಾಮಂಡಲದ ಗೌರವಾಧ್ಯಕ್ಷ ಕೃಷ್ಣದಾಸ್ ಪುರಾಣಿಕ್, ಅಧ್ಯಕ್ಷ ರವಿಶಾಸ್ತ್ರಿ, ಕಾರ್ಯದರ್ಶಿ ಸುಪ್ರಭ ಭಟ್, ಉಪಾಧ್ಯಕ್ಷರಾದ ಜಯರಾಂ ಭಟ್, ವಿ.ಶ್ರೀನಿವಾಸರಾವ್, ಸುಬ್ರಹ್ಮಣ್ಯ ತಂತ್ರಿ, ಪಿ.ವಿ.ನಾಗೇಶ್, ಮುಖಂಡರಾದ ಪುಟ್ಟಣ್ಣ ಭಟ್, ಸಿ.ಮೋಹನ್ ಹಾಗೂ ಸದಸ್ಯ ಎಂ.ಪ್ರಶಾಂತ್ ಇತರರು ಉಪಸ್ಥಿತರಿದ್ದರು.

ಅಪ್ಪು ಗಂಧದಗುಡಿಗೆ ಕರ್ನಾಟಕ ಹಾಲು ಒಕ್ಕೂಟದಿಂದ ವಿಶೇಷ ಶುಭ ಆರೈಕೆ

ಮೈಸೂರು, ಅ.28(ಜಿಎ)– ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಒಂದನೇ ವರ್ಷದ ಸ್ಮರಣೆಯ ಜೊತೆಗೆ ಗಂಧದಗುಡಿ ಚಿತ್ರಕ್ಕೆ ವಿಭಿನ್ನ ರೀತಿಯಲ್ಲಿ ಕರ್ನಾಟಕ ಹಾಲು ಒಕ್ಕೂಟವು ಶುಭ ಕೋರಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.



ಎಲ್ಲರ ಅಚ್ಚು ಮೆಚ್ಚಿನ ನಟ ಪುನೀತ್ ರಾಜ್‌ಕುಮಾರ್ ಅವರು ನಮ್ಮನ್ನು ಅಗಲಿ ನಾಳೆಗೆ ಒಂದು ವರ್ಷ ಪೂರ್ಣಗೊಂಡಿದ್ದು, ಇದೇ ಸಂದರ್ಭದಲ್ಲಿ ಅವರ ಕನಸಿನ ಚಿತ್ರ 'ಗಂಧದಗುಡಿ' ಚಿತ್ರವು ಇಂದು ಕರ್ನಾಟಕದಾದ್ಯಂತ ಬಿಡುಗಡೆಯಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಹಾಲು ಒಕ್ಕೂಟ ಹಾಲಿನ ಪ್ಯಾಕೆಟ್ ಮೇಲೆ 'ಗಂಧದ ಗುಡಿ ನಿಜವಾದ ನಾಯಕನ ಪಯಣ' ಎಂದು ಮುದ್ರಿಸುವ ಮೂಲಕ ವಿಶೇಷವಾಗಿ ಚಿತ್ರಕ್ಕೆ ಪ್ರೋತ್ಸಾಹ ನೀಡಿದೆ.

ಮೈಮುಲ್ (ಮೈಸೂರು ಮಿಲ್ಕ್ ಯೂನಿಯನ್ ಲಿಮಿಟೆಡ್) ಘಟಕವು ಇದಕ್ಕೆ ಸಾಥ್ ನೀಡಿದ್ದು, ಇಂದು 40 ಸಾವಿರಕ್ಕೂ ಅಧಿಕ ಪ್ಯಾಕೆಟ್‌ಗಳ ಮೇಲೆ 'ಗಂಧದಗುಡಿ ನಿಜವಾದ ನಾಯಕನ ಪಯಣ' ಎಂದು ಮುದ್ರಿಸಿ ಸರಬರಾಜು ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಇದರ ಪ್ರಮಾಣವನ್ನು ಹೆಚ್ಚಿಸಲಿದ್ದು, ಇನ್ನೂ 15 ದಿನಗಳ ಕಾಲ ಇದೇ ರೀತಿ ಹಾಲಿನ ಪ್ಯಾಕೇಟ್ ಮೇಲೆ ಮುದ್ರಿಸಿ ಸರಬರಾಜು ಮಾಡಲು ನಿರ್ಧರಿಸಿದೆ.



A. ವಿಶ್ವನಾಥ ಶೆಟ್ಟಿ
ಅಂಗಡಿ ಬೀದಿ, ನಂಜನಗೂಡು.
ಇಂದಿಗೆ ನೀವು ನಮ್ಮನ್ನಗಲಿ 13 ವರ್ಷಗಳಾದರೂ ನಿಮ್ಮ ನೆನಪು ಸದಾ ಹಸಿರಾಗಿದೆ.
ಇಂತಿ: ಕುಟುಂಬ ವರ್ಗ

4ನೇ ವರ್ಷದ ಸವಿನೆನಪು



ಶ್ರೀ–ಬಿ.ನಾಗಲಿಂಗು
S/o ಬೋರಯ್ಯ,
ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತರು: ಪತ್ನಿ ವೆಂಕಟಲಕ್ಷ್ಮಮ್ಮ ಮತ್ತು ಮಕ್ಕಳು, ಅಳಿಯ ಹಾಗೂ ಕುಟುಂಬವರ್ಗದವರು
ಜಯನಗರ, ಮೈಸೂರು–14

4ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮನ್ನು ಕಾಡುತ್ತಿದೆ.
ದುಃಖಿತಪ್ತರು: ಮೃತರ ಪತಿ ಶಿವಣ್ಣ, ನಿವೃತ್ತ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಮಕ್ಕಳು, ಕುಟುಂಬವರ್ಗ, ಚಾಮರಾಜನಗರ
ಶ್ರೀಮತಿ ನಾಗಮ್ಮ

ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀಮತಿ ಜಿ.ಎನ್ ನಾಗರತ್ನಮ್ಮ
ಇವರು ದಿನಾಂಕ: 19.10.2022 ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಶಿವಗಣಾರಾಧನಾ ಕಾರ್ಯವನ್ನು ದಿನಾಂಕ: 30.10.2022 ಭಾನುವಾರ ಮಧ್ಯಾಹ್ನ 1.30 ಗಂಟೆಗೆ ಮೈಸೂರು ಸಿಐಟಿ, ಅಗ್ರಹಾರದಲ್ಲಿರುವ ಅರಸು ಮಂಡಳಿ ಸಂಘ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಮೃತರ ಮಕ್ಕಳು ಹಾಗೂ ಕುಟುಂಬವರ್ಗದವರು

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ

ನ್ಯೂ ಸಯ್ಯಾಜಿರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಮೈಸೂರು – 570001.
ಇಮೇಲ್: gamcmysore@gmail.com ದೂರವಾಣಿ ಸಂಖ್ಯೆ: 0821–2443701

ಸಂಖ್ಯೆ:ಸಆಅ/27/ಸರಬ/2022–23 ದಿನಾಂಕ:20.10.2022

ದರಪಟ್ಟಿ ಪ್ರಕಟಣೆ

2022–23ನೇ ಸಾಲಿನಲ್ಲಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು, ಇಲ್ಲಿ ಸಾಧನ ಸಲಕರಣೆ ಹಾಗೂ ಪೀಠೋಪಕರಣಗಳ ದುರಸ್ತಿ, ಪೇಂಟಿಂಗ್ ಹಾಗೂ ಪಾಲಿಷ್ ಮಾಡಲು ದರಪಟ್ಟಿ ಮುಖಾಂತರ ಆಹ್ವಾನಿಸಲಾಗಿದೆ. ದರಪಟ್ಟಿ ಸಲ್ಲಿಸಲು ಕೊನೆಯ **ದಿನಾಂಕ: 02.11.2022 ರಂದು ಸಂಜೆ 5.00 ಗಂಟೆ** ಆಗಿರುತ್ತದೆ. ಸಾಧನ ಸಲಕರಣೆ ಹಾಗೂ ಪೀಠೋಪಕರಣಗಳ ದುರಸ್ತಿ, ಪೇಂಟಿಂಗ್ ಹಾಗೂ ಪಾಲಿಷ್ ಮಾಡಲು ಅಂದಾಜು ಮೌಲ್ಯ ರೂ.4.50 ಲಕ್ಷಗಳಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು, ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/–ಪ್ರಾಚಾರ್ಯರು
ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಸಯ್ಯಾಜಿರಾವ್ ರಸ್ತೆ, ಮೈಸೂರು–570001.

DIPR/MYS/KAVITA/603/2022-23



ಪುರಸಭೆ ಕಾರ್ಯಾಲಯ ವಿರಾಜಪೇಟೆ

ಕೊಡಗು ಜಿಲ್ಲೆ–571218

itstaff_ulb_virajpet@yahoo.com, www.virajpettown.mrc.gov.in

ಕ್ರಸಂ.ನಂ.ಪು.ವಿ/ಟೆ–06/2022–23 ದಿನಾಂಕ–25.10.2022

ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2022–23ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1ರ ನಿಯಮಗಳನುಸಾರ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karantaka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 25.10.2022 ರಿಂದ 08.11.2022 ಸಂಜೆ 17.00 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 08.11.2022 ಸಂಜೆ 17.00 ಗಂಟೆ ವರೆಗೆ
3. ಟೆಂಡರ್ ತೆರೆಯುವ ದಿನಾಂಕ : 10.11.2022 ಬೆಳಗ್ಗೆ 11.00 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ಪುರಸಭೆ ವಿರಾಜಪೇಟೆ

ಕಾಮಗಾರಿಗಳ ವಿವರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/– (ಶ್ರೀಮತಿ, ಸುಸ್ಮಿತಾ ಟಿ.ಆರ್) ಅಧ್ಯಕ್ಷರು, ಪುರಸಭೆ, ವಿರಾಜಪೇಟೆ
ಸಹಿ/– (ಶ್ರೀ ವಿನಾಯಕ ಕುಟ್ಟಪ್ಪ) ಉಪಾಧ್ಯಕ್ಷರು, ಪುರಸಭೆ, ವಿರಾಜಪೇಟೆ
ಸಹಿ/– (ಶ್ರೀ ಚಂದ್ರ ಕುಮಾರ್ ಎ) ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ

ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಜನನ : 02.10.1951 ಸ್ವರ್ಗಸ್ಥ ದಿನಾಂಕ : 29-10-2018
ಶ್ರೀಮತಿ ಕೆ.ಸಿ.ಸುನಂದಮ್ಮ
ಲೇ|| ಕೆ.ಎನ್.ರಾಘವೇಂದ್ರರವರ ಧರ್ಮಪತ್ನಿ
ಸಿದ್ಧಾರ್ಥನಗರ, ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷವಾದರೂ ಸದಾ ನಿಮ್ಮನ್ನು ಸ್ಮರಿಸುತ್ತಾ ನೀವು ತೋರಿದ ಮಾರ್ಗದಲ್ಲಿ ನಡೆಯುತ್ತಿರುವ

ದು:ಖತಪ್ತರು
ಮಕ್ಕಳು, ಮೊಮ್ಮಕ್ಕಳು ಮತ್ತು ಸೊಸೆ
ಶ್ರೀ. ನಾಗಶಯನ ಆರ್.,
ಅಬಕಾರಿ ಉಪ ಆಯುಕ್ತರು, ಚಾಮರಾಜನಗರ ಜಿಲ್ಲೆ
ಶ್ರೀಮತಿ ಡಾ|| ಕವಿತ ಬಿ.ಟಿ., ಐ.ಪಿ.ಎಸ್
ಪೊಲೀಸ್ ಅಧೀಕ್ಷಕರು, ಡಿಸಿಆರ್‌ಇ, ಮೈಸೂರು
ಕು. ನಿಳಿಂಪ ಕೆ.ಎನ್.,
ಚಿ. ಕೃಷ್ಣ ಆತ್ರೇಯ ಕೆ.ಎನ್.,
ಶ್ರೀ. ಆರ್. ಶ್ರೀಹರ್ಷ ಹಾಗೂ
ಶ್ರೀ. ಆರ್. ಲಕ್ಷ್ಮೀಶ